ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 28 ಭಾನುವಾರ 2023

ಸಂಪುಟ: 44 | ಸಂಚಿಕೆ: 42 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿದ್ದರಾಮಯ್ಯ ಸಂಪುಟ ಭರ್ತಿ

ಮೊದಲು ಸಿಎಂ, ಡಿಸಿಎಂ ಸೇರಿ 10; ಮತ್ತೆ 24 ಮಂದಿ ಸೇರ್ಪಡೆ

● ಶನಿವಾರ ನೂತನ ಸಚಿವರು ರಾಜಭವನದಲ್ಲಿ ಪ್ರಮಾಣವಚನ ಸ್ವೀಕಾರ; ಏಕೈಕ ಮಹಿಳಾ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ● ಎಲ್ಲಾ ಸಚಿವರೂ ಸಂಪುಟ ದರ್ಜೆ ಸಚಿವರೇ; 11 ಮಂದಿ ಹೊಸಬರು, ಇಬ್ಬರು ಮಾಜಿ ಮುಖ್ಯಮಂತ್ರಿಗಳ ಪುತ್ರರು ● ಹಲವು ಹಿರಿಯ ಶಾಸಕರಿಗೆ ಇಲ್ಲ ಸಚಿವರಾಗುವ ಭಾಗ್ಯ



ಶನಿವಾರ ಪ್ರಮಾಣ ವಚನ ಸ್ವೀಕರಿಸಿದ 24 ಮಂದಿ ನೂತನ ಸಚಿವರೊಂದಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಕಾಣಬಹುದು.

ಬೆಂಗಳೂರು, ಮೇ 27(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟ ವಿಸ್ತರಿಸಿದರು. ಹೊಸದಾಗಿ 24 ಶಾಸಕರು ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ನೂತನ ಸಚಿವರಿಗೆ ಅಧಿಕಾರ ಮತ್ತು ಗೌಪ್ಯತಾ ಪ್ರತಿಜ್ಞಾವಿಧಿ ಬೋಧಿಸಿದರು. 24 ಮಂದಿ ಸೇರ್ಪಡೆಯಿಂದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸೇರಿ ಸಚಿವ ಸಂಪುಟದ ಎಲ್ಲಾ 34 ಸ್ಥಾನಗಳು ಭರ್ತಿಯಾಗಿ, ಪೂರ್ಣ ಪ್ರಮಾಣದ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ.

ಹಿರಿಯರಾದ ಹೆಚ್.ಕೆ. ಪಾಟೀಲ್, ಕೃಷ್ಣಭೈರೇಗೌಡ, ಚಲುವರಾಯಸ್ವಾಮಿ, ಕೆ.ವೆಂಕಟೇಶ್, ಡಾ. ಹೆಚ್.ಸಿ. ಮಹದೇವಪ್ಪ, ಎಸ್.ಎಸ್.ಮಲ್ಲಿಕಾರ್ಜುನ್, ಮಧು ಬಂಗಾರಪ್ಪ, ಲಕ್ಷ್ಮಿ ಹೆಬ್ಬಾಳ್ಕರ್, ಈಶ್ವರ್ ಖಂಡ್ರೆ, ದಿನೇಶ್ ಗುಂಡೂರಾವ್, ಶರಣಬಸಪ್ಪ ದರ್ಶನಾಪೂರ್, ಶಿವಾನಂದ ಪಾಟೀಲ್, ಆರ್.ಬಿ. ತಿಮ್ಮಾಪೂರ, ಶಿವರಾಜ್ ತಂಗಡಗಿ, ಡಾ. ಶರಣಪ್ರಕಾಶ್ ಪಾಟೀಲ್, ಮಂಕಾಳ ವೈದ್ಯ, ರಹೀಂ ಖಾನ್, ಡಿ. ಸುಧಾಕರ್, ಸಂತೋಷ್ ಲಾಡ್, ಭೈರತಿ ಸುರೇಶ್, ಡಾ. ಎಂ.ಸಿ. ಸುಧಾಕರ್, ಬಿ.ನಾಗೇಂದ್ರ, ಕೆ.ಎನ್. ರಾಜಣ್ಣ ಹಾಗೂ ಎನ್.ಎಸ್. ಬೋಸರಾಜು ಮಂತ್ರಿಗಳಾಗಿ ಇಂದು ಪ್ರಮಾಣವಚನ ಸ್ವೀಕರಿಸಿದರು. ಎನ್.ಎಸ್.ಬೋಸರಾಜ್ ವಿಧಾನಮಂಡಲದ ಯಾವುದೇ ಸದನದ ಸದಸ್ಯರಲ್ಲದಿದ್ದರೂ, ವರಿಷ್ಠರು ಅವರನ್ನು ಮಂತ್ರಿಯನ್ನಾಗಿ ನೇಮಿಸಿದ್ದಾರೆ.

ಸಂಪುಟ ಪೂರ್ಣ ಪ್ರಮಾಣದಲ್ಲಿ ರಚನೆಯಾಗುತ್ತಿದ್ದಂತೆ ಮಂತ್ರಿಯಾಗಲು ಅವಕಾಶ ಸಿಗದ ಹಿರಿಯರಾದ ಬಿ.ಕೆ. ಹರಿಪ್ರಸಾದ್, ರುದ್ರಪ್ಪ ಲಮಾಣಿ, ಪುಟ್ಟರಂಗಶೆಟ್ಟಿ ಸೇರಿದಂತೆ ಕೆಲವರು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಧುಬಂಗಾರಪ್ಪ ಹಾಗೂ ದಿನೇಶ್ ಗುಂಡೂರಾವ್ ಮಾಜಿ ಮುಖ್ಯಮಂತ್ರಿಗಳ ಮಕ್ಕಳಾದರೆ, ಇದೇ ಮೊದಲ ಬಾರಿಗೆ 11 ಮಂದಿ ಸಚಿವರಾಗಿ ಸಿದ್ದರಾಮಯ್ಯ ಸಂಪುಟ ಸೇರಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಆಯ್ಕೆಗೊಂಡ ಯಾವುದೇ ಸದಸ್ಯರಿಗೂ ತಮ್ಮ ಮಂತ್ರಿಮಂಡಲದಲ್ಲಿ ಅವಕಾಶ ಮಾಡಿಕೊಟ್ಟಿಲ್ಲ. ಹಳಬರ ಜೊತೆ ಹೊಸ ಮುಖಗಳಿಗೂ ಅವಕಾಶ ಮಾಡಿಕೊಟ್ಟು, ಕೆಲವು ಘಟಾನುಘಟಿಗಳನ್ನು ಸಂಪುಟದಿಂದ ದೂರವಿರಿಸಿದ್ದಾರೆ.

ಮೂರರಿಂದ ಎಂಟು ಬಾರಿ ವಿಧಾನಸಭೆ ಪ್ರವೇಶಿಸಿದವರಿಗೆ ಅವಕಾಶ ಮಾಡಿಕೊಟ್ಟಿದ್ದರೂ, ಒಂಬತ್ತು ಬಾರಿ ವಿಧಾನಸಭೆ ಪ್ರವೇಶಿಸಿದ್ದ ಆರ್.ವಿ.ದೇಶಪಾಂಡೆ, ಆರು ಭಾರಿ ಶಾಸಕರಾಗಿರುವ ಮೈಸೂರಿನ ● 6ನೇ ಪುಟಕ್ಕೆ

ಪೂರ್ಣ ಸಂಪುಟದೊಂದಿಗೆ ಆಡಳಿತಕ್ಕೆ ಹೊಸ ರೂಪ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ● ನಮ್ಮ ಸಂಪುಟ ಹೊಸ, ಹಳೆಯ ಮುಖಗಳ ಸಮ್ಮಿಶ್ರಣ ● ಕೆಲವರಲ್ಲಿ ಅಸಮಾಧಾನವಿದ್ದರೂ ಅದರಲ್ಲೇ ಸಮಾಧಾನವಿರುತ್ತದೆ



ಬೆಂಗಳೂರು, ಮೇ 27 (ಕೆಎಂಶಿ)–ಪೂರ್ಣ ಸಂಪುಟ ರಚಿಸುವ ಮೂಲಕ ಆಡಳಿತಕ್ಕೆ ಹೊಸ ರೂಪ ಕೊಡುವ ತೀರ್ಮಾನ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಸಂಪುಟ ವಿಸ್ತರಣೆಯ ನಂತರ ಸಚಿವ ಸಂಪುಟದ ಅನೌಪಚಾರಿಕ ಸಭೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚಿಸಲಾಗಿದೆ. ಮುಖ್ಯಮಂತ್ರಿ ಹೊರತುಪಡಿಸಿ, 33 ಸ್ಥಾನಗಳನ್ನೂ ಭರ್ತಿ ಮಾಡಲಾಗಿದೆ ಎಂದರು. ಸಂಪುಟವು ಹೊಸ ಹಾಗೂ ಹಳೆ ● 6ನೇ ಪುಟಕ್ಕೆ



ಡಾ.ಹೆಚ್.ಸಿ.ಮಹದೇವಪ್ಪ



ಕೆ.ವೆಂಕಟೇಶ್



ಚೆಲುವರಾಯಸ್ವಾಮಿ

ಖಾತೆ ಹಂಚಿಕೆ: ಸಿದ್ದುಗೆ ಹಣಕಾಸು, ಡಿಕೆಶಿಗೆ ಜಲಸಂಪನ್ಮೂಲ, ಪರಂಗೆ ಗೃಹ ಇಲಾಖೆ

ಬೆಂಗಳೂರು, ಮೇ 27– ಸಿದ್ದರಾಮಯ್ಯ ಸಂಪುಟದ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಣಕಾಸು, ಗುಪ್ತಚರ, ವಾರ್ತಾ ಮತ್ತು ಇತರೆ ಯಾರಿಗೂ ಹಂಚಿಕೆಯಾಗದ ಖಾತೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮಹತ್ವದ ಜಲಸಂಪನ್ಮೂಲ ಮತ್ತು ಬೆಂಗಳೂರು ನಗರ ಅಭಿವೃದ್ಧಿ ಖಾತೆ. ಉಳಿದಂತೆ ಸಚಿವರ ಖಾತೆ ವಿವರಗಳು ಕೆಳಕಂಡಂತಿದೆ.

ಡಾ.ಜಿ.ಪರಮೇಶ್ವರ್	ಗೃಹ
ಹೆಚ್.ಕೆ. ಪಾಟೀಲ್	ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ
ಕೆ.ಹೆಚ್.ಮುನಿಯಪ್ಪ	ಆಹಾರ ಮತ್ತು ನಾಗರಿಕ ಪೂರೈಕೆ
ಕೆ.ಜೆ. ಜಾರ್ಜ್	ಇಂಧನ
ಎಂ.ಬಿ.ಪಾಟೀಲ್	ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲ ಸೌಕರ್ಯ ಅಭಿವೃದ್ಧಿ
ರಾಮಲಿಂಗಾ ರೆಡ್ಡಿ	ಸಾರಿಗೆ
ಸತೀಶ್ ಜಾರಕಿಹೊಳಿ	ಲೋಕೋಪಯೋಗಿ
ಪ್ರಿಯಾಂಕ್ ಖರ್ಗೆ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿ–ಬಿಟಿ
ಜಮೀರ್ ಅಹಮದ್	ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ ಕಲ್ಯಾಣ
ಕೃಷ್ಣ ಭೈರೇಗೌಡ	ಕಂದಾಯ
ದಿನೇಶ್ ಗುಂಡೂರಾವ್	ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಚೆಲುವರಾಯಸ್ವಾಮಿ	ಕೃಷಿ
ಕೆ. ವೆಂಕಟೇಶ್	ಪಶು ಸಂಗೋಪನಾ ಮತ್ತು ರೇಷ್ಮೆ
ಡಾ.ಹೆಚ್.ಸಿ.ಮಹದೇವಪ್ಪ	ಸಮಾಜ ಕಲ್ಯಾಣ
ಈಶ್ವರ ಖಂಡ್ರೆ	ಅರಣ್ಯ ಮತ್ತು ಪರಿಸರ
ಕೆ.ಎನ್.ರಾಜಣ್ಣ	ಸಹಕಾರ
ಶರಣಬಸಪ್ಪ ದರ್ಶನಾಪೂರ್	ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳು
ಶಿವಾನಂದ ಪಾಟೀಲ್	ಜವಳಿ, ಎಪಿಎಂಸಿ ಮತ್ತು ಸಕ್ಕರೆ
ಆರ್.ಬಿ.ತಿಮ್ಮಾಪುರ	ಅಬಕಾರಿ, ಮುಜರಾಯಿ
ಎಸ್.ಎಸ್. ಮಲ್ಲಿಕಾರ್ಜುನ	ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ
ಶಿವರಾಜ್ ತಂಗಡಗಿ	ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ
ಶರಣ ಪ್ರಕಾಶ್ ಪಾಟೀಲ್	ವೈದ್ಯಕೀಯ ಶಿಕ್ಷಣ
ಮಂಕಾಳ ವೈದ್ಯ	ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ
ಲಕ್ಷ್ಮೀ ಹೆಬ್ಬಾಳ್ಕರ್	ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಶೇಷ ಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ
ರಹೀಂ ಖಾನ್	ಪೌರಾಡಳಿತ ಮತ್ತು ಹಜ್
ಡಿ ಸುಧಾಕರ್	ಯೋಜನೆ ಮತ್ತು ಸಾಂಖ್ಯಿಕ ಇಲಾಖೆ
ಸಂತೋಷ್ ಲಾಡ್	ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ
ಎನ್.ಎಸ್.ಬೋಸರಾಜು	ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಬೈರತಿ ಸುರೇಶ್	ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಮಧು ಬಂಗಾರಪ್ಪ	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಎಂ.ಸಿ.ಸುಧಾಕರ್	ಉನ್ನತ ಶಿಕ್ಷಣ
ಬಿ. ನಾಗೇಂದ್ರ	ಯುವಜನ ಸೇವಾ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಅನುಮೋದನೆಗಾಗಿ ರಾಜ್ಯ ಸರ್ಕಾರದಿಂದ ಕಳುಹಿಸಲ್ಪಟ್ಟಿರುವ ಪಟ್ಟಿ ಇದಾಗಿದ್ದು, ಇದಕ್ಕೆ ಇನ್ನಷ್ಟೇ ರಾಜ್ಯಪಾಲರು ಅನುಮೋದನೆ ನೀಡಬೇಕಾಗಿದೆ.

ಡಿ.ಕೆ. ಶಿವಕುಮಾರ್ ಸಿಎಂ ಆಗಲು ಒಂದು ಹೆಜ್ಜೆ ಬಾಕಿ

● ಕಾಂಗ್ರೆಸ್ ಹಿರಿಯ ನಾಯಕ, ವಿಧಾನಪರಿಷತ್ ಸದಸ್ಯ ಹರಿಪ್ರಸಾದ್ ಮಹತ್ವದ ಹೇಳಿಕೆ ● ಅಧಿಕಾರ ಹಂಚಿಕೆ ಗೊತ್ತಿರುವುದು ಏಳು ಜನರಿಗೆ ಮಾತ್ರ ● ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗ್ತಾರೆ ಅಂತಲೇ ಕಾಂಗ್ರೆಸ್ಸಿಗೆ ಒಕ್ಕಲಿಗರು ವೋಟ್ ಹಾಕಿದ್ರು

ಬೆಂಗಳೂರು, ಮೇ 27–ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲು ಕೇವಲ ಒಂದು ಹೆಜ್ಜೆ ಮಾತ್ರ ಬಾಕಿ ಇದೆ ಎಂದು ಹೇಳಿರುವ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಅಧಿಕಾರ ಹಂಚಿಕೆ ವಿಷಯ ಕೇವಲ 7 ಮಂದಿಗೆ ಮಾತ್ರ ಗೊತ್ತಿದೆ. ಉಳಿದವರು ಏನೇ ಮಾತನಾಡಿದರೂ ಅದು ಕೇವಲ ಒಬ್ಬರನ್ನು ಓಲೈಸಿಕೊಳ್ಳಲು ಮಾತ್ರವಾಗಿರುತ್ತದೆಯೇ ಹೊರತು, ಅದು ಸತ್ಯಕ್ಕೆ ದೂರವಾದದ್ದೂ ಆಗಿರುತ್ತದೆ ಎಂದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ಸುರ್ಜೇವಾಲ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಮಾತ್ರ ಅಧಿಕಾರ ಹಂಚಿಕೆ ಬಗ್ಗೆ ಗೊತ್ತಿದೆ ಎಂದರು.

ಕಾಂಗ್ರೆಸ್‌ನಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂದು ಒಕ್ಕಲಿಗ ಸಮುದಾಯ ಕಾಂಗ್ರೆಸ್ ಕಡೆ ಬಂತು. ಜೆಡಿಎಸ್ ಮತಗಳೆಲ್ಲಾ ಕಾಂಗ್ರೆಸ್‌ಗೆ ವರ್ಗಾವಣೆಯಾಯಿತು. ಇದರಿಂದಾಗಿ ಜೆಡಿಎಸ್ ಕುಸಿಯಿತು ಎಂದ ಅವರು, ಒಕ್ಕಲಿಗ ಸಮುದಾಯದ ನಾಯಕತ್ವ ಕಾಂಗ್ರೆಸ್‌ಗೆ ಇರಲಿಲ್ಲ. ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಮಾಡಿದಾಗ ಅವರು ಮುಖ್ಯಮಂತ್ರಿ ಆಗುತ್ತಾರೆ ಎಂಬ ಭಾವನೆಯಿಂದ ಒಕ್ಕಲಿಗ ಮತಗಳು ಕಾಂಗ್ರೆಸ್‌ಗೆ ಬಂದವು. ಆದರೆ ಈಗ ಅವರನ್ನು ಉಪಮುಖ್ಯಮಂತ್ರಿ ಮಾಡಿದ್ದಾರೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲು ಒಂದು ಹೆಜ್ಜೆ ಮಾತ್ರ ಬಾಕಿ ಇದೆ.

ಚುನಾವಣೆ ವೇಳೆ ಕಾಂಗ್ರೆಸ್ ನೀಡಿದ ಗ್ಯಾರಂಟಿಗಳನ್ನು ನೂರಕ್ಕೆ ನೂರು ನೀಡಲಾಗುತ್ತದೆ. ಇದರಲ್ಲಿ ಯಾವುದೇ ಅನುಮಾನವಿಲ್ಲ. ಗ್ಯಾರಂಟಿಗಳ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ. ಸರ್ಕಾರದ ನೀತಿ–ನಿಯಮ ಏನು ಮಾಡಬೇಕೆಂದು ನಿರ್ಧರಿಸಲು ಸ್ವಲ್ಪ ● 6ನೇ ಪುಟಕ್ಕೆ

ನಾನು ಬಾಡಿಗೆ ಮನೆಗೆ ಬಂದವನಲ್ಲ; ಸ್ವಂತ ಮನೆಯಲ್ಲಿರುವವನು...




ಬೆಂಗಳೂರು, ಮೇ 27– ಈ ಮನೆ (ಕಾಂಗ್ರೆಸ್)ಯನ್ನು ಬಿಟ್ಟು ಹೋಗಲು ಅಥವಾ ಧ್ವಂಸ ಮಾಡಲು ನಾನು ಬಾಡಿಗೆ ಮನೆಗೆ ಬಂದವನಲ್ಲ. ಸ್ವಂತ ಮನೆಯಲ್ಲಿರುವವನು. ನಾನು ಪಕ್ಷ ಕಟ್ಟಿದವನು ಎಂದು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಮಾರ್ಮಿಕವಾಗಿ ನುಡಿದರು.

ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಬೇಸರಗೊಂಡು ವಿಧಾನಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂಬ ಸುದ್ದಿಗಳ ಬೆನ್ನಲ್ಲೇ ಪತ್ರಿಕಾಗೋಷ್ಠಿ ನಡೆಸಿದ ಅವರು, ನನ್ನ ಸಾಮಾಜಿಕ ನ್ಯಾಯದ ಸಿದ್ಧಾಂತಕ್ಕೂ, ಅಹಿಂದ ರಾಜಕೀಯಕ್ಕೂ ವ್ಯತ್ಯಾಸವಿದೆ. ಸರ್ವಧರ್ಮ ಸಮಬಾಳ್ವೆಯಲ್ಲಿ ನಂಬಿಕೆ ಇಟ್ಟವನು ನಾನು. ಕಾಂಗ್ರೆಸ್ ಸಿದ್ಧಾಂತವನ್ನು ನಂಬಿದ್ದೇನೆ. ಎಲ್ಲಿಯವರೆಗೂ ಇರು ಎನ್ನುತ್ತಾರೋ ಅಲ್ಲಿಯವರೆಗೂ ಕಾಂಗ್ರೆಸ್‌ನಲ್ಲಿ ಇರುತ್ತೇನೆ ಎಂದರು.

ಪಕ್ಷದಲ್ಲಿ ಸಕ್ರಿಯವಾಗಿರುವವರಿಗೆ ಮನ್ನಣೆ ನೀಡಬೇಕು. ಪಕ್ಷದಲ್ಲಿ ಎಲ್ಲರೂ ಅವರವರದೇ ರೀತಿಯಲ್ಲಿ ಪಕ್ಷಕ್ಕಾಗಿ ದುಡಿದಿರುತ್ತಾರೆ. ಪಕ್ಷನಿಷ್ಠೆ ಎಂಬುದು ● 6ನೇ ಪುಟಕ್ಕೆ

ಇಂದು ನೂತನ ಸಂಸತ್ ಭವನ ಉದ್ಘಾಟನೆ



ನವದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನೂತನವಾಗಿ ನಿರ್ಮಿಸಿರುವ ಸಂಸತ್ ಭವನವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾನುವಾರ ರಾಷ್ಟ್ರಕ್ಕೆ ಸಮರ್ಪಣೆ ಮಾಡಲಿದ್ದಾರೆ. ಇದರ ಅಂಗವಾಗಿ ಅದ್ದೂರಿ ಉದ್ಘಾಟನೆ ಸಮಾರಂಭ ಎರಡು ಹಂತದಲ್ಲಿ ನಡೆಯಲಿದೆ. ಸಂಸತ್ತಿನ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಮೇಲಾವರಣದೊಳಗೆ ಬೆಳಗ್ಗೆ 7.15ಕ್ಕೆ ಧಾರ್ಮಿಕ ಕಾರ್ಯಕ್ರಮ, ಹೋಮ, ಹವನ ಆರಂಭವಾಗಲಿದೆ. ಆ ನಂತರ 9 ರಿಂದ 9.30ರ ಅವಧಿಯಲ್ಲಿ ಲೋಕಸಭಾ ಸ್ಪೀಕರ್ ಕುರ್ಚಿ ಬಳಿ ಸೆಂಗೋಲ್ (ರಾಜದಂಡ) ಪ್ರತಿಷ್ಠಾಪನೆ ಮಾಡಲಾಗುವುದು. ಈ ಸಮಾರಂಭಕ್ಕಾಗಿ ಆಗಮಿಸಿರುವ ತಮಿಳುನಾಡಿನ ತಂಜಾವೂರು

ಶೃಂಗೇರಿ ಪುರೋಹಿತರಿಂದ ಧಾರ್ಮಿಕ ವಿಧಿ–ವಿಧಾನ

ಪ್ರಮುಖ ಮಠ ತಿರುವಾವಡುದುರೈ ಅಧೀನಂ ಮುಖ್ಯಸ್ಥರು ಸೆಂಗೋಲ್ ಪ್ರತಿಷ್ಠಾಪನೆ ಮಾಡಲಿದ್ದಾರೆ. 9.30ರೊಳಗೆ ಈ ಎಲ್ಲ ಕಾರ್ಯಕ್ರಮ ಅಂತ್ಯವಾಗಲಿದೆ. ನಂತರ ಪ್ರಾರ್ಥನೆ ನಡೆಯಲಿದೆ. ಶೃಂಗೇರಿಯ ಪುರೋಹಿತರು ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಶನಿವಾರ ● 6ನೇ ಪುಟಕ್ಕೆ



ಪ್ರಧಾನಿ ಮೋದಿಯವರಿಗೆ ರಾಜದಂಡ ಹಸ್ತಾಂತರಿಸಿದ ಅಧೀನಂ ಪೀಠಾಧಿಪತಿ

'ಮೈಸೂರು ಮಿತ್ರ'ನ 44ನೇ ವಾರ್ಷಿಕೋತ್ಸವದ ಬಹುಮಾನಿತ ಎರಡನೇ ಕಥೆ 'ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ತಿನಮ್ಮ...!' ಪುಟ–10

ಪ್ರೊ.ಜಿಎಚ್‌ಎನ್‌ರಿಗೆ ನುಡಿನಮನ



ಮೈಸೂರು, ಮೇ 27– ಮೈಸೂರಿನ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತತೆ) ಕನ್ನಡ ವಿಭಾಗದ ವತಿಯಿಂದ ಖ್ಯಾತ ವಿಮರ್ಶಕರಾದ ಪ್ರೊ. ಜಿ.ಎಚ್. ನಾಯಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಈ ವೇಳೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಸೂರಿನ ಇತಿಹಾಸ ತಜ್ಞ ಎ.ಎಸ್. ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಇತಿಹಾಸ ವಿಭಾಗದ ಮುಖ್ಯಸ್ಥ ಹಾಗೂ ಶೈಕ್ಷಣಿಕ ಡೀನ್ ಡಾ.ಶ್ರೀಧರ, ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಎಂ.ನಾಗೇಶ, ಸಿ.ಎಂ.ಕಿರಣ್ ಕುಮಾರ್, ಮನೋಜ್‌ಕುಮಾರ್ ಮತ್ತು ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಚಲುವರಾಯಸ್ವಾಮಿ ಅವರು ಶ್ರೀ ಆದಿಚುಂಚನಗಿರಿ ಮಠದ ಬೆಂಗಳೂರಿನ ಶಾಖಾ ಮಠಕ್ಕೆ ಭೇಟಿ ನೀಡಿ, ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಶಾಸಕರಾದ ದಿನೇಶ್ ಗೂಳಿಗೌಡ, ರವಿ ಗಣಿಗ ಜತೆ ಇದ್ದರು.



ಸಚಿವ ಸಂಪುಟದ ನೂತನ ಸಚಿವರಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ರಾಜ್ಯ ಅಹಿಂದ ಅಧ್ಯಕ್ಷ ನಜರ್‌ಬಾದ್ ನಟರಾಜ್, ಮುಖಂಡರಾದ ಕೋಳಿ ಗೋವಿಂದು, ಕುರುಬಾರಹಳ್ಳಿ ಮಹದೇವ್ ಹಾಗೂ ಡಾ.ಭರತ್‌ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

ಭಾರತೀಯ ಬಾಸ್ಕೆಟ್ ಬಾಲ್ ಫೆಡರೇಷನ್ ಅಧ್ಯಕ್ಷರಾಗಿ ಡಾ.ಕೆ.ಗೋವಿಂದರಾಜು ಆಯ್ಕೆ



ಮೈಸೂರು, ಮೇ 27– ಏಷ್ಯಾ ಬಾಸ್ಕೆಟ್ ಬಾಲ್‌ನ ನೂತನ ಅಧ್ಯಕ್ಷರಾಗಿ ಭಾರತೀಯ ಬಾಸ್ಕೆಟ್ ಬಾಲ್ ಫೆಡರೇಷನ್ ಅಧ್ಯಕ್ಷ ಡಾ.ಕೆ.ಗೋವಿಂದರಾಜು ಆಯ್ಕೆಯಾಗಿದ್ದಾರೆ. ಈ ಹುದ್ದೆಗೇರಿದ ಭಾರತದ ಮೊದಲ ವ್ಯಕ್ತಿ ಎನ್ನುವ ಹಿರಿಮೆಗೆ ಗೋವಿಂದರಾಜು ಪಾತ್ರರಾಗಿದ್ದಾರೆ. ಕನ್ನಡಿಗರೊಬ್ಬರು ಈ ಹುದ್ದೆಗೇರಿರುವುದು ರಾಜ್ಯಕ್ಕೆ ಹೆಮ್ಮೆಯ ವಿಷಯ. ನೂತನ ಫಿಬಾ ಏಷ್ಯಾ ಅಧ್ಯಕ್ಷ ಡಾ.ಕೆ.ಗೋವಿಂದರಾಜು ಅವರಿಗೆ ಸಹಕಾರಿ ಧುರೀಣ ಡಾ.ಎಂ.ಬಿ. ಮಂಜೇಗೌಡ ಅಭಿನಂದಿಸಿದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 27–ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು 2023–24ನೇ ಸಾಲಿನ CTS/TATA ವಿಭಾಗದಲ್ಲಿನ 19 ವೃತ್ತಿಗಳ 708 ಸ್ಥಾನಗಳ ಪ್ರವೇಶಕ್ಕಾಗಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಮೆರಿಟ್ ಕಮ್ ರಿಸರ್ವೇಷನ್ ಆಧಾರದ ಮೇಲೆ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಜೂ.6ರವರೆಗೆ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ www.cite.karnataka.gov.in ನಲ್ಲಿ ಅರ್ಜಿಯನ್ನು ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ:0821–2498456 ಅನ್ನು ಸಂಪರ್ಕಿಸಬಹುದು.



ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಮಧು ಬಂಗಾರಪ್ಪ ಅವರನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್. ನಾಗೇಶ್, ಪ್ರಧಾನ ಕಾರ್ಯದರ್ಶಿ ಯೋಗೇಶ್ ಉಪ್ಪಾರ್, ಉಪಾಧ್ಯಕ್ಷ ರವಿನಂದನ್ ಇನ್ನಿತರರು ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು.

ಬಿ.ಕಾಂ. ತರಗತಿಗಳಿಗೆ ವಾರಾಂತ್ಯ ಸಮಾಲೋಚನೆಗಳು

ಮೈಸೂರು,ಮೇ 27–ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2022–23ನೇ ಶೈಕ್ಷಣಿಕ ವರ್ಷದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಕಾಂ. ತರಗತಿಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಸರಸ್ವತಿಪುರಂನಲ್ಲಿರುವ ಟಿಟಿಎಲ್ ಅಧ್ಯಯನ ಕೇಂದ್ರದಲ್ಲಿ ಜೂ.27ರಿಂದ ಶನಿವಾರ, ಭಾನುವಾರ ಮತ್ತು ಸರ್ಕಾರಿ ರಜಾ ದಿನಗಳಂದು ಬೆಳಗ್ಗೆ 9 ಗಂಟೆಗೆ ವಾರಾಂತ್ಯ ಸಮಾಲೋಚನಾ ತರಗತಿಗಳನ್ನು ನಡೆಸಲಾಗುತ್ತದೆ.

ನಿಧನ

ಎಂ.ಮಹೇಶ್



ಮೈಸೂರು, ಮೇ 27– ಮೈಸೂರಿನ ಗಾಂಧಿನಗರದ ನಿವಾಸಿ ಹಾಗೂ ಹುಣಸೂರಲ್ಲಿ ನ್ಯಾಯಾಂಗ ಇಲಾಖೆಯ ಅಧಿಕಾರಿ ಎಂ. ಮಹೇಶ್ (57) ಅವರು ಅನಾರೋಗ್ಯದಿಂದ ಮೈಸೂರಿನ ಗೋಪಾಲಗೌಡ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ 12.30ರ ಸಮಯದಲ್ಲಿ ನಿಧನರಾದರು. ಮೃತರು ಪತ್ನಿ ಜಯಶೀಲ, ಮಕ್ಕಳಾದ ಎಂ. ಧನ್ಯಶ್ರೀ, ಎಂ.ಲೋಕೇಶ್ವರಿ ಹಾಗೂ ಸಹೋದರ ಎಂ. ಜಗದೀಶ್, ಸಹೋದರಿ ಎಂ. ಶೈಲಜಾ ಮುರಳೀಧರ, ಎಸ್.ಪವನ್‌ಕುಮಾರ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ನಾಳೆ (ಭಾನುವಾರ) ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಡಾ. ಡಿ.ಪಿ. ಜಯಂತ್



ಮೈಸೂರಿನ ಗೋಕುಲಂ ಮೂರನೇ ಹಂತದ ನಿವಾಸಿ, ಮಣಿಪಾಲ್ ಆಸ್ಪತ್ರೆ ವೈದ್ಯರಾದ ಡಾ. ಡಿ.ಪಿ. ಜಯಂತ್(47) ಅವರು ಮೇ 24ರಂದು ನಿಧನರಾದರು. ಮೃತರು ತಾಯಿ ಡಾ.ಪದ್ಮಾವತಮ್ಮ, ಪತ್ನಿ ಶಿಲ್ಪ ಪಾಟೀಲ್, ಪುತ್ರಿಯರಾದ ಇಂಚರ, ಅನನ್ಯ, ಸಹೋದರ ಡಾ. ಆನಂದ್ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಬದ್ಧ

ಅಭಿನಂದನಾ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ವಿಶ್ವಾಸ

ಮೈಸೂರು, ಮೇ 27 (ಸಿಎನ್)– ನನಗೆ ಪಕ್ಷಾತೀತವಾಗಿ ಮತ ನೀಡಿ ಗೆಲ್ಲಿಸಿದ್ದೀರಿ, ಚಾಮರಾಜ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ನಾನು ಬದ್ಧನಿದ್ದೇನೆ. ಈಗಾಗಲೇ ಕ್ಷೇತ್ರದ ಬಗ್ಗೆ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಬಳಿ ಚರ್ಚಿಸಿದ್ದೇನೆ. ಅಭಿವೃದ್ಧಿ ಹೊಂದಿದ ಹಾಗೂ ಹೊಂದದ ಪ್ರದೇಶಗಳ ಪಟ್ಟಿ ಪಡೆದಿದ್ದೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಹೆಚ್ಚು ಗಮನಹರಿಸುತ್ತೇನೆ ಎಂದು ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್ ಗೌಡ ಭರವಸೆ ನೀಡಿದರು.



ನಗರದ ಯೋಗನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದ ಉದ್ಯಾನವನದ ಯೋಗ ಮಂಟಪದಲ್ಲಿ, ಪುಣ್ಯಕೋಟಿ ಸೇವಾ ಟ್ರಸ್ಟ್, ಐಶ್ವರ್ಯ ಫೌಂಡೇಷನ್, ವಿ.ಎಲ್ ಡೆವಲಪರ್ಸ್ ಹಾಗೂ ಎಸ್‌ಎಲ್‌ವಿ ಬುಕ್ ಏಜೆನ್ಸಿಯಿಂದ ಆಯೋಜಿಸಲಾಗಿದ್ದ 'ಅಭಿನಂದನಾ ಸಮಾರಂಭ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಆಟೋಟವೆಂದರೆ ಕೇವಲ ಕ್ರಿಕೆಟ್, ಕಬಡ್ಡಿ, ವಾಲಿಬಾಲ್, ಫುಟ್ಬಾಲ್, ಖೋಖೋಗಳೆಂದು ತಿಳಿದಿದ್ದೇವೆ. ಆದರೆ 140ಕ್ಕೂ ಹೆಚ್ಚು ಕ್ರೀಡಾ ವಿಭಾಗಗಳಿವೆ. ಎಲ್ಲರಿಗೂ ವಿವಿಧ ರೀತಿಯ ಕ್ರೀಡಾಸಕ್ತಿ ಇರುತ್ತದೆ. ಹಾಗಾಗಿ ಇಂತಹ ಕ್ರೀಡೆಗಳನ್ನು ಚಾಮರಾಜ ಕ್ಷೇತ್ರದಲ್ಲಿ ತಂದು ಅದಕ್ಕೆ ಬೇಕಾದ ಪರಿಕರ, ಯಂತ್ರಗಳನ್ನು ಅಳವಡಿಸುವ ಚರ್ಚೆ ನಡೆದಿದೆ. ಖರ್ಚು ವೆಚ್ಚಕ್ಕೆ ಬೇರೆ ಯಾವ ನಿಧಿಯ ಅಗತ್ಯವಿಲ್ಲ. ನಮ್ಮ ಪಾಲಿಕೆಯಲ್ಲೇ ಸಾಕಷ್ಟು ತೆರಿಗೆ ಸಂಗ್ರಹವಾಗಿದ್ದು, ಆ ಹಣವನ್ನೇ ಬಳಸಿಕೊಂಡು ನಿರ್ಮಾಣಕ್ಕೆ ಮುಂದಾಗುತ್ತೇವೆ ಎಂದು ಹೇಳಿದರು.

ಮಕ್ಕಳು ತಮ್ಮ 24ನೇ ವಯಸ್ಸಿನವರೆಗೆ ಪೋಷಕರ ಮಾತುಗಳನ್ನು ಕೇಳಬೇಕು. ಆನಂತರ ಸ್ವತಂತ್ರ ನಿರ್ಧಾರ ಕೈಗೊಳ್ಳಬೇಕು. ಪೋಷಕರು ಎಂದಿಗೂ ನಿಮ್ಮ ಭವಿಷ್ಯದ ಕಾಳಜಿ ಹೊಂದಿರುತ್ತಾರೆ. ಮಕ್ಕಳ ಮನಸ್ಸು ಸೂಕ್ಷ್ಮವಾದದ್ದು ಹಾಗಾಗಿ ಪೋಷಕರು ಸಹ ಮಕ್ಕಳಿಗೆ ಹೆಚ್ಚು ಒತ್ತಡ ಹೇರಬಾರದು. ಅವರ ಪಾಡಿಗೆ ಅವರನ್ನು ಬಿಡಬೇಕು, ಒತ್ತಡ ಹಾಕಿದಷ್ಟು ಮಕ್ಕಳು ಕೈ ತಪ್ಪಿ ಹೋಗುತ್ತಾರೆ ಎಂದು ಅವರ ಬಾಲ್ಯದ ದಿನಗಳಲ್ಲಿ ತಂದೆ ಹತ್ತಿರ ಪೆಟ್ಟು ತಿಂದ ಬಗ್ಗೆ ಸ್ಮರಿಸಿಕೊಂಡರು.


ಯೋಗ ನರಸಿಂಹ ದೇವಸ್ಥಾನ ಸಂಸ್ಥಾಪಕರಾದ ನಾಡೋಜ ಭಾಷ್ಯಂ ಸ್ವಾಮೀಜಿ ಮಾತನಾಡಿ, ಶಾಸಕರೇ ಜನರ ಬಳಿ ಬಂದು ಕಷ್ಟ ಸುಖ ಆಲಿಸುತ್ತಾರೆ. ಇಂತಹ ಸರಳ ವ್ಯಕ್ತಿತ್ವದ ಶಾಸಕರು ಸಿಕ್ಕಿದ್ದು ಕ್ಷೇತ್ರದ ಜನರ ಭಾಗ್ಯ. ಹರೀಶ್ ಗೌಡ 5 ವರ್ಷದ ಹಿಂದೆಯೇ ಶಾಸಕ ಆಗಬೇಕಿತ್ತು ಆದರೆ ಈ ಬಾರಿ ಅವರಿಗೆ ದೇವರು ಹಾಗೂ ಕ್ಷೇತ್ರದ ಜನರ ಆಶೀರ್ವಾದ ಸಿಕ್ಕಿದೆ. ಅಭಿವೃದ್ಧಿ, ಜನಸೇವೆ ಮೂಲಕ ಮತದಾರರಿಗೆ ಕೃತಜ್ಞತೆ ತಿಳಿಸಬೇಕು. ಅವರಿಗೆ ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಉನ್ನತ ಸ್ಥಾನಮಾನ ದೊರಕಲಿ ಎಂದು ಆಶಿಸಿದರು.

ಶಾಸಕರಿಗೆ ಅಭಿನಂದನೆ ಸಲ್ಲಿಕೆ ಬಳಿಕ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯ 29 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ವಿತರಿಸಿ, ಸನ್ಮಾನಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ಸುಬ್ಬಯ್ಯ, ಕಿಲಾರ ಜಯರಾಮ್, ಬಿ.ಸಿ.ವಿಜಯ್‌ಕುಮಾರ್, ವಿಎಲ್ ಡೆವಲಪರ್ಸ್ ಮಾಲೀಕ ನಾಗರಾಜು ಭೈರಿ, ಐಶ್ವರ್ಯ ಫೌಂಡೇಷನ್ ಅಧ್ಯಕ್ಷ ಗೋಪಾಲಸ್ವಾಮಿ, ಎಸ್‌ಎಲ್‌ವಿ ಬುಕ್ ಏಜೆನ್ಸಿ ಮಾಲೀಕ ದಿವಾಕರ್, ಲಲಿತ ಇನ್ಫ್ರಾ ಸೆಲ್ಯೂಷನ್ ಮಾಲೀಕ ಪ್ರೊ. ಪೂರ್ಣಚಂದ್ರ ಎಲ್.ಎನ್, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಮೈ–ಚಾಮರಾಜನಗರ ಒಕ್ಕಲಿಗ ಸಂಘದ ಅಧ್ಯಕ್ಷ ಪಡುವಾರಹಳ್ಳಿ ಮರಿಸ್ವಾಮಿ, ಒಕ್ಕಲಿಗ ಸಂಘದ ಕಾರ್ಯದರ್ಶಿ ಗಂಗಾಧರ್, ಡೆಲ್ಲಿರವಿ, ಜಾನಪದ ಕಲಾವಿದ ಮಹಾಲಿಂಗು, ಸಂಸ್ಥೆ ಪದಾಧಿಕಾರಿಗಳು, ಸದಸ್ಯರು ಮತ್ತಿತರರಿದ್ದರು.

> "ಕ್ಷೇತ್ರದ ಜನತೆ ನನ್ನ ಮುಂದೆ ಹಲವು ಬೇಡಿಕೆ ಇಟ್ಟಿದ್ದು, ಅವುಗಳನ್ನು ಈಡೇರಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ಉದ್ಯಾನವನದ ಮಾದರಿಯಲ್ಲಿ, ಚಾಮರಾಜ ಕ್ಷೇತ್ರ ವ್ಯಾಪ್ತಿಯ ವಿಜಯನಗರದಲ್ಲಿ, ಹಿರಿಯ ನಾಗರಿಕರ ಉದ್ಯಾನವನ, ಬಯಲು ಜಿಮ್, ಈಜುಕೊಳ, ಸ್ಕೇಟಿಂಗ್ ಸರ್ಕಲ್ ಸೇರಿದಂತೆ ಹಲವು ಸೌಕರ್ಯಗಳ ಅನುಷ್ಠಾನ ಕುರಿತು ಚರ್ಚಿಸಿದ್ದೇನೆ. ಪಾಲಿಕೆ ಆಯುಕ್ತರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. –ಕೆ.ಹರೀಶ್‌ಗೌಡ, ಶಾಸಕ

ಅಯೋಧ್ಯೆಯಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆಗೆ ಶ್ರೀಗಳಿಂದ ಭೂಮಿಪೂಜೆ

ಅಯೋಧ್ಯೆ, ಮೇ 27– ಮೈಸೂರಿನ ಶ್ರೀ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೀಠಾಧೀಶರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಗೆ 81ನೇ ಜನ್ಮದಿನದ ಸಂಭ್ರಮ. ಸಾಮಾನ್ಯವಾಗಿ ಸ್ವಾಮೀಜಿಯವರ ಜನ್ಮದಿನವನ್ನು ಮೈಸೂರಿನ ಅವಧೂತ ದತ್ತಪೀಠದಲ್ಲಿ ಆಚರಣೆ ಮಾಡಲಾಗುತಿತ್ತು.



ಸಹಸ್ರಾರು ಭಕ್ತರು, ಸ್ವಾಮೀಜಿಯವರ ಹುಟ್ಟುಹಬ್ಬವನ್ನು ಆಚರಿಸಿ ಸಂಭ್ರಮಿಸುತ್ತಿದ್ದರು. ಈ ಸಂದರ್ಭದಲ್ಲಿ ಅನೇಕ ಧಾರ್ಮಿಕ ಕಾರ್ಯಕ್ರಮಗಳು,ಆಶ್ರಮದ ಆವರಣದಲ್ಲಿರುವ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನೆರವೇರುತ್ತಿದ್ದವು.

ಈ ಬಾರಿ ಸ್ವಾಮೀಜಿಯವರ ಅನುಪಸ್ಥಿತಿಯಲ್ಲಿ ಅವಧೂತ ದತ್ತಪೀಠದಲ್ಲಿ ಶ್ರೀಗಳ ಜನ್ಮದಿನದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಗಳು ನೆರವೇರಿವೆ. ಆದರೆ ಈ ಬಾರಿ ಸ್ವಾಮೀಜಿಯವರು ಅಯೋಧ್ಯೆಯಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ವಿಶೇಷವೆಂದರೆ, ಅಯೋಧ್ಯೆಯಲ್ಲಿ ಗಣಪತಿ ಸಚ್ಚಿದಾನಂದ ಆಶ್ರಮದ ಶಾಖೆ ಪ್ರಾರಂಭವಾಗುತ್ತಿದ್ದು, ಶ್ರೀಗಳು ಸ್ವತಃ ಭೂಮಿ ಪೂಜೆ ನೆರವೇರಿಸಿದ್ದಾರೆ.

ಇದಕ್ಕೂ ಮುನ್ನ ಬೆಳಗಿನಿಂದಲೇ ಅಲ್ಲಿ ವಿಶೇಷ ಪೂಜಾ ಕಾರ್ಯಗಳು ಹೋಮಗಳು ನೆರವೇರಿವೆ. ಈ ವೇಳೆ ಭಕ್ತರನ್ನು ಉದ್ದೇಶಿಸಿ ಮಾತನಾಡಿದ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಅಯೋಧ್ಯೆ ವಿಷ್ಣುವಿನ ಅವತಾರ ಶ್ರೀರಾಮ ಹುಟ್ಟಿದ ಪುಣ್ಯಕ್ಷೇತ್ರವಾಗಿದೆ. ಶ್ರೀರಾಮ ಧರ್ಮದಿಂದ ರಾಜ್ಯವಾಳಿ ಆ ಮೂಲಕ ರಾಮರಾಜ್ಯ ಮಾಡಿದ್ದ, ಅಂತಹ ಪುಣ್ಯಭೂಮಿಯಲ್ಲಿ ನಮ್ಮ ಆಶ್ರಮ ಸ್ಥಾಪನೆ ಮಾಡುತ್ತಿರುವುದು ಅತ್ಯಂತ ಖುಷಿ ತಂದಿದೆ ಎಂದರು.

ಇದೇ ವೇಳೆ ಇಡೀ ವಿಶ್ವದಲ್ಲಿ ಆರೋಗ್ಯ ಭಾಗ್ಯವನ್ನು ದೇವರು ಕರುಣಿಸಿ ಎಲ್ಲ ಪ್ರಜೆಗಳು ಸುಖ ಸಂತೋಷದಿಂದ ಇರಬೇಕೆಂದು ಪ್ರಾರ್ಥಿಸಿದ್ದೇನೆ. ಲೋಕ ಕಲ್ಯಾಣಾರ್ಥವಾಗಿ ಇಂದು ಪೂಜೆ ನೆರವೇರಿಸಲಾಗಿದೆ ಎಂದರು. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯ ನಂದ ತೀರ್ಥ ಸ್ವಾಮೀಜಿ ಸೇರಿದಂತೆ ಹಲವಾರು ಗುರುವರ್ಯರು, ಭಕ್ತರು ಉಪಸ್ಥಿತರಿದ್ದರು.

ಇಂದು ಹಿರಿಯ ವಿದ್ಯಾರ್ಥಿಗಳ ಸಮಾವೇಶ

ಮೈಸೂರು, ಮೇ 27– ಮೈಸೂರು ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮೇ 28ರ ಭಾನುವಾರದಂದು ಬೆಳಗ್ಗೆ 11.00ಕ್ಕೆ ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳ ಸಮಾವೇಶವನ್ನು ಏರ್ಪಡಿಸಲಾಗಿದೆ. ಆದ್ದರಿಂದ 1964ರಿಂದ 2022ರವರೆಗೆ ಕಾಲೇಜಿನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿರುವ ಎಲ್ಲಾ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿಕೊಡಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.5.2023 ಭಾನುವಾರ, ಮಳೆ ನಕ್ಷತ್ರ: ರೋಹಿಣಿ, 25.05.2023ರಿಂದ 07.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಮೈಸೂರ್ ಅರ್ಬನ್ ಹಾತ್, ಮೈಸೂರು:** ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ. ಸ್ಥಳ ಅರ್ಬನ್ ಹಾತ್ ಆವರಣ, ಹೆಬ್ಬಾಳು ಕೈಗಾರಿಕ ಪ್ರದೇಶ, ರಿಂಗ್ ರೋಡ್. ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ.

■ **ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ಮತ್ತು ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್:** 11ನೇ ಆರ್‌ಎನ್‌ಎಂ ಮತ್ತು ವಿಜಯಲಕ್ಷ್ಮಿ ನಾರಾಯಣ ಸಿಂಗ್ ಸ್ಮರಣಾರ್ಥ ರೋಡ್ ರೇಸ್–2023, ರನ್ ಫಾರ್ ಹೆಲ್ತ್, ಬೆಳಗ್ಗೆ 6.30ಕ್ಕೆ ಚಾಲನೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ಡಿಸಿ ಕಚೇರಿ ಎದುರು; ಬೆಳಗ್ಗೆ 9.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಓವಲ್ ಮೈದಾನ.

■ **ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಆವರಣ, ಸರಗೂರು, ಬೆಳಗ್ಗೆ 10 ರಿಂದ.

■ **ಸಿಲ್ಕ್ ಇಂಡಿಯಾ :** ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಕೆ.ಆರ್. ಆಸೂರಿಗಾನ ಕಲಾಕುಟೀರ :** ಸಂಸ್ಮರಣಾ ಕಾರ್ಯಕ್ರಮ, ಕೆ. ಆಸೂರಿ ರಾಮಸ್ವಾಮಿ ಅಯ್ಯಂಗಾರ್ ಅವರ 137ನೇ ಜನ್ಮ ದಿನದ ಅಂಗವಾಗಿ ಶ್ರೀನಿವಾಸ ಕಲ್ಯಾಣ ಕಾವ್ಯವಾಚನ ಹಾಗೂ ದಾಸರ ಕೃತಿಗಳ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಪ್ರೊ ನಾ.ಗೀತಾಚಾರ್ಯರು, ಹಾಡುಗಾರಿಕೆ : ಕೆ.ಆರ್. ಆಸೂರಿಗಾನ ಕಲಾಕುಟೀರದಿಂದ ಕಾವ್ಯವಾಚನ: ವಿದುಷಿ ಸತ್ಯಲಕ್ಷ್ಮಿ ಅನಂತಪದ್ಮನಾಭ, ವ್ಯಾಖ್ಯಾನ : ಡಾ. ಜ್ಯೋತಿಶಂಕರ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ತು :** ಉದ್ಘಾಟನಾ ಸಮಾರಂಭದ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಡಾ.ಶಾಕ್ತ್ಯಂ ಶ್ರೀ ಶಕ್ತಿಬಾಲ ಅಮ್ಮ, ಉದ್ಘಾಟನೆ: ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಅಧ್ಯಕ್ಷತೆ: ಸಮಾಜ ಸೇವಕ ಡಾ.ಎಸ್. ವೆಂಕಟೇಶ್, ವಿಶೇಷ ಆಹ್ವಾನಿತರು: ಯುವ ಗಾಯಕಿ ಕು. ಪ್ರಗತಿ ಬಡಿಗೇರ್, ಅತಿಥಿಗಳು: ಡಾ. ವಾಣಿಶ್ರೀ, ಸವಿತಾಶಾಸ್ತ್ರಿ, ಸೀತಾರಾಮೇಗೌಡ, ಸ್ಥಳ: ಪುರಭವನ, ಬೆಳಗ್ಗೆ 10.30ಕ್ಕೆ.

■ **ಕೆ.ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿ ಸಂಘ :** ಕೆ.ಹೆಚ್. ರಾಮಯ್ಯ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ಹಾಗೂ ಪ್ರೊ.ಪಿ.ಎಂ.ಚಿಕ್ಕ ಬೋರಯ್ಯ ಸ್ಮರಣಾರ್ಥ ಅಮೃತ ವಯೋಮಾನ ಗೌರವ ಕಾರ್ಯಕ್ರಮ, ಉದ್ಘಾಟನೆ: ವಿಶ್ರಾಂತ ಪ್ರಧಾನ ಕಾರ್ಯದರ್ಶಿ ಶಂಕರಲಿಂಗೇಗೌಡ, ಅಧ್ಯಕ್ಷತೆ: ವಿಶ್ರಾಂತ ವಿಶೇಷ ಕಾರ್ಯದರ್ಶಿ ಡಾ.ಪಿ.ಬೋರೇಗೌಡ, ಮುಖ್ಯ ಅತಿಥಿಗಳು: ವಿಶ್ರಾಂತ ಪೊಲೀಸ್ ಆಯುಕ್ತ ಕೆ.ಟಿ.ಬಾಲಕೃಷ್ಣ, ಡಾ.ಎ.ಎನ್.ಪ್ರಕಾಶ್‌ಗೌಡ, ಜಿಲ್ಲಾಧಿಕಾರಿಗಳಾದ ಡಾ.ಗೋಪಾಲಕೃಷ್ಣ, ಡಾ.ಕೆ.ವಿ.ರಾಜೇಂದ್ರ, ವಿಶೇಷ ಡಿಸಿ ಬಾಲಚಂದ್ರ, ಬಸವರಾಜು, ಟಿ.ಪಿ. ಶಿವಕುಮಾರ್, ಪಿ.ವಿಶ್ವನಾಥ್, ಮುಖ್ಯ ಭಾಷಣಕಾರರು: ವಿಶ್ರಾಂತ ಪ್ರಾಂಶುಪಾಲ ಪ್ರೊ.ಕೃಷ್ಣೇಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ವಿದ್ಯಾವರ್ಧಕ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಹಿರಿಯ ವಿದ್ಯಾರ್ಥಿಗಳ ಸಮಾವೇಶ, ಸ್ಥಳ: ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಗೃಹ ಶೋಭೆ:** ಇಂಟರ್‌ನ್ಯಾಷನಲ್ ಟ್ರೇಡ್ ಫೇರ್. ಸ್ಥಳ: ಮಹಾರಾಜ ಕಾಲೇಜು ಮೈದಾನ. ಬೆಳಗ್ಗೆ 11ರಿಂದ ರಾತ್ರಿ 9 ಗಂಟೆಯವರೆಗೆ.

■ **ಕರ್ನಾಟಕ ಸೇನಾ ಪಡೆ:** ಶ್ರೀ ಶಂಕರ ಜಯಂತಿ–ತತ್ವ ಜ್ಞಾನಿಗಳ ದಿನಾಚರಣೆ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಶ್ರೀ ಶಂಕರಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಡಾ. ಬಿ.ಆರ್. ನಟರಾಜ್ ಜೋಯ್ಸ್, ಸಾಧಕರಿಗೆ ಸನ್ಮಾನ : ಡಿ.ಟಿ.ಪ್ರಕಾಶ್, ಸ್ಥಳ: ಶ್ರೀ ಶೃಂಗೇರಿ ಮಠ, ಗನ್‌ಹೌಸ್ ಎದುರು, ಬೆಳಗ್ಗೆ 11.30ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಜಿಲ್ಲಾ ಸಮಿತಿ :** ಉದ್ಘಾಟನೆ ಮತ್ತು ಯೋಗ ಸೂತ್ರಗಳು ಆರೋಗ್ಯ ಸಂರಕ್ಷಣೆ ಕುರಿತು ತಜ್ಞರಿಂದ ಉಪನ್ಯಾಸ ಮಾಲಿಕೆ, ಬೆಳಗ್ಗೆ 11ಕ್ಕೆ ಡಾ.ಟಿ.ಎನ್. ಮಂಜುನಾಥ್ ಅವರಿಂದ ಮನೆಮದ್ದು, ಮಧ್ಯಾಹ್ನ 12ಕ್ಕೆ ಡಾ. ಪ್ರಸನ್ನ ವೆಂಕಟೇಶ್ ಅವರಿಂದ ದಿನಚರ್ಯೆ ಕುರಿತು ಉಪನ್ಯಾಸ, ಸ್ಥಳ: ಕಲ್ಪಕ್ಷೇತ್ರ ಸಭಾಂಗಣ, ವಿಜಯನಗರ 4ನೇ ಹಂತ.

■ **ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ :** ಉದ್ಯೋಗಿಗಳ ದಿನಾಚರಣೆ ಮತ್ತು ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರಿಗೆ ಅಭಿನಂದನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸನ್ಮಾನಿತರು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು: ಶಾಸಕ ಕೆ.ಹರೀಶ್‌ಗೌಡ, ಅತಿಥಿಗಳು: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜ, ಕುಲಸಚಿವ ಪ್ರೊ.ಮಹದೇವನ್, ಹಣಕಾಸು ಅಧಿಕಾರಿ ಡಾ.ಸಂಗೀತ ಗಜಾನನ ಭಟ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಪಿ.ಮೆರವಣ್ಣ, ಸ್ಥಳ: ಕ್ರಾಫರ್ಡ್ ಭವನ, ಮಧ್ಯಾಹ್ನ 3ಕ್ಕೆ

■ **ಸ್ವರ್ಣ ನೃಸಿಂಹ ದತ್ತಸಾಯಿ ಪೀಠಿಕಾ ಸೇವಾ ಟ್ರಸ್ಟ್ :** ಶ್ರೀ ಕ್ಷೇತ್ರ ದಸರಿಘಟ್ಟ ಚೌಡೇಶ್ವರಿ ಅಮ್ಮನವರ ಉತ್ಸವಮೂರ್ತಿ ಆಗಮನ, ಪೂರ್ಣಕುಂಭ ಸ್ವಾಗತ, ಲಲಿತ ಸಹಸ್ರನಾಮ, ಸಾನ್ನಿಧ್ಯ : ಅರ್ಜುನ ಅವದೂತರು, ಸ್ಥಳ: 36, ಗೀತಾನಿಕೇತನ, ಸೋನಾರ್ ಸ್ಟ್ರೀಟ್, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 4ಕ್ಕೆ.

■ **ಜೋಯಿಸ್ ಕಲಾ ಪ್ರತಿಷ್ಠಾನ ಸಾಂಸ್ಕೃತಿಕ ಟ್ರಸ್ಟ್ :** ವಾರ್ಷಿಕೋತ್ಸವದ ಅಂಗವಾಗಿ ಕಲಾಂಕುರ, ಅತಿಥಿಗಳು: ಮಳವಳ್ಳಿ ಮಠದ ಮಠಾಧಿಪತಿ ಶ್ರೀ ವರ್ಚಸ್ವಿ ಸಿದ್ಧಲಿಂಗರಾಜೇ ಅರಸ್, ಜಯಚಾಮರಾಜೇಂದ್ರ ಎಜುಕೇಷನಲ್ ಟ್ರಸ್ಟ್ ಉಪಾಧ್ಯಕ್ಷ ಡಾ.ಎಂ.ಆರ್.ಭಾರತಿ, ನೃತ್ಯಗಿರಿ ನಿರ್ದೇಶಕಿ ವಿದುಷಿ ಡಾ.ಕೃಪಾ ಫಡ್ಕೆ, ಗಾಯಕಿ ವಿದುಷಿ ರಂಜಿನಿ ಕೌಶಿಕ್, ಪ್ರತಿಷ್ಠಾನ ಸಂಸ್ಥಾಪಕ ವಿದುಷಿ ನಮ್ರತಾ ಜೋಯಿಸ್, ಪ್ರತಿಷ್ಠಾನ ಅಧ್ಯಕ್ಷ ಸತ್ಯನಾರಾಯಣ ಜೋಯಿಸ್, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಸಂಜೆ 5.30ಕ್ಕೆ.

■ **ಆರ್ಟ್ ಆಫ್ ಲಿವಿಂಗ್:** ಶ್ರೀ ರವಿಶಂಕರ್ ಅವರ ಹುಟ್ಟುಹಬ್ಬದ ಪ್ರಯುಕ್ತ ದಿವ್ಯ ಸತ್ಸಂಗ, ಶ್ರೀನಿವಾಸ್ ಮತ್ತು ಶಾಲಿನಿ ಶ್ರೀನಿವಾಸ್ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಸೆಂಟಿನರಿ ಹಾಲ್, ಶಾರದಾ ವಿಲಾಸ ಕಾಲೇಜು, ಕೃಷ್ಣಮೂರ್ತಿಪುರಂ, ಸಂಜೆ 5.30ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ:** ಗೌಪ್ಯ, ಆನೆಕಾಡು, ನೆಕ್ಸ್ಟ್ ಮತ್ತು ಋತು ಕಿರುಚಿತ್ರಗಳ ಪ್ರದರ್ಶನ ಹಾಗೂ ತಂಡದೊಂದಿಗೆ ಸಂವಾದ ಕಾರ್ಯಕ್ರಮ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಮೈಸೂರು ರಂಗ ಮಿತ್ರರು:** ಗೆಜ್ಜಲಟ್ಟಿ ನಾಟಕ ಪ್ರದರ್ಶನ, ರಚನೆ: ಹೊರೆಯಾಲ ದೊರೆಸ್ವಾಮಿ, ನಿರ್ದೇಶನ: ಕೃಷ್ಣನ್, ಸಂಗೀತ: ರವಿಂದ್ರ ಮತ್ತು ಸಂಗಡಿಗರು, ಉಪಸ್ಥಿತರು: ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಉಪಮೇಯರ್ ವಿ.ಶೈಲೇಂದ್ರ, ವಿದ್ಯಾಭರಣ್, ರಾಯಲ್ ಸ್ಟಾರ್ ಜೀವನ್, ಲಯನ್ಸ್ ಗೋಲ್ಡ್ ಟಿ.ಸುರೇಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ಸಂಜೆ 6.30ಕ್ಕೆ

■ **ಚಿನ್ಮಯ ಮಿಷನ್ ಮೈಸೂರು:** ಗೀತಾ ಜ್ಞಾನ ಯಜ್ಞ ಸ್ವಾಮಿ ಆದಿತ್ಯಾನಂದರಿಂದ ಭಗವದ್ಗೀತೆಯ 1ನೇ ಅಧ್ಯಾಯ ಅರ್ಜುನವಿಷಾದಯೋಗಃ ಕುರಿತು ಉಪನ್ಯಾಸ, ಸ್ಥಳ: ಶಿವಾನಂದ ಜ್ಞಾನಾಲಯ, ಸಂಜೆ 6.30ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಧನ್ವಂತರಿ ಪ್ರಾದುರ್ಭಾವೋತ್ಸವ, ಬೆಳಗ್ಗೆ 7ರಿಂದ ಶ್ರೀಮದ್ಭಾಗವತ ತಾತ್ಪರ್ಯ ಪಾಠ, ಬೆಳಗ್ಗೆ 8.15ರಿಂದ ತಪ್ತಮುದ್ರಾಧಾರಣೆ, ಸಂಜೆ 5.30ರಿಂದ ಗಾಯಕರಾದ ಪಂಡಿತ್ ಪ್ರಸನ್ನ ಗುಡಿ ಅವರಿಂದ ಸಂಗೀತ ಕಾರ್ಯಕ್ರಮ, ಸಂಜೆ 6.30ರಿಂದ ಶ್ರೀ ಶ್ರೀಪಾದಂಗಳವರಿಂದ ಅನುಗ್ರಹ ಫಲಮಂತ್ರಾಕ್ಷತೆ, ಸಂಜೆ 7ರಿಂದ ಶ್ರೀಪಾದಂಗಳವರ ಅನುಗ್ರಹ ಸಂದೇಶ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

■ **ಪರಿವರ್ತನ ರಂಗ ಸಮಾಜ:** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಅಮೃತ ಪ್ರೀತಂ ಅವರ ಜೀವನ, ಪ್ರೀತಿ, ಕಾವ್ಯದ ಬಗ್ಗೆ ರಂಗ ಪ್ರಸ್ತುತಿ ನನ್ನ ಪ್ರೀತಿಯ ಅಮೃತ ನಾಟಕ ಪ್ರದರ್ಶನ, ನಿರ್ದೇಶನ: ಪ್ರೊ. ಎಸ್.ಆರ್.ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ

■ **ಅಷ್ಟಾಂಗಯೋಗವಿಜ್ಞಾನಮಂದಿರಂ :** ವಿದ್ವಾನ್ ರಾ. ಗಣಪತಿ ಭಟ್ ಅವರಿಂದ ನಾಲ್ಕು ಅವ್ಯವಸ್ಥೆಗಳು ಕುರಿತು ಪ್ರವಚನ, ಸ್ಥಳ: ಅಷ್ಟಾಂಗಯೋಗವಿಜ್ಞಾನಮಂದಿರಂ, ಲಕ್ಷ್ಮೀಪುರಂ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಧರಣೇಂದ್ರ ಕುರ್ಕರಿ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಡಾ.ಬಿ.ವಿ. ವಸಂತ ಕುಮಾರ್, 7.15 ಸಮಗ್ರ ವಿಕಾಸ–ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಪರಿಸರ ಪ್ರೀತಿಯ ಮ್ಯಾನ್ ಮನು ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ–ಶ್ರವಣ ದೋಷ ಇರುವವರಿಗೆ ಲಭ್ಯವಿರುವ ಪರಿಹಾರ ಮತ್ತು ಚಿಕಿತ್ಸೆ ಪ್ರೊ ಪಿ.ಮಂಜುಳಾ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಹಾಡುವ, ಕೊಳಲು ನುಡಿಸುವ ಹಾಗೂ ಚೆಸ್ ಆಟಗಾತಿ ಮಾನ್ಸಿ ಯು.ಎಸ್.ಆಚಾರ್ ಜೊತೆ ಮಾತುಕತೆ, 11.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರಮೋದಿಯವರ ಮನದ ಮಾತು, ನಂತರ ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ

ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಜನಪದ ಸಂಗೀತ– ರುದ್ರಶೆಟ್ಟಿ ಮತ್ತು ತಂಡ–ತತ್ವಪದಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆಗಳು–ರತ್ನಮಾಲಾ ಪ್ರಕಾಶ್, ಅರ್ಚನಾ ಉಡುಪ, 3.45 ಯಕ್ಷಗಾನ ತಾಳಮದ್ದಲೆ, ಪ್ರಸಂಗ–ಯಾಗಸಂಕಲ್ಪ, ಪ್ರಸ್ತುತಿ–ಒಡ್ಡೂರಿನ ಅನುಗ್ರಹ ಕಲಾ ಕೇಂದ್ರದ ಸದಸ್ಯರು, 4.45 ಚಟ್ ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ.ಮೀನಾ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಪಶುರಂಗ–ಪಶು ಪಾಲನೆ ಹಾಗೂ ಪಶು ವೈದ್ಯಕೀಯ ಸೇವೆಗಳ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, ಪ್ರಾಣಿ ಕಲ್ಯಾಣ ಮಂಡಳಿ ಕಾಯ್ದೆಗಳಲ್ಲಿ ಪೆಟ್ ಶಾಪ್ ನಿರ್ವಹಣಾ ನಿಯಮಗಳು –ಈ ಬಗ್ಗೆ ಹುಣಸೂರಿನ ಮುಖ್ಯ ಪಶುವೈದ್ಯಾಧಿಕಾರಿ ಡಾ.ರುದ್ರಪ್ಪ ಸಂದರ್ಶನ, 8.00 ಮನ್ ಕಿ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು–ತಾಯೂರು ಚೆನ್ನನಾಯಕ ಮತ್ತು ತಂಡ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ತಿರುವಯ್ಯಾರು ಬಿ.ವಿ.ಜಯಶ್ರೀ – ಹಾಡುಗಾರಿಕೆ

ರೈತ ವಿರೋಧಿ ಕಾಯ್ದೆ ಹಿಂಪಡೆದು, ಅನ್ನದಾತರ ಹಿತ ಕಾಯಬೇಕು

ನನಗೆ ರಾಜಕೀಯಕ್ಕಿಂತ ಚಳವಳಿ ಮುಖ್ಯ: ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ



ಮೈಸೂರು, ಮೇ 27(ಎಂಟಿವೈ)– ಈ ಹಿಂದೆ ಜಾರಿಗೆ ತಂದಿರುವ ರೈತ ವಿರೋಧಿ ಕಾಯ್ದೆಯನ್ನು ಕೂಡಲೇ ಹಿಂಪಡೆದು, ರೈತರ ಸಂಕಷ್ಟಗಳಿಗೆ ಸ್ಪಂದಿಸಲು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ಮೇಲುಕೋಟೆ ಕ್ಷೇತ್ರದ ನೂತನ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ನಂತರ ಮಾತನಾಡಿದರು.

ರೈತರ ಖರ್ಚು ಕಡಿಮೆ ಮಾಡಿ, ಹೆಚ್ಚು ಆದಾಯ ಬರುವಂತೆ ನೋಡಿಕೊಳ್ಳುವ ಉದ್ದೇಶ ನನ್ನದಾಗಿದೆ ಈ ಹಿಂದಿನ ಸರ್ಕಾರ ಜಾರಿಗೆ ತಂದಿರುವ ರೈತ ವಿರೋಧಿ ಕಾಯ್ದೆಯನ್ನು ಹಿಂಪಡೆದು, ರೈತರ ಹಿತ ಕಾಯುವ ಕಾರ್ಯಕ್ರಮ ರೂಪಿಸುವತ್ತ ಹಾಲಿ ಸರ್ಕಾರ ಗಮನ ಹರಿಸಬೇಕು ಎಂದರು.

ಎಂಎಸ್‌ಪಿ ದರ ನಿಗದಿಗೆ ಹೋರಾಟ ನಡೆಸಬೇಕಾಗಿದೆ. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು. ಕೃಷಿ ಕ್ಷೇತ್ರದ ಬೆಳವಣಿಗೆ ಕುರಿತು ಆಲೋಚಿಸಬೇಕು. ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಮುಖವಾಗಿ ಮೂಲ ಸೌಲಭ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಜತೆಗೆ ತಾಲೂಕು ಕಚೇರಿಗಳಲ್ಲಿ ಆಗುವ ವಿಳಂಬ ನೀತಿಯ ಬಗ್ಗೆಯೂ ಗಮನ ನೀಡಬೇಕು ಎಂದು ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ರೈತರಿಗೆ ವ್ಯವಸ್ಥಿತವಾಗಿ ನ್ಯಾಯ ದೊರಕಬೇಕು, ಆರ್ಥಿಕವಾಗಿ ಸಬಲರಾಗಬೇಕು. ರೈತರ ಖರ್ಚು ಕಡಿಮೆಯಾಗಿ, ಹೆಚ್ಚು ಆದಾಯ ಬರುವಂತೆ ನೋಡಿಕೊಳ್ಳಬೇಕು. ರೈತರು ಸಾಲ ಮಾಡಿ ತಮ್ಮ ಮಕ್ಕಳ ಶಾಲಾ–ಕಾಲೇಜು ಶುಲ್ಕ ಕಟ್ಟುವ ಸ್ಥಿತಿ ನಿರ್ಮಾಣವಾಗಿದೆ. ಸಾಲ ತೀರಿಸುವುದರಲ್ಲೇ ರೈತರ ಜೀವನ ಸೀಮಿತಗೊಳ್ಳುತ್ತದೆ. ಆದ್ದರಿಂದ ಪಂಚಾಯಿತಿ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ನಾನು ಚುನಾವಣೆಯಲ್ಲಿ ಸ್ಪರ್ಧಿಸುವ ಕನಸು ಕಂಡಿರಲಿಲ್ಲ. ಆದರೆ ನನ್ನ ತಂದೆ ಕೆ.ಎಸ್.ಪುಟ್ಟಣ್ಣಯ್ಯ ಅವರು ನಿಧನರಾದ ನಂತರ ನಾನು ಚಳವಳಿ ಜೀವನಕ್ಕೆ ಪಾದಾರ್ಪಣೆ ಮಾಡಿದ್ದೇನೆ. ನನಗೆ ಈಗಲೂ ಚಳವಳಿಯೇ ಮೊದಲು, ಆ ನಂತರವಷ್ಟೇ ರಾಜಕೀಯ. ಚಳವಳಿ ಜೀವಂತವಾಗಿದ್ದರೆ ಎಲ್ಲವೂ ಸಾಧ್ಯ. ನಾನು ತಿಳಿಯಬೇಕಾದ ವಿಷಯ ಬಹಳಷ್ಟಿದೆ. ಕಲಿಯುವ ಮನಸ್ಥಿತಿ ಯಲ್ಲಿದ್ದೇನೆ ಎಂದು ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ರಾಜಕಾರಣದ ಕಲುಷಿತ ವಾತಾವರಣದ ನಡುವೆ ದರ್ಶನ್ ಪುಟ್ಟಣ್ಣಯ್ಯ ಆಯ್ಕೆಯಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಮುಂಬರುವ ದಿನಗಳಲ್ಲಿ ಜನಸಾಮಾನ್ಯರೇ ರಾಜಕಾರಣ ಮಾಡುವಂತಹ ವಾತಾವರಣ ನಿರ್ಮಾಣವಾಗಬೇಕು. ಚಳವಳಿ ರಾಜಕಾರಣವೇ ಜನರು ಮಾಡುವ ರಾಜಕಾರಣಕ್ಕೆ ದಾರಿದೀಪವಾಗಬೇಕು. ಈ ಹಿಂದಿನ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿಗಳು ಹೆಚ್ಚಿನ ಮತಗಳಿಸಿದ್ದರು. ಆದರೆ ಈ ಚುನಾವಣೆಯಲ್ಲಿ ನಾವು ಮೇಲುಗೈ ಸಾಧಿಸಿದ್ದೇವೆ. ಕಲುಷಿತ ವ್ಯವಸ್ಥೆಯ ನಡುವೆ, ಅದನ್ನು ಪೋಷಿಸುವ ಪಕ್ಷಗಳ ನಡುವೆ ಮೇಲುಕೋಟೆ ಜನತೆ ದರ್ಶನ್ ಅವರನ್ನು ಆಯ್ಕೆ ಮಾಡಿದ್ದಾರೆ. ನಾವು ದರ್ಶನ್ ಅವರಿಗೆ ಅಭಿನಂದನೆ ಸಲ್ಲಿಸುವ ಮೂಲಕ ಮೇಲುಕೋಟೆ ಕ್ಷೇತ್ರದ ಜನತೆಯನ್ನು ಅಭಿನಂದಿಸಬೇಕು ಎಂದು ಅವರು ಹೇಳಿದರು.

ದರ್ಶನ್ ಅವರು ಅಮೆರಿಕಾದಲ್ಲಿ ಇದ್ದವರು. ಕಳೆದ ಬಾರಿ ಕಡಿಮೆ ಅಂತರದಲ್ಲಿ ಸೋಲಿಸಿದ್ದ ಜನತೆ ಈ ಬಾರಿ ಗೆಲ್ಲಿಸಿದ್ದಾರೆ. ವಿಭಿನ್ನ ರೀತಿಯ ನಿರೀಕ್ಷೆ ಇದೆ. ಅದನ್ನು ಸರಿದೂಗಿಸಬೇಕಾದ ಹೊಣೆ ಅವರ ಮೇಲಿದೆ. ಹೊಸದಾಗಿ ಶಾಸಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಯಾವ ವಿಷಯವನ್ನು ಯಾವಾಗ ಪ್ರಸ್ತಾಪಿಸಬೇಕು ಎಂಬುದು ಗೊತ್ತಿರುವುದಿಲ್ಲ. ಅದನ್ನು ಕಲಿತುಕೊಳ್ಳುತ್ತಾರೆ. ಆದರೆ ನಾವು ಅವರಿಗೆ ಒತ್ತಾಸೆಯಾಗಿ ನಿಲ್ಲಬೇಕು. ಈ ಹಿಂದೆ ಅಧಿಕಾರದಲ್ಲಿ ಇದ್ದವರಿಗಿಂತ ಈಗ ಇರುವವರು ನಮ್ಮನ್ನು ನೆಮ್ಮದಿಯಾಗಿ ಇರಲು ಬಿಡುತ್ತಾರೆ ಎಂಬ ನಂಬಿಕೆ ಇದೆ. 1975ರ ವೇಳೆ ಚಳವಳಿಗಾರರು ರಸ್ತೆಯಲ್ಲಿ ಕೂಗಿದರೆ ಸಾಕು, ಅದು ವಿಧಾನಸೌಧವನ್ನು ತಟ್ಟುತ್ತಿತ್ತು. ಆದರೆ 1980ರಲ್ಲಿ ವಿಶ್ವ ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ ಪ್ರತಿಭಟನಾ ಶಕ್ತಿ ಕುಂದಿ ಹೋಯಿತು ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ವಹಿಸಿದ್ದರು. ಮುಖಂಡರಾದ ಮಹೇಶ್ ಪ್ರಭು, ಅಶ್ವಥ್ ನಾರಾಯಣ ಅರಸ್, ಕಿರಣ್ ಪೂಣಚ್ಚ, ಪ್ರಸನ್ನಗೌಡ, ಬೆಟ್ಟಯ್ಯಕೋಟೆ, ನೇತ್ರಾವತಿ, ಮನು ಸೋಮಯ್ಯ, ಚೋರನಹಳ್ಳಿ ಶಿವಣ್ಣ, ಜಗದೀಶ್ ಸೂರ್ಯ, ಬನ್ನೂರು ಕೃಷ್ಣಪ್ಪ, ಬೊಕ್ಕಳ್ಳಿ ನಂಜುಂಡಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ್ರಗತಿಪರರೊಂದಿಗೆ ಚರ್ಚೆ

ನಾನು ಚುನಾವಣೆಯಲ್ಲಿ ಆಯ್ಕೆಯಾದ ಹಿನ್ನೆಲೆಯಲ್ಲಿ ಕಳೆದ ಮೂರು ದಿನಗಳಿಂದ ಪ್ರಗತಿಪರ ಚಿಂತಕರೊಂದಿಗೆ ಚರ್ಚೆ ಮಾಡುತ್ತಿದ್ದೇನೆ. ಶಾಸಕರಾದವರಿಗೆ ಇಷ್ಟೊಂದು ಜವಾಬ್ದಾರಿ ಇರುತ್ತದೆ ಎಂಬುದು ಗೊತ್ತಿರಲಿಲ್ಲ. ಚುನಾವಣೆಯಲ್ಲಿ ನಿಲ್ಲಬೇಕು, ಗೆಲ್ಲಬೇಕು ಎಂಬುದಷ್ಟೇ ಗೊತ್ತಿತ್ತು. ರೈತ ಸಂಘಟನೆ ಆರಂಭವಾಗಿ 41 ವರ್ಷವಾಯಿತು. ಈ ಸಂಘಟನೆಯನ್ನು ಹೇಗೆ ಹೋರಾಟ ಮಾಡಿಕೊಂಡು ನಿಸ್ವಾರ್ಥವಾಗಿ ಕಟ್ಟಿದ್ದಾರೆ. ಈಗ ಯುವ ಘಟಕವನ್ನು ದೊಡ್ಡ ಮಟ್ಟದಲ್ಲಿ ಕಟ್ಟಬೇಕು ಎಂಬ ಆಲೋಚನೆ ಇದೆ.

-ದರ್ಶನ್ ಪುಟ್ಟಣ್ಣಯ್ಯ.
ಮೇಲುಕೋಟೆ ಕ್ಷೇತ್ರದ ಶಾಸಕ

ಕೊಡಗು ಮೂಲದ ಡಾ.ಕೊಟ್ಟಂಗಡ ಪೆಮ್ಮಯ್ಯ ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕರಾಗಿ ನೇಮಕ



ಮೈಸೂರು, ಮಡಿಕೇರಿ, ಮೇ 27– ಕೊಡಗು ಮೂಲದ ಹಿರಿಯ ಅಧಿಕಾರಿ ಡಾ.ಕೊಟ್ಟಂಗಡ ಪೆಮ್ಮಯ್ಯ ಅವರು ಜಾರಿ ನಿರ್ದೇಶನಾಲಯದಲ್ಲಿ ಜಾರಿ ಉಪ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ.

ಭಾರತೀಯ ಕಂದಾಯ ಸೇವೆಗಳ (ಐಆರ್‌ಎಸ್) ಅಧಿಕಾರಿಯಾಗಿದ್ದ ಡಾ. ಕೊಟ್ಟಂಗಡ ಪೆಮ್ಮಯ್ಯ ಅವರು ಈ ಉನ್ನತ ಹುದ್ದೆಗೆ ನೇಮಕಗೊಂಡಿದ್ದಾರೆ.

ಮೇ 25 ರಂದು ರಾಷ್ಟ್ರಪತಿಗಳ ಕಚೇರಿಯಿಂದ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ. ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (CBDT) ಕೇಡರ್‌ನ ಡಾ. ಪೆಮ್ಮಯ್ಯ ಅವರು ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕರಾಗಿ ನೇಮಕಗೊಂಡ 17 ಅಧಿಕಾರಿಗಳಲ್ಲಿ ಒಬ್ಬರಾಗಿದ್ದಾರೆ. ಕಾಳಧನ ಸಕ್ರಮ, ಅಕ್ರಮ ಹಣ ವರ್ಗಾವಣೆ, ವಿದೇಶಿ ವಿನಿಮಯ ಕಾನೂನುಗಳ ಉಲ್ಲಂಘನೆಯ ಅಪರಾಧಗಳ ಕುರಿತು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಹಣಕಾಸು ಸಚಿವಾಲಯದ ಕಂದಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಈ ಸಂಸ್ಥೆ. ಕೇಂದ್ರ ಸರ್ಕಾರದ ಪ್ರಧಾನ ಹಣಕಾಸು ತನಿಖಾ ಸಂಸ್ಥೆಯಾಗಿ, ಸಂವಿಧಾನ ಮತ್ತು ಕಟ್ಟುನಿಟ್ಟಾದ ಕಾನೂನಿನಡಿಯಲ್ಲಿ ಜಾರಿ ನಿರ್ದೇಶನಾಲಯವು ಕಾರ್ಯನಿರ್ವಹಿಸುತ್ತದೆ.

ಜಾರಿ ನಿರ್ದೇಶನಾಲಯದ ಪ್ರಧಾನ ಕಚೇರಿ ನವದೆಹಲಿಯಲ್ಲಿದೆ. ಜಾರಿ ನಿರ್ದೇಶಕರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಒಟ್ಟು ಐದು ಕಡೆ ಅಂದರೆ ಮುಂಬೈ, ಚೆನ್ನೈ, ಚಂಡೀಗಢ, ಕೋಲ್ಕತ್ತಾ ಮತ್ತು ದೆಹಲಿಯಲ್ಲಿ ಪ್ರಾದೇಶಿಕ ಕಚೇರಿಗಳಿವೆ. 10 ವಲಯ ಕಚೇರಿಗಳಿವೆ, ಇವು ಉಪ ನಿರ್ದೇಶಕರು ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತವೆ.

ಡಾ. ಪೆಮ್ಮಯ್ಯ ಅವರು ಗುಜರಾತ್‌ನ ಸೂರತ್‌ನಲ್ಲಿರುವ ವಿದೇಶಿ ಆಸ್ತಿ ತನಿಖಾ ಘಟಕದ (ಎಫ್‌ಎಐಯು) ಉಪ ನಿರ್ದೇಶಕರಾಗಿ ಅತ್ಯುತ್ತಮ ಸೇವೆ ಸಲ್ಲಿಸಿ ತಮ್ಮ ಜವಾಬ್ದಾರಿ ನಿಭಾಯಿಸಿದ್ದಾರೆ.

ಈಗ ಜಾರಿ ನಿರ್ದೇಶನಾಲಯದ ಉಪ ನಿರ್ದೇಶಕರಾಗಿ ನೇಮಕಗೊಂಡ ನಂತರ "ಮೈಸೂರು ಮಿತ್ರ" ಜೊತೆ ಮಾತನಾಡಿದ ಡಾ.ಪೆಮ್ಮಯ್ಯ ಅವರು, ಭಾರತೀಯ ಪೊಲೀಸ್ ಸೇವೆ ಅಥವಾ ಭಾರತೀಯ ಕಂದಾಯ ಸೇವೆಗಳು ಅಥವಾ ಕಸ್ಟಮ್ಸ್‌ನಲ್ಲಿ 5 ವರ್ಷಗಳ ಅನುಭವ ಹೊಂದಿರುವುದು ಜಾರಿ ಉಪ ನಿರ್ದೇಶಕರ ನೇಮಕಾತಿಗೆ ಮಾನದಂಡವಾಗಿದೆ ಎಂದು ಹೇಳಿದರು. "ನನ್ನ ಹಿಂದಿನ ಕೆಲಸವನ್ನು ಪರಿಶೀಲಿಸಿದ್ದಾರೆ ಮತ್ತು ಸರಣಿ ಸಂದರ್ಶನಗಳ ನಂತರ ನೇಮಕಾತಿ ಮಾಡಲಾಗಿದೆ. ಗುರು ಕರೋನಾ ಅವರ ಆಶೀರ್ವಾದದಿಂದ ನಾನು 17 ಅಧಿಕಾರಿಗಳಲ್ಲಿ ಒಬ್ಬನಾಗಿ ನೇಮಕಗೊಂಡಿದ್ದೇನೆ. ನನಗೆ ಈ ಜವಾಬ್ದಾರಿ ದೊರೆತಿರುವುದು ನಿಜಕ್ಕೂ ಖುಷಿಯಾಗಿದೆ. ಕೆಲಸದ ಸ್ವರೂಪ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪರಿಗಣಿಸಿದರೆ ಇದು ನಿಜಕ್ಕೂ ಅತ್ಯಂತ ಸೂಕ್ಷ್ಮ ಹುದ್ದೆಯಾಗಿದೆ" ಎಂದು ಅವರು ಹೇಳಿದರು.

ಡಾ.ಪೆಮ್ಮಯ್ಯ ಕೊಟ್ಟಂಗಡ ದಿವಂಗತ ದೇವಯ್ಯ ಅವರ ಪುತ್ರ. ಅವರ ತಾಯಿ ವಿಜು ದೇವಯ್ಯ ಸಾಮಾಜಿಕ ಕಾರ್ಯಕರ್ತರು ಮತ್ತು ಗೋಣಿಕೊಪ್ಪದ ಕಾವೇರಿ ಪೊಮ್ಮಕ್ಕಡ ಕೂಟದ ಅಧ್ಯಕ್ಷರು. ನಾಗರೀಕ ಸೇವೆಗೆ ಸೇರುವ ಮೊದಲು ಡಾ.ಪೆಮ್ಮಯ್ಯ ಅವರು ಗೋಣಿಕೊಪ್ಪದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿಗೆ ಎಂಎಲ್‌ಸಿ ಸ್ಥಾನ ಕಲ್ಪಿಸಿ

ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟ ಮನವಿ



ಮೈಸೂರು,ಮೇ 27(ಪಿಎಂ)– ನೇಕಾರ ಸಮುದಾಯದ ಆರ್.ಮೂರ್ತಿ ಅವರು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷರಾಗಿ ಈ ಬಾರಿಯ ಚುನಾವಣೆಯಲ್ಲಿ ಪಕ್ಷ ಬಹುಮತದಿಂದ ಅಧಿಕಾರಕ್ಕೆ ಬರಲು ಶ್ರಮಿಸಿದ್ದಾರೆ. ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನ ಕಲ್ಪಿಸಿ ಹಿಂದುಳಿದ ನೇಕಾರ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಲ್ಲಿ ಮೈಸೂರು ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟ ಮನವಿ ಮಾಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಆರ್.ನರಸಿಂಹಮೂರ್ತಿ, ಒಕ್ಕೂಟದ ಗೌರವಾಧ್ಯಕ್ಷರೂ ಆದ ಆರ್.ಮೂರ್ತಿ ಅವರು ಕಾಂಗ್ರೆಸ್ ನಗರಾಧ್ಯಕ್ಷರಾಗಿಯೂ ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ ಎಂದರು.

ದೇವಾಂಗ, ಪಟ್ಟಸಾಲಿ, ಕುರುಹಿನಶೆಟ್ಟಿ, ಹಟಗಾರ, ಬಣ್ಣಗಾರ, ಸೋಮವಂಶ ಕ್ಷತ್ರಿಯ, ತೊಗಟವೀರ ಸೇರಿದಂತೆ ಸುಮಾರು 26 ಉಪಪಂಗಡಗಳನ್ನು ನೇಕಾರ ಸಮುದಾಯ ಒಳಗೊಂಡಿದೆ. ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ನೇಕಾರ ಸಮುದಾಯವು ರಾಜ್ಯದಲ್ಲಿ ಸುಮಾರು 80 ಲಕ್ಷ ಜನಸಂಖ್ಯೆ ಹೊಂದಿದೆ. ಆದರೆ ರಾಜಕೀಯದಲ್ಲಿ ತೊಡಗಿಸಿಕೊಂಡವರು ವಿರಳ ಎಂದು ಹೇಳಿದರು.

ಸಮುದಾಯದ ಆರ್.ಮೂರ್ತಿ 40 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ದುಡಿಯುತ್ತಿದ್ದು, ಕಳೆದ 8 ವರ್ಷಗಳಿಂದ ನಗರ ಕಾಂಗ್ರೆಸ್ ಅಧ್ಯಕ್ಷರಾಗಿ ನಿರಂತರವಾಗಿ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಜೊತೆಗೆ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ಶಕ್ತಿ ಮೀರಿ ಶ್ರಮಿಸಿದ್ದಾರೆ. ಅವರಿಗೆ ಎಂಎಲ್‌ಸಿ ಸ್ಥಾನ ಕಲ್ಪಿಸಿ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕೆಂದು ಕೋರಿದರು.

ಒಕ್ಕೂಟದ ಅಧ್ಯಕ್ಷ ಎಸ್.ದಿನೇಶ್ ಯಜಮಾನ್, ಸಂಘಟನಾ ಕಾರ್ಯದರ್ಶಿ ಎಸ್.ದಿವಾಕರ್, ಕಾರ್ಯದರ್ಶಿಗಳಾದ ಹೇಮಣ್ಣ ರಾಜಣ್ಣ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಸುನೀಲ್ ಗೋಷ್ಠಿಯಲ್ಲಿದ್ದರು.

ಜುಲೈ 8ರಂದು ರಾಷ್ಟ್ರೀಯ ಲೋಕ ಅದಾಲತ್

ಮೈಸೂರು ಜಿಲ್ಲೆಯಲ್ಲಿ 7,516 ಪ್ರಕರಣಗಳು ರಾಜೀ ಮೂಲಕ ಇತ್ಯರ್ಥ ಸಾಧ್ಯತೆ



ಮೈಸೂರು, ಮೇ 27(ಆರ್‌ಕೆ)– ಜುಲೈ 8ರಂದು ರಾಜ್ಯಾದ್ಯಂತ ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದೆ ಎಂದು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ಎಸ್. ಸಂಗ್ರೇಶಿ ತಿಳಿಸಿದ್ದಾರೆ.

ಮೈಸೂರಿನ ಜಯನಗರದಲ್ಲಿರುವ ನ್ಯಾಯಾಲಯಗಳ ಹೊಸ ಕಟ್ಟಡದ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಮೈಸೂರು ನಗರ ಮತ್ತು ಜಿಲ್ಲೆಯ ಎಲ್ಲಾ ತಾಲೂಕು ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜೀ ಆಗಬಹುದಾದ ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಲು ಜುಲೈ 8ರಂದು ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದರು.

ಮೈಸೂರು ಜಿಲ್ಲೆಯ ನ್ಯಾಯಾಲಯಗಳಲ್ಲಿ 54,096 ಸಿವಿಲ್, 57,833 ಕ್ರಿಮಿನಲ್ ಪ್ರಕರಣಗಳಿದ್ದು, ಈವರೆಗೆ 11,702 ಇತ್ಯರ್ಥವಾಗಿವೆ. ಅದಾಲತ್‌ನಲ್ಲಿ 7,516 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಳಿಸಬಹುದೆಂದು ಗುರ್ತಿಸಲಾಗಿದೆ. ಆ ಪೈಕಿ 405 ಆಕ್ಸಿಡೆಂಟ್ ಕೇಸ್, 2356 ಕ್ರಿಮಿನಲ್, 2,410 ಚೆಕ್‌ಬೌನ್ಸ್, 4,203 ಸಿವಿಲ್, 262 ವ್ಯಾಜ್ಯಪೂರ್ವ ಪ್ರಕರಣಗಳು ರಾಷ್ಟ್ರೀಯ ಅದಾಲತ್‌ನಲ್ಲಿ ಇತ್ಯರ್ಥವಾಗಲಿವೆ ಎಂದು ಅವರು ತಿಳಿಸಿದರು.

ರಾಜೀ ಆಗಬಹುದಾದ ಯಾವುದೇ ಪ್ರಕರಣಗಳನ್ನು ಕಕ್ಷಿದಾರರ ಮನವಿ ಮೇರೆಗೆ ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ರಾಜೀ ಸಂಧಾನಕ್ಕೆ ತೆಗೆದುಕೊಂಡು ಇತ್ಯರ್ಥ ಮಾಡಲಾಗುವುದು. ಸಾರ್ವಜನಿಕರು ಈ ಅವಕಾಶ ಬಳಸಿಕೊಂಡು ಬಾಕಿ ಇರುವ ಪ್ರಕರಣಗಳನ್ನು ಪರಸ್ಪರ ಸಮ್ಮತಿ ಮೇರೆಗೆ ಬಗೆಹರಿಸಿಕೊಳ್ಳಬೇಕೆಂದು ನ್ಯಾಯಾಧೀಶರು ತಿಳಿಸಿದ್ದಾರೆ. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್, ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಹಾಗೂ ಕಾರ್ಯದರ್ಶಿ ಎಸ್. ಉಮೇಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಸದಾ ಜನದಟ್ಟಣೆಯ, ಪ್ರಮುಖ ವಾಣಿಜ್ಯ ಕೇಂದ್ರ ದೇವರಾಜ ಅರಸು ರಸ್ತೆಯಲ್ಲಿ ಕಾಡುತ್ತಿದೆ ಕರೆಂಟ್ ಭೂತ!

- ಕೈಯಲ್ಲಿ ಜೀವ ಹಿಡಿದು ಸುತ್ತಾಡುತ್ತಿರುವ ಸಾರ್ವಜನಿಕರು
- ತಲೆ ಕೆಡಿಸಿಕೊಳ್ಳದ ಚೆಸ್ಕಾಂ ಅಧಿಕಾರಿ–ಸಿಬ್ಬಂದಿ



ಮೈಸೂರು, ಮೇ 27(ಎಂಕೆ)– ಮೂರ್‍ನಾಲ್ಕು ಮನವಿ, ಹತ್ತಾರು ಬಾರೀ ಫೋನ್ ಮಾಡಿದರೂ ಕ್ಯಾರೆ ಎನ್ನದ ಚೆಸ್ಕಾಂ ಅಧಿಕಾರಿ–ಸಿಬ್ಬಂದಿಗಳಿಂದ ಕಾದಿದೆ ಭಾರೀ ಕಂಟಕ...!

ಹೌದು! ಮೈಸೂರಿನ ಹೃದಯ ಭಾಗ, ಪ್ರಮುಖ ವ್ಯಾಪಾರ–ವಹಿವಾಟಿನ ಕೇಂದ್ರವಾದ ಡಿ.ದೇವರಾಜ ಅರಸು ರಸ್ತೆಯಲ್ಲಿ(ಟಾರ್ಪಲಿನ್ಸ್ ಮೈಸೂರು ಮಳಿಗೆ ಎದುರಿನ ಫುಟ್‌ಪಾತ್‌ನಲ್ಲಿ) ಚೆಸ್ಕಾಂ ಅಧಿಕಾರಿ–ಸಿಬ್ಬಂದಿ ನಿರ್ಲಕ್ಷ್ಯತೆಯಿಂದ ಭಾರೀ ಅನಾಹುತ ಸಂಭವಿಸುವ ಸಾಧ್ಯತೆ ಇದೆ. ನೆಲದೊಳಗಿಂದ ಹೊಗೆ, ಬೆಂಕಿಯ ಕಿಡಿಗಳು ಮೇಲೇಳುತ್ತಿರುವುದು ವ್ಯಾಪಾರಿಗಳ ಅತೀವ ಆತಂಕಕ್ಕೆ ಕಾರಣವಾಗಿದ್ದು, ಅಪಾಯದ ಮುನ್ಸೂಚನೆ ನೀಡಿದೆ.

ಕಳೆದ ಏಪ್ರಿಲ್ ತಿಂಗಳ 10ನೇ ತಾರೀಖಿನಂದೂ ರಾತ್ರೋರಾತ್ರಿ ನಡೆದ ರಸ್ತೆ ಡಾಂಬರೀಕರಣ ಹಾಗೂ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿ ವೇಳೆ ನೆಲದೊಳಗೆ (ಫುಟ್‌ಪಾತ್‌ನಲ್ಲಿ) ಹಾದು ಹೋಗಿರುವ ವಿದ್ಯುತ್ ಕೇಬಲ್‌ಗಳಿಗೆ ಹಾನಿಯಾಗಿ, ಮಳೆ ಬಂದಾಗಲೆಲ್ಲಾ ಶಾರ್ಟ್ ಸರ್ಕ್ಯೂಟ್ ಆಗುತ್ತಿದೆ. ಇದರಿಂದ ಹೊಗೆ, ಬೆಂಕಿ ಕಿಡಿಗಳು ಹೊರಬರುತ್ತಿದ್ದು, ಪಾದಚಾರಿಗಳು, ಗ್ರಾಹಕರು ಭಯದಲ್ಲಿಯೇ ತಿರುಗಾಡುವಂತಾಗಿದೆ.

ಕ್ಯಾರೆ ಎನ್ನದ ಚೆಸ್ಕಾಂ ಅಧಿಕಾರಿ–ಸಿಬ್ಬಂದಿ: ಹೊಸದಾಗಿ ಫುಟ್‌ಪಾತ್ ಅಭಿವೃದ್ಧಿ ಮಾಡುವುದಾಗಿ ಜೋಡಿಸಿರುವ ಸಿಮೆಂಟ್ ಕಲ್ಲುಗಳ ನಡುವೆ ಮಳೆ ಬಂದಾಗಲೆಲ್ಲಾ ಹೊಗೆ, ಬೆಂಕಿಯ ಕಿಡಿ ಹೊರಬರುತ್ತಿದೆ. ಹತ್ತಿರ ಹೋದರೆ ಕರೆಂಟ್ ಶಾಕ್ ಹೊಡೆದಂತಹ ಅನುಭವವಾಗುತ್ತಿದೆ. ಈ ಬಗ್ಗೆ ಮೂರ್‍ನಾಲ್ಕು ಬಾರಿ ಮನವಿ ಮಾಡಿದ್ದೇವೆ. ಹತ್ತಾರು ಬಾರಿ ಫೋನ್ ಮಾಡಿದರೂ ಚೆಸ್ಕಾಂ ಅಧಿಕಾರಿ–ಸಿಬ್ಬಂದಿಗಳು ಯಾವುದಕ್ಕೂ ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ಉದ್ಯಮಿ ಹರೀಶ್‌ಸಿಂಗ್ 'ಮೈಸೂರು ಮಿತ್ರ'ನಲ್ಲಿ ದೂರಿದರು. ಕಳೆದೊಂದೂವರೆ ತಿಂಗಳಿನಿಂದಲೂ ಸಮಸ್ಯೆ ಇದೆ. ಅದರಲ್ಲೂ ಮಳೆ ಬಂದಾಗ ಶಾರ್ಟ್ ಸರ್ಕ್ಯೂಟ್ ಆಗಿ ಹೊಗೆ ಬರುತ್ತಿದೆ. ಹೊಗೆ ಬರುವ ಸ್ಥಳದಲ್ಲಿ ಯಾರು ತಿರುಗಾಡಬಾರದೆಂದು ಪ್ಲಾಸ್ಟಿಕ್ ಚೇರ್ ಇಟ್ಟು ಗಮನಿಸುತ್ತಿದ್ದೇವೆ. ಫೋನ್ ಮಾಡಿದರೆ, ಅಲ್ಲಿದ್ದೇವೆ, ಇಲ್ಲಿದ್ದೇವೆ, ಬರುತ್ತಿದ್ದೇವೆ, ಇನ್ನೂ ಒಂದೂವರೆ ಗಂಟೆಯಾಗುತ್ತೆ ಎಂದು ಹೇಳಿಕೊಂಡೇ ಚೆಸ್ಕಾಂ ಸಿಬ್ಬಂದಿಗಳು ಸಬೂಬು ಹೇಳಿ ಕಾಲ ಕಳೆಯುತ್ತಿದ್ದಾರೆ. ಅದರಲ್ಲೂ ಅಧಿಕಾರಿಗಳು ಫೋನ್ ಮಾಡಿದರೆ ಸ್ವೀಕರಿಸುವುದೇ ಇಲ್ಲ. ಟೋಲ್ ಫ್ರೀ ನಂಬರ್‌ಗೆ ಕರೆ ಮಾಡಿದರೆ ಸ್ವೀಕರಿಸುವವರೇ ದಿಕ್ಕಿಲ್ಲ ಎಂದು ಕಿಡಿಕಾರಿದರು.

ಅನಾಹುತ ಗ್ಯಾರಂಟಿ: ಪ್ರತಿನಿತ್ಯ ಸಾವಿರಾರು ಜನರು ತಿರುಗಾಡುವ ರಸ್ತೆಯ ಫುಟ್‌ಪಾತ್‌ನಲ್ಲಾಗುತ್ತಿರುವ ಶಾರ್ಟ್ ಸರ್ಕ್ಯೂಟ್ ಸಮಸ್ಯೆಯನ್ನು ಬಗೆಹರಿಸದಿದ್ದರೆ ಅನಾಹುತ ಸಂಭವಿಸುವುದು ಗ್ಯಾರಂಟಿ. ಇದಕ್ಕೆ ಚೆಸ್ಕಾಂ ಅಧಿಕಾರಿ–ಸಿಬ್ಬಂದಿಗಳೇ ನೇರ ಹೊಣೆಯಾಗುತ್ತಾರೆ. ತುಂಬಾ ತೊಂದರೆಯಾಗುತ್ತಿದೆ ಬಂದು ಸರಿಪಡಿಸಿ ಎಂದು ಪರಿ ಪರಿಯಾಗಿ ಕೇಳಿಕೊಂಡರು ಬರುತ್ತಿಲ್ಲವೆಂದರೆ ಅವರ ಜವಾಬ್ದಾರಿ ಎಷ್ಟರ ಮಟ್ಟಿಗಿದೆ ಎಂಬುದು ತಿಳಿಯುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೂಡಲೇ ಸರಿಪಡಿಸಿ: ಈಗಾಗಲೇ ಮಳೆಗಾಲ ಆರಂಭವಾಗಿದ್ದು, ಯಾವಾಗ ಏನು ಬೇಕಾದರೂ ಆಗಬಹುದು. ಆದ್ದರಿಂದ ಚೆಸ್ಕಾಂ ಅಧಿಕಾರಿ–ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿ, ಸಮಸ್ಯೆ ಬಗೆಹರಿಸುವಂತೆ ಉದ್ಯಮಿಗಳು ಆಗ್ರಹಿಸಿದ್ದಾರೆ.

ತನ್ನ ಗೋವಾ ರಾಜ್ಯ ಘಟಕದ ಸಂಘಟನೆಯನ್ನು ಸಂಪೂರ್ಣ ವಿಸರ್ಜಿಸಿದ ಎಎಪಿ

ನವದೆಹಲಿ, ಮೇ 27– ಆಮ್ ಆದ್ಮಿ ಪಾರ್ಟಿಯು (ಎಎಪಿ) ತನ್ನ ಗೋವಾ ರಾಜ್ಯ ಘಟಕದ ಸಂಘಟನೆಯನ್ನು ವಿಸರ್ಜಿಸಿದೆ. ಈ ಕುರಿತು ಎಎಪಿ ಶನಿವಾರ ಸಂಜೆ ಟ್ವೀಟ್ ಮಾಡಿದ್ದು, ಎಎಪಿ ಗೋವಾ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಒಂದು ಹೊರತುಪಡಿಸಿ ಘಟಕದ ಎಲ್ಲ ಪದಾಧಿಕಾರಿ ಸ್ಥಾನಗಳು, ಇತರೆ ಸಂಘಟನಾ ಸ್ಥಾನಗಳು ವಿಸರ್ಜನೆಯಾಗಲಿವೆ. ಇದು ತಕ್ಷಣವೇ ಜಾರಿಗೆ ಬರಲಿದೆ ಎಂದು ಎಎಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಡಾ. ಸಂದೀಪ್ ಪಾಠಕ್ ಸುತ್ತೋಲೆ ಮೂಲಕ ತಿಳಿಸಿದ್ದಾರೆ. ಪ್ರಸ್ತುತ ಎಎಪಿ ಗೋವಾ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಅಮಿತ್ ಪಾಲೇಕರ್ ಆ ಸ್ಥಾನದಲ್ಲಿ ಮಾತ್ರ ಮುಂದುವರೆಯಲಿದ್ದು, ಉಳಿದ ಸಂಘಟನಾ ಹುದ್ದೆಗಳನ್ನು ಶೀಘ್ರವೇ ಪುನರ್ ರಚಿಸಲಾಗುವುದು ಎಂದು ತಿಳಿಸಿದ್ದಾರೆ.

ಶಾಸ್ತ್ರೀಯ ಸಂಗೀತಕ್ಕೂ ಹಲ್ಲು ಪುಡಿಗೂ ಅವಿನಾಭಾವ ಸಂಬಂಧ!?

ಬಲವಾಗಿ ಪ್ರತಿಪಾದಿಸುವ ಶಾಸ್ತ್ರೀಯ ಸಂಗೀತ ಗಾಯಕ ಡಾ.ಪಂಡಿತ್ ಪ್ರಸನ್ನ ಮಾಧವ ಗುಡಿ



ಮೈಸೂರು,ಮೇ 27(ಪಿಎಂ)– ಶಾಸ್ತ್ರೀಯ ಸಂಗೀತಕ್ಕೂ ಹಲ್ಲು ಪುಡಿಗೂ ಎಲ್ಲಿಂದೆಲ್ಲಿಯ ಸಂಬಂಧ!? ಹೀಗೆಂದು ಕೇಳಿದರೆ ಇದೆ ಎನ್ನುತ್ತಾರೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗಾಯಕ ಡಾ.ಪಂಡಿತ್ ಪ್ರಸನ್ನ ಮಾಧವ ಗುಡಿ.

ಹೌದು, ಆಯುರ್ವೇದ ಗಿಡ ಮೂಲಿಕೆಗಳಿಗೆ ಶಾಸ್ತ್ರೀಯ ಸಂಗೀತದ ಚಿಕಿತ್ಸೆ ನೀಡಿ, ಬಳಿಕ ಅವುಗಳಿಂದ ಹಲ್ಲಿನ ಪುಡಿ ತಯಾರಿಸಿರುವುದಾಗಿ ತಿಳಿಸಿದ ಅವರು, ಇದರ ಪ್ರತಿದಿನದ ಬಳಕೆಯಿಂದ ನೆಗಡಿ, ಕೆಮ್ಮು ಮತ್ತು ಜ್ವರ ಬರುವುದಿಲ್ಲ. ಧ್ವನಿ ಶುದ್ಧವಾಗುತ್ತದೆ ಎಂದು ಪ್ರತಿಪಾದಿಸಿದರು.

ಧಾರವಾಡ ಮೂಲದ ಇವರು, ಶನಿವಾರ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ತಮ್ಮ ಆವಿಷ್ಕಾರದ ಹಲ್ಲಿನ ಪುಡಿ ಬಗ್ಗೆ ಮಾಹಿತಿ ನೀಡಿದರು. ಗಿಡ ಮೂಲಿಕೆಗಳನ್ನು ಶೇಖರಣೆ ಮಾಡಿ, ಅದರ ಮೇಲೆ ಸ್ವರ ಸಾಧನೆ ಮಾಡುತ್ತೇನೆ. ಸ್ವರ ಸಾಧನೆಗೆ ನಿರ್ದಿಷ್ಟ ಸ್ವರ ಮತ್ತು ರಾಗಗಳಿದ್ದು, ಅವುಗಳನ್ನು ಹಾಡುತ್ತೇನೆ. ನಂತರದಲ್ಲಿ ಆ ಗಿಡಮೂಲಿಕೆಗಳಲ್ಲಿ ಹಲ್ಲು ಪುಡಿ ತಯಾರು ಮಾಡುತ್ತಿದ್ದು, ಇದು ನನ್ನದೇ ಆವಿಷ್ಕಾರ. ಇದು ವಿಶ್ವದಲ್ಲೇ ಮೊದಲು. ಇಲ್ಲಿ ಯಾವುದೇ ವಾಣಿಜ್ಯ ಉದ್ದೇಶವಿಲ್ಲ ಎಂದು ಅವರು ಹೇಳಿದರು.

ಈ ಹಲ್ಲಿನ ಪುಡಿಗೆ 'ಪಾಂತ್ವಸ್ಮಾನ್' ಎಂದು ಹೆಸರು ನೀಡಿದ್ದೇನೆ. 'ಪಾಂತ್ವಸ್ಮಾನ್' ಸಂಸ್ಕೃತ ಪದ. 'ನಮ್ಮನ್ನು ರಕ್ಷಿಸು' ಎಂಬುದು ಈ ಪದದ ಅರ್ಥ. 'ಪಾಂತ್ವಸ್ಮಾನ್ ಮ್ಯೂಸಿಕ್ ಥೆರಪಿ ಹಲ್ಲು ಪುಡಿ ಉತ್ಪನ್ನ' ಶಾಸ್ತ್ರೀಯ ಸಂಗೀತ ಕ್ಷೇತ್ರದ ಒಂದು ದೊಡ್ಡ ಸಾಧನೆ ಎಂದರು.

ನನ್ನ ಸಂಶೋಧನೆಯಲ್ಲಿ ಈ ಉತ್ಪನ್ನ ಯಶಸ್ವಿಯಾಗಿದ್ದು, ಇದೇ ರೀತಿಯಲ್ಲಿ ಬೇರೆ ಬೇರೆ ಉತ್ಪನ್ನಗಳ ಉತ್ಪಾದನೆಗೆ ಸಂಶೋಧನೆಯಲ್ಲಿ ತೊಡಗಿದ್ದೇನೆ. ಸಂಗೀತ ಕೇವಲ ಮನರಂಜನೆಗೆ ಸೀಮಿತವಲ್ಲ. ಅದು ನಮ್ಮ ಆರೋಗ್ಯ ಸುಧಾರಣೆಗೂ ಸಹಕಾರಿ. ಇದರ ತಯಾರಿಕೆಗೆ ಆಯುರ್ವೇದದ ಸಹಾಯ ಪಡೆದಿದ್ದೇನೆ. ಈ ಉತ್ಪನ್ನವನ್ನು ಮಳಿಗೆಯಲ್ಲಿ ಇಟ್ಟು ಮಾರುವುದಿಲ್ಲ. ಕೇಳಿದರೆ ಒದಗಿಸುತ್ತೇನೆ. ಬಡವರಿಗೆ ಉಚಿತವಾಗಿ ಕೊಡುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

ಕುಕ್ಕರಹಳ್ಳಿ ಕೆರೆ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್

ಕೆರೆ ಆವರಣದಲ್ಲಿ ವಿಹರಿಸಿದ ನಂತರ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ರಾಜೇಂದ್ರ ಸೂಚನೆ





ಮೈಸೂರು, ಮೇ 27(ಆರ್‌ಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಸಮಗ್ರ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ತಯಾರಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ ಲೋಕನಾಥ್, ಕುಲಸಚಿವೆ ಶೈಲಜಾ, ಪರಿಸರವಾದಿ ಪ್ರೊ. ಎಂ. ರವಿಕುಮಾರ್ ಅವರೊಂದಿಗೆ ಇಂದು ಬೆಳಗ್ಗೆ ಕುಕ್ಕರಹಳ್ಳಿ ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ನಿತ್ಯ ಬೆಳಗ್ಗೆ ಮತ್ತು ಸಂಜೆ ಸಾವಿರಾರು ಮಂದಿ ವಾಯುವಿಹಾರ ಮಾಡುವ ಹಾಗೂ ಅಂತರ್ಜಲ ವೃದ್ಧಿಗೆ ಸಹಕಾರಿಯಾಗುವ ಕೆರೆಯನ್ನು ಅಭಿವೃದ್ಧಿಪಡಿಸಿ ಸಂರಕ್ಷಿಸಬೇಕಾಗಿದೆ ಎಂದರು.

ಜಾಗಿಂಗ್ ಟ್ರ್ಯಾಕ್, ಬೋಟ್‌ಗಳ ದುರಸ್ತಿ, ಸ್ವಚ್ಛತೆ, ಕೆರೆ ಏರಿ ಸುಭದ್ರತೆ, ತ್ಯಾಜ್ಯ ವಿಲೇವಾರಿ, ಸೇತುವೆಗಳ ರಿಪೇರಿ, ಜಲಚರಗಳಿಗೆ ತೊಂದರೆಯಾಗದಂತೆ ಅಗತ್ಯ ಕ್ರಮ ವಹಿಸಲು ಯೋಜನೆ ರೂಪಿಸಿ ಮಾಸ್ಟರ್ ಪ್ಲಾನ್ ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ಅವರು ಸೂಚನೆ ನೀಡಿದರು.

ಈ ಸಂದರ್ಭ ಉಪಸ್ಥಿತರಿದ್ದ ಪರಿಸರವಾದಿ ಪ್ರೊ. ಎಂ. ರವಿಕುಮಾರ್ ಮಾತನಾಡಿ, ಕುಕ್ಕರಹಳ್ಳಿ ಕೆರೆಯು ಹಲವು ಜೀವವೈವಿಧ್ಯತೆಗಳಿಂದ ಕೂಡಿದ್ದು, ಪರಿಸರ ವ್ಯವಸ್ಥೆ ಸ್ವಾಭಾವಿಕವಾಗಿ ರೂಪುಗೊಂಡಿದೆ. ಅವುಗಳಿಗೆ ತೊಂದರೆಯಾಗದಂತೆ ಸಾರ್ವಜನಿಕರಿಗೆ ಉಪಯುಕ್ತವಾಗುವ ರೀತಿಯಲ್ಲಿ ಅಭಿವೃದ್ಧಿ ಕೆಲಸ ಮಾಡಬೇಕಿದೆ ಎಂದು ಸಲಹೆ ನೀಡಿದರು.

ಅತೀ ಹೆಚ್ಚು ಮಳೆ ಬಿದ್ದಾಗ ರಾಜ ಕಾಲುವೆಗಳಿಂದ ಬರುವ ನೀರು ಕೋಡಿ ಬಿದ್ದು ಏರಿ ಜಖಂಗೊಳ್ಳುತ್ತಿದೆ. ಒಳ ಚರಂಡಿ ನೀರು ಸಹ ಹರಿದು ಬಂದು ಕೆರೆಗೆ ಸೇರುತ್ತಿರುವುದರಿಂದ ಜಲಚರ, ಪಕ್ಷಿ ಸಂಕುಲಕ್ಕೂ ತೊಂದರೆಯಾಗುತ್ತಿರುವುದರಿಂದ ಅಭಿವೃದ್ಧಿ ಮಾಡುವಾಗ ಈ ಸಮಸ್ಯೆಗೂ ಶಾಶ್ವತ ಪರಿಹಾರ ಒದಗಿಸಬೇಕೆಂದೂ ಅವರು ತಿಳಿಸಿದರು.

ನಿತ್ಯ ವಾಯುವಿಹಾರ ಮಾಡುವವರ ಜೊತೆಗೆ ಬೆಳಗ್ಗೆ 9ರಿಂದ ಸಂಜೆ 4 ಗಂಟೆವರೆಗೂ ಸಾರ್ವಜನಿಕರು, ಯುವಕ–ಯುವತಿಯರು ಕೆರೆ ಆವರಣದಲ್ಲಿ ಓಡಾಡುತ್ತಿರುತ್ತಾರೆ. ಇಲ್ಲಿನ ಸ್ವಚ್ಛತೆ ಹಾಳಾಗುತ್ತಿದೆ. ಪ್ರವೇಶ ನಿಯಮಿತಗೊಳಿಸಿ ವ್ಯವಸ್ಥಿತವಾಗಿ ನಿರ್ವಹಣೆ, ಭದ್ರತೆ ಮಾಡಬೇಕು ಎಂದು ಸಾರ್ವಜನಿಕರು ಇದೇ ಸಂದರ್ಭ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : 'ಗಾಳಿಪಟ ಎಷ್ಟೇ ದೂರ ಹೋದ್ರು ದಾರ ನಮ್ಮ ಕೈಯಲ್ಲೇ ಇರುತ್ತೆ' ಇದಕ್ಕೆ ಒಂದು ಉದಾಹರಣೆ ಕೊಡು...

ವಿದ್ಯಾರ್ಥಿ : ಮೆಸೇಜ್ ಎಷ್ಟೇ ದೂರ ಹೋದ್ರು ಮೊಬೈಲ್ ನಮ್ಮ ಕೈಯಲ್ಲೇ ಇರುತ್ತೆ...!

ಮೈಸೂರು ಮಿತ್ರ

ಭಾನುವಾರ, 28 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಇಚ್ಛಾಶಕ್ತಿ, ನಿರ್ಧಾರ, ಸಾಧನೆ ಯಶಸ್ವಿ ಜೀವನದ ಸೂತ್ರಗಳು.

– ಅಲ್ಡಸ್ ಹಕ್ಸ್ಲಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮುಳ್ಳು ಇಲ್ಲದೆ ಗುಲಾಬಿ ಇಲ್ಲ, ನೋವು ಇಲ್ಲದೆ ಪ್ರೀತಿಯಿಲ್ಲ

ನಿಮ್ಮ ಪತ್ರಗಳು

ಮಾದರಿ ಆದರ್ಶ ಶಾಲೆಗಳ ದಾಖಲಾತಿ ತಡವೇಕೆ?

ಮಾನ್ಯರೆ,

ಕರ್ನಾಟಕ ಸರ್ಕಾರವು ಪ್ರತಿಭಾವಂತ ಗ್ರಾಮೀಣ ವಿದ್ಯಾರ್ಥಿಗಳನ್ನು ಗುರುತಿಸಿ, ವಿದ್ಯಾರ್ಥಿಗಳ ಸಮಗ್ರ, ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗುವ ಅತ್ಯುತ್ತಮ, ಗುಣಮಟ್ಟದ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ, ಮಾದರಿ ಆದರ್ಶ ವಿದ್ಯಾಲಯಗಳನ್ನು, ಕೇಂದ್ರೀಯ ಶಾಲೆಯ ಮಾದರಿಯಲ್ಲಿ, ಅಗತ್ಯವಿರುವ ಕಡೆಗಳಲ್ಲಿ ರಾಜ್ಯಾದ್ಯಂತ ತೆರೆದಿದ್ದು, ಈ ಶಾಲೆಗಳಲ್ಲಿ 6ನೇ ತರಗತಿಯಿಂದ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಲು, 2023–24ನೇ ಸಾಲಿಗಾಗಿ ಮಾರ್ಚ್ 26ರಂದು ಪ್ರವೇಶ ಪರೀಕ್ಷೆ ನಡೆಸಿ, ಏಪ್ರಿಲ್ 15 ರಂದು ಪಡೆದ ಅಂಕಗಳನ್ನು ಮಾತ್ರ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ. ಅದಷ್ಟು ಬಿಟ್ಟರೆ ಪರೀಕ್ಷೆ ನಡೆಸಿ ಎರಡು ತಿಂಗಳಾದರೂ ದಾಖಲಾತಿಯ ಪ್ರಕ್ರಿಯೆಯು ಇನ್ನೂ ಪ್ರಾರಂಭವಾಗಿಲ್ಲ, ಈ ಶಾಲೆಗೆ ದಾಖಲಾತಿಯನ್ನು ಬಯಸಿದ ವಿದ್ಯಾರ್ಥಿಗಳು ಮತ್ತು ಪೋಷಕರು ಒಂದು ರೀತಿಯ ಆತಂಕ ಮತ್ತು ಗೊಂದಲದಲ್ಲಿದ್ದಾರೆ, ವಿದ್ಯಾರ್ಥಿ ಆಯ್ಕೆಯ ಫಲಿತಾಂಶಕ್ಕಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ, ಆದರೆ ಈಗಾಗಲೇ ಖಾಸಗಿ ಶಾಲೆಗಳ ವಿದ್ಯಾರ್ಥಿಗಳ ದಾಖಲಾತಿ ಮತ್ತು ಪಾಠ ಪ್ರವಚನಗಳು ಪ್ರಾರಂಭಿಸಿರುವುದರಿಂದ ಹಾಗೂ ಸರ್ಕಾರಿ ಶಾಲೆಗಳು ಮೇ 29 ರಿಂದ ಪ್ರಾರಂಭವಾಗುತ್ತವೆ, ಆದರ್ಶ ಶಾಲೆಗಳ ವಿದ್ಯಾರ್ಥಿಗಳ ಅಂಕಗಳ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆಯು ಅತಿ ಶೀಘ್ರದಲ್ಲಿ ಪ್ರಾರಂಭವಾದರೆ ಪೋಷಕರಿಗೆ ದಾಖಲಾತಿಯು ಖಾತ್ರಿಯಾಗುತ್ತದೆ, ಒಂದು ವೇಳೆ ದಾಖಲಾತಿ ಸಿಗಲಿಲ್ಲವೆಂದರೆ ಬೇರೆ ಶಾಲೆಗಳಿಗೆ ದಾಖಲಾತಿಯನ್ನು ಮಾಡಬಹುದು, ಆದರೆ ಆದರ್ಶ ಶಾಲೆಯ ಫಲಿತಾಂಶವೇ ಪ್ರಕಟಗೊಂಡಿಲ್ಲದೇ ಇರುವುದರಿಂದ ಪೋಷಕರಿಗೆ ಚಿಂತೆಗೀಡು ಮಾಡಿದೆ, ಆದ್ದರಿಂದ ಆದರ್ಶ ಶಾಲೆಗಳ ದಾಖಲಾತಿಯ ಪ್ರಕ್ರಿಯೆಯನ್ನು ಸಂಬಂಧಪಟ್ಟವರು ಅತಿ ಶೀಘ್ರದಲ್ಲಿ ಪ್ರಾರಂಭಿಸಿದರೆ ಪೋಷಕರು ಮತ್ತು ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ದಾಖಲಾತಿಯಿಂದ ವಂಚಿತರಾಗುತ್ತಾರೆ, ಆದ್ದರಿಂದ ಅತಿ ಶೀಘ್ರದಲ್ಲಿ ಆದರ್ಶ ಶಾಲೆಗಳ, ದಾಖಲಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಲು ಮನವಿ..

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಕೈ ತೋರಿದಲ್ಲಿ ನಿಲ್ಲದ ನಗರ ಸಾರಿಗೆ ಬಸ್ಸು


ಮಾನ್ಯರೆ,

ಮೈಸೂರು ನಗರ ಸಾರಿಗೆ ಬಸ್ಸು 82ಎ (ಸಂಖ್ಯೆ ಕೆಎ 09 ಎಫ್ 4509) ಶುಕ್ರವಾರ (ಮೇ 26) ಬೆಳಿಗ್ಗೆ ಸುಮಾರು 9 ಗಂಟೆ ಸುಮಾರಿನಲ್ಲಿ ವಿವೇಕಾನಂದ ವೃತ್ತದ ಬಸ್ ನಿಲ್ದಾಣದಲ್ಲಿ ನಾಲ್ಕು ಜನ ಪ್ರಯಾಣಿಕರು ಕೈ ತೋರಿಸಿದರೂ ನೋಡಿಯೂ ನೋಡದವರಂತೆ ಬಸ್ಸನ್ನು ನಿಲ್ಲಿಸದೇ ಹೊರಟು ಹೋಯಿತು. ಈ ಬಸ್ಸು ನಗರ ಬಸ್ ನಿಲ್ದಾಣದಿಂದ ಬಿಇಎಂಎಲ್ ಕಡೆಗೆ ಹೋಗುವಾಗ ಅಗ್ರಹಾರ, ಬಲ್ಲಾಳ್ ವೃತ್ತ ಹಾಗೂ ಆರ್‌ಎಂಪಿ ಮಾರ್ಗವಾಗಿ ಚಲಿಸುತ್ತದೆ. ವಾಪಸ್ಸು ಬರುವಾಗ ವಿವೇಕಾನಂದ ವೃತ್ತ, ಆರ್‌ಟಿಓ, ಮೆಟ್ರೋಪೋಲ್, ರೈಲು ನಿಲ್ದಾಣದ ಮಾರ್ಗವಾಗಿ ನಗರ ಬಸ್ ನಿಲ್ದಾಣವನ್ನು ಸೇರುತ್ತದೆ. ಈ ಬಸ್ಸಿನಲ್ಲಿ ಚಾಲಕ ಹಾಗೂ ನಿರ್ವಾಹಕ ಒಬ್ಬರೇ ಇದ್ದರು. ಅಲ್ಲಿದ್ದ ಪ್ರಯಾಣಿಕರು ಶ್ರೀರಾಂಪುರದ ನೀರಿನ ಟ್ಯಾಂಕ್ ಬಳಿ ಇರುವ ಮದುವೆ ಸಮಾರಂಭಕ್ಕೆ ಹೋಗಲು ಅಲ್ಲಿ ಕಾಯುತ್ತಿದ್ದರು.

ಬಸ್ಸು ಖಾಲಿ ಇದ್ದರೂ ಸಹ ಬಸ್ಸನ್ನು ನಿಲ್ಲಿಸಲಿಲ್ಲ. ಈಗ ನಗರದಲ್ಲಿ ಬಹುತೇಕ ಎಲ್ಲೆಡೆ ರಸ್ತೆ ಡುಬ್ಬಗಳಿದ್ದು, ಏನನ್ನೂ ಲೆಕ್ಕಿಸದೇ ಸುಮ್ಮನೆ ಹೊಡೆದುಕೊಂಡು ಹೋಗುತ್ತಾರೆ. ವಯಸ್ಸಾದವರು ಹಿಂದಿನ ಸೀಟಿನಲ್ಲಿ ಕುಳಿತಿದ್ದರೆ ಅವರಿಗೆ ಈ ರಭಸದಿಂದ ಹೃದಯಾಘಾತ ಆಗುವ ಸಂಭವವಿರುತ್ತದೆ. ಇನ್ನು ಚಿಲ್ಲರೆ ವಿಷಯಕ್ಕೆ ಬಂದರೆ ನಿರ್ವಾಹಕರ ಬಳಿ ಸಾಕಷ್ಟು ಚಿಲ್ಲರೆ ಇದ್ದರೂ, ಟಿಕೆಟ್ ಮೇಲೆ ಬರೆದು, ಇಳಿಯುವಾಗ ಈಸಿಕೊಳ್ಳಿ ಎನ್ನುತ್ತಾರೆ. ಎಷ್ಟೋ ಮಂದಿ ಚಿಲ್ಲರೆ ಲೆಕ್ಕಿಸದೆ ಇಳಿದು ಹೋಗುತ್ತಾರೆ. ಅಪ್ಪಿ ತಪ್ಪಿ ಇಳಿಯುವಾಗ ಚಿಲ್ಲರೆ ಕೇಳಿದರೆ ಇಬ್ಬರಿಗೆ ಅಂಟಾಕಿ ಬಿಡುತ್ತಾರೆ. ಇದು ದಿನನಿತ್ಯದ ಕಥೆ. ರೂಟ್ ನಂ.82ಎ ಬಸ್ಸಿನಲ್ಲಿ ಇನ್ನು ಮುಂದೆ ಚಾಲಕರ ಜೊತೆ ನಿರ್ವಾಹಕರೂ ಕಾರ್ಯ ನಿರ್ವಹಿಸಲಿ. ಆಗಲಾದರೂ ಎಲ್ಲ ನಿಲ್ದಾಣಗಳಲ್ಲಿ ಬಸ್ಸು ನಿಲ್ಲಲು ಸಹಕಾರಿಯಾಗುತ್ತದೆ.

– ಎಂ.ಬಿ.ಸುರೇಶ್, ವಿವೇಕಾನಂದನಗರ, ಮೈಸೂರು

ಕನ್ನಡ ವಿಮರ್ಶಾ ಕ್ಷೇತ್ರದ ಅಮೂಲ್ಯ ಕೊಡುಗೆ ಪ್ರೊ.ನಾಯಕ್




ಮಾನ್ಯರೆ,

ಕನ್ನಡ ಸಾರಸ್ವತ ಲೋಕದ ಹಿರಿಯ ಚೇತನ, ಪ್ರಖ್ಯಾತ ವಿಮರ್ಶಕ, ಪ್ರಖಂಡ ವಾಗ್ಮಿ, ಚಿಂತಕ ಪ್ರೊ. ಜಿ.ಹೆಚ್. ನಾಯಕ್ ಅವರು (88) ವಯೋಸಹಜ ಆರೋಗ್ಯ ಸಮಸ್ಯೆಗಳಿಂದಾಗಿ ನಮ್ಮನ್ನು ಅಗಲಿದ್ದಾರೆ. ನಾಡಿನ ಓರ್ವ ಪ್ರಖ್ಯಾತ ವಿಮರ್ಶಕರಾಗಿ ಪ್ರೊ.ಜಿ.ಹೆಚ್.ನಾಯಕ್ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದರು. ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ಸೂರ್ವೆ ಗ್ರಾಮದಲ್ಲಿ ಜನಿಸಿದ್ದರೂ, ಪ್ರೊ. ನಾಯಕ್ ಅವರು ಮೈಸೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿ, ನೂರಾರು ಪ್ರಗತಿ ಪರ ಚಳವಳಿಗಳ ಪ್ರೇರಕ ಶಕ್ತಿಯಾಗಿದ್ದರು. ಮೈಸೂರು ವಿವಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತಿಯಾದ ನಂತರ, ಮೈಸೂರಿನಲ್ಲೇ ನೆಲೆಸಿದ್ದರು. ನಂತರ 1994–95 ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಹಾಗೂ 1996–97 ರಲ್ಲಿ ಮೈಸೂರಿನ ಕುವೆಂಪು ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಜಿ.ಹೆಚ್.ನಾಯಕ್ ಅಂದರೆ ನಮಗೆ ತಕ್ಷಣಕ್ಕೆ ನೆನಪಾಗುವುದು ಅವರ ದಿಟ್ಟ ನಡೆ, ನುಡಿ ಹಾಗೂ ಸೌಜನ್ಯಪೂರ್ಣ ನಡವಳಿಕೆ. ರಾಜ್ಯದ ಹಲವಾರು ಪ್ರಗತಿ ಪರ ಚಳುವಳಿಗಳಿಗೆ ಸಾಕ್ಷಿಭೂತರಾಗಿದ್ದ ಪ್ರೊ.ನಾಯಕ್ ಹಲವಾರು ಮೌಲಿಕ ಕೃತಿಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದರು. ಶ್ರೀಯುತರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ಪ್ರತಿಷ್ಠಿತ ಪಂಪ ಪ್ರಶಸ್ತಿ ಸೇರಿದಂತೆ, ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿದ್ದವು. ಮೈಸೂರಿನ ಸಾಂಸ್ಕೃತಿಕ ಜಗತ್ತಿನ ಅವಿಭಾಜ್ಯ ಅಂಗವಾಗಿದ್ದ ಪ್ರೊ.ನಾಯಕ್ ಬಹುಕಾಲ ನೆನಪಿನಲ್ಲಿ ಉಳಿಯುವಂತಹ ವ್ಯಕ್ತಿತ್ವ ಹೊಂದಿದವರಾಗಿದ್ದು, ಅವರಿಗೆ ಗೌರವಪೂರ್ವಕ ಶ್ರದ್ಧಾಂಜಲಿಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಜೀವನ ರೂಪಿಸಿಕೊಳ್ಳುವುದು, ಅನುಭವಿಸುವುದೂ ಕಲೆಯೇ!

ಯಾರಿಗೆ ಸಾಧನೆ ಮಾಡಲಾಗುವುದಿಲ್ಲವೋ, ಅವರ ಮನಸ್ಸು ಇಂತಹ ವಿಚಿತ್ರ ಆಲೋಚನೆಗಳಿಗೆ ಆಸ್ಪದ ನೀಡುತ್ತದೆ. ಜೀವನದಲ್ಲಿ ನಾವು ಮುಖ್ಯವಾಗಿ ಯಾವುದೂ ಅಷ್ಟು ಸುಲಭವಾಗಿ ದಕ್ಕುವುದಿಲ್ಲ ಎಂದು. ಜೀವನ ಎನ್ನುವುದು ಐಷಾರಾಮಿ ವಸ್ತುವಲ್ಲ. ಅದನ್ನು ಐಷಾರಾಮಿಯಾಗಿಸಿಕೊಳ್ಳಬೇಕಾದರೆ ಕಷ್ಟಪಡಲೇಬೇಕಾಗುತ್ತದೆ. ಆದರೆ ಕಷ್ಟ ಅಭ್ಯಾಸವಾದಾಗ ಐಷಾರಾಮಿ ಬದುಕು ಬೇಡ ಎನ್ನಿಸುತ್ತದೆ ಎಂಬುದೂ ವಾಸ್ತವವೇ!!.

ಸಾಮಾನ್ಯವಾಗಿ ನಾವು ಅಂದುಕೊಂಡಂತಹ ಜೀವನ ನಮಗೆ ದೊರಕಿರುವುದಿಲ್ಲ. ನಾವು ಏನೋ ಆಗಬೇಕೆಂದುಕೊಂಡಿದ್ದೆವು, ಆದರೆ ದುರದೃಷ್ಟ ಹಾಗೆ ಆಗಲಿಲ್ಲ, ಕೊನೆಗೆ ಹೀಗೆ ಜೀವನ ಮಾಡಬೇಕಾಯಿತು!! ಎಂದು ಬೇಸರದಿಂದ ಹೇಳುವಂತಹ ಸಾಕಷ್ಟು ಜನರು ನಮಗೆ ನಮ್ಮ ಸುತ್ತಮುತ್ತ ಕಂಡು ಬರುತ್ತಾರೆ. ಕೊನೆಗೆ ನಾವೂ ಸಹ ಕೆಲವೊಮ್ಮೆ ಇಂತಹ ಅಭಿಪ್ರಾಯ ವ್ಯಕ್ತಪಡಿಸಿರಲೂ ಬಹುದು. ಯಾರಾದರೂ ನಮ್ಮನ್ನು ಹೊಗಳಿ ನೀವು ಇನ್ನೂ ಉನ್ನತ ಹುದ್ದೆಯಲ್ಲಿರಬೇಕಾಗಿತ್ತು, ನಿಮಗೆ ಇನ್ನಷ್ಟು ಮಾನ–ಸಮ್ಮಾನಗಳು ದೊರಕಬೇಕಾಗಿತ್ತು ಎಂದು ಹೇಳಿದಾಗ, ನಾವೂ 'ಏನು ಮಾಡುವುದು? ನನ್ನ ಅದೃಷ್ಟ ಕೈಕೊಟ್ಟಿತು' ಎಂದು ಬೇಸರಿಸಿಕೊಂಡಿರುತ್ತೇವೆ. ಆದರೆ ಸಾಮಾನ್ಯವಾಗಿ ನನಗೇನಾಗಿದೆ, ನನ್ನ ಅರ್ಹತೆಗೆ ತಕ್ಕಂತಹ ಕೆಲಸವೇ ಸಿಕ್ಕಿದೆ, ನಾನು ಇದರಲ್ಲೇ ತೃಪ್ತನಾಗಿದ್ದೇನೆ ಎಂದು ಹೇಳುವವರ ಸಂಖ್ಯೆ ಕಡಿಮೆಯೇ. ಕೆಲವರಿಗೆ ತಮ್ಮ ತಂದೆಯಿಂದ ಅಥವಾ ಕುಟುಂಬದವರ ಮೂಲ ವೃತ್ತಿಯ ಅನಿವಾರ್ಯವಾಗಿರುತ್ತದೆ, ಅದರಲ್ಲಿ ಅವರು ಚೆನ್ನಾಗಿಯೇ ಸಂಪಾದನೆಯನ್ನೂ ಮಾಡುತ್ತಿರುತ್ತಾರೆ, ಅದರಲ್ಲೇ ಪ್ರತಿಷ್ಠೆ, ಗೌರವ ದೊರಕಿರುತ್ತದೆ. ಆದರೂ ಮನಸ್ಸಿನಲ್ಲಿ ನಾನು ಇನ್ನೂ ಏನೋ ಆಗಬೇಕಾಗಿತ್ತು ಎಂಬ ಕೊರಗು ಸದಾ ಇರುತ್ತದೆ. ಇರಬಹುದು, ಕೆಲವರಿಗೆ ಹೀಗೆ ಯೋಚಿಸುವುದಕ್ಕೂ ಸಮಯ ಸಿಗದೆ, ಅವರು ತಮ್ಮ ಜೀವನದ ಬಗ್ಗೆ ಏನೂ ಹೇಳದಿರಬಹುದು. ಆದರೂ ಸಾಮಾನ್ಯವಾಗಿ ನಮ್ಮ ಮನಸ್ಸಿನಲ್ಲಿ ನಾನು ಏನೋ ಆಗಬೇಕಾಗಿತ್ತು, ಹಾಗಾಗಲಿಲ್ಲ ಎಂಬ ಸಣ್ಣ ಕೊರಗಂತೂ ಇದ್ದೇ ಇರುತ್ತದೆ.

ನಮಗೆ ಊಟದ ಕೊರತೆ ಇದ್ದಾಗ ಊಟದ ಬೆಲೆ ಅರಿವಾಗುತ್ತದೆ. ಊಟ ಸಮೃದ್ಧವಾಗಿ ದೊರಕಿದಾಗ, ಊಟದ ಬಗ್ಗೆ ಆಸಕ್ತಿ ಕಡಿಮೆಯಾಗುತ್ತದೆ. ಹಾಗೆ ವಾಸದ ಮನೆಯಿಲ್ಲದಿದ್ದಾಗ ವಾಸಕ್ಕೆ ಸಣ್ಣ ಮನೆಯಾದರೂ ಬೇಕು ಎನ್ನಿಸುತ್ತಿರುತ್ತದೆ. ಅದೂ ದೊರಕಿದಾಗ ಮನಸ್ಸು ಮತ್ತೇನನ್ನೋ ಬಯಸುತ್ತದೆ. ಇದು ಒಂದು ರೀತಿ ಎಲ್ಲರ ಮನಸ್ಥಿತಿ ಎನ್ನಬಹುದು. ಶೇಕಡಾ ಹತ್ತು ಜನರೂ ನಮ್ಮ ಬದುಕಿನಲ್ಲಿ ಸಂತೃಪ್ತಿ ಇದೆ ಎಂದು ಹೇಳುವುದಿಲ್ಲ. ಸಂಗೀತಗಾರರ ಕುಟುಂಬದ ಸದಸ್ಯನಿಗೆ ಸಂಗೀತ ತಾನಾಗೇ ಒಲಿದಿರುತ್ತದೆ. ಅವನು ಅದನ್ನು ಜೀವನಕ್ಕೆ ಆಶ್ರಯಿಸಿಕೊಳ್ಳಬಹುದು. ಆದರೆ ಅವನಿಗೆ ತನ್ನ ತಂದೆ–ತಾತನಿಗಿಂತ ಹೆಚ್ಚಿನ ಪ್ರಸಿದ್ಧಿ ಗೌರವ ದೊರಕದಿರಬಹುದು. ಆದರೆ ಅದಕ್ಕೆ ಬೇಸರಿಸದೆ ಕಾರಣ ಕಂಡುಕೊಳ್ಳಬೇಕು. ತಮ್ಮ ಹಿರಿಯರು ಅಂತಹ ಗೌರವ ಪಡೆಯಲು ಅದೆಷ್ಟು ಶ್ರಮವಹಿಸಿದರು? ಅವರು ಈಗಲೂ ಹೇಗೆ ಸಾಧನೆ ಮಾಡುತ್ತಿದ್ದಾರೆ? ನಾನು ಹಾಗೆ ಸಾಧನೆ ಮಾಡುತ್ತಿದ್ದೇನೆಯೇ? ಎಂದು ಅವಲೋಕಿಸಿಕೊಳ್ಳಬೇಕು. ಯಾರಿಗೆ ಸಾಧನೆ ಮಾಡಲಾಗುವುದಿಲ್ಲವೋ, ಅವರ ಮನಸ್ಸು ಇಂತಹ ವಿಚಿತ್ರ ಆಲೋಚನೆಗಳಿಗೆ ಆಸ್ಪದ ನೀಡುತ್ತದೆ. ಜೀವನದಲ್ಲಿ ನಾವು ಮುಖ್ಯವಾಗಿ ಯಾವುದೂ ಅಷ್ಟು ಸುಲಭವಾಗಿ ದಕ್ಕುವುದಿಲ್ಲ ಎಂದು.

ಜೀವನ ಎನ್ನುವುದು ಐಷಾರಾಮಿ ವಸ್ತುವಲ್ಲ. ಅದನ್ನು ಐಷಾರಾಮಿಯಾಗಿಸಿಕೊಳ್ಳಬೇಕಾದರೆ ಕಷ್ಟ ಪಡಲೇಬೇಕಾಗುತ್ತದೆ. ಆದರೆ ಕಷ್ಟ ಅಭ್ಯಾಸವಾದಾಗ ಐಷಾರಾಮಿ ಬದುಕು ಬೇಡ ಎನ್ನಿಸುತ್ತದೆ ಎಂಬುದೂ ವಾಸ್ತವವೇ!!. ನಾನು ಗಮನಿಸಿದಂತೆ ಬಸ್‌ಸ್ಟ್ಯಾಂಡ್‌ನಲ್ಲಿ ಪತ್ರಿಕೆ ಮಾರುತ್ತಿದ್ದ ಇಬ್ಬರು ಹುಡುಗರ ಪೈಕಿ ಇಬ್ಬರೂ ಬದುಕನ್ನು ಬೇರೆಬೇರೆಯಾಗಿ ಕಂಡುಕೊಂಡಿದ್ದನ್ನು ಕಂಡಿದ್ದೇನೆ. ಒಬ್ಬ ಪತ್ರಿಕೆ ಮಾರಾಟದ ನಡುವೆ ಸಮಯ ಸಿಕ್ಕಿದಾಗ ತನ್ನ ಕೈಯಲ್ಲಿರುತ್ತಿದ್ದ ಪತ್ರಿಕೆ ಓದುತ್ತಿದ್ದ. ಅವನಿಗೆ ಪತ್ರಿಕೆ ಓದುವುದು ಹವ್ಯಾಸವಾಯಿತು. ತಾನೂ ಅದರ ಓದುಗರ ಪತ್ರ ವಿಭಾಗಕ್ಕೆ ಒಮ್ಮೆ ಯಾವುದೋ ಪುಟ್ಟ ವಿಷಯದ ಬಗ್ಗೆ ಒಂದು ಪತ್ರ ಬರೆದ. ಆ ಪತ್ರ ಪ್ರಕಟವಾದಾಗ ಅವನ ಜೀವನ ಕ್ರಮವೇ ಬದಲಾಯಿತು. ಅವನಿಗೆ ನಾನೂ ಏನಾದರೂ ಬರೆಯಬಲ್ಲೆ, ಬರೆಯಬೇಕು ಎಂಬ ಮನೋಭಾವ ವೃದ್ಧಿಯಾಯಿತು. ಅಲ್ಲಿಯವರೆಗೆ ಒಂದು ಪತ್ರಿಕೆ ಓದುತ್ತಿದ್ದವನು ಮತ್ತೊ ಒಂದು ಪತ್ರಿಕೆಯನ್ನೂ ಓದತೊಡಗಿದ. ಅವನಿಗೆ ಅಲ್ಲಿ ತನ್ನ ಜೀವನ ಕಂಡುಕೊಳ್ಳಬಹುದಾದ ಹಲವು ವಿಷಯಗಳು ದೊರಕಿದವು. ಮುಂದೆ ಆತ ಸಾಹಿತಿಯಾಗಿ ಸಮಾಜಕ್ಕೆ ಮಾರ್ಗದರ್ಶನ ಮಾಡುವಂತಾದ. ಮತ್ತೊಬ್ಬ ಪತ್ರಿಕೆ ಮಾರುತ್ತಿದ್ದ ಹುಡುಗ ಇಂತಹ ಚಟುವಟಿಕೆ ಇಲ್ಲದೆ ಯಾಂತ್ರಿಕವಾಗಿ ಪತ್ರಿಕೆ ಮಾರುತ್ತಿದ್ದ. ಮುಂದೆ ಮೊದಲ ಹುಡುಗ ತಾನೇ ಒಂದು ಪತ್ರಿಕೆ ಆರಂಭಿಸಿದ. ಅವನಿಗೆ ಪತ್ರಿಕೆಯೂ ಒಳಹೊರಗು ತಿಳಿದಿದ್ದರಿಂದ ಪತ್ರಿಕೆಯು ಪ್ರಸಿದ್ಧಿಯಾಯಿತು. ವಿಶೇಷ ಎಂದರೆ ಎರಡನೇ ಹುಡುಗ ಆ ಪತ್ರಿಕೆ ಮಾರುವವನಾದ. ಇದು ಜೀವನ.


ಇದೇ ವೇಳೆ ಒಂದು ಕಥೆ ನೆನಪಾಗುತ್ತದೆ. ಇದು ಕಥೆಯೂ ಹೌದು, ಜೀವನದ ನಿಜ ಸಂಗತಿಯೂ ಹೌದು. ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಕಿ. ಅವರು ಕೆಲಸಕ್ಕಾಗಿ ಕೆಲಸ ಮಾಡುವವರಾಗಿರಲಿಲ್ಲ. ತಮ್ಮ ವಿದ್ಯಾರ್ಥಿಗಳಿಗೆ ಏನಾದರೂ ವಿಶೇಷವಾದುದ್ದನ್ನು ಕಲಿಸಬೇಕೆಂದು ಸದಾ ಯೋಚಿಸುತ್ತಿದ್ದರು. ಒಮ್ಮೆ ಬಿಡುವಿನ ಸಮಯದಲ್ಲಿ ಅವರು ವಿದ್ಯಾರ್ಥಿಗಳಿಗೆ ಒಂದು ಕೆಲಸ ನೀಡಿದರು. ತಾವೇ ತಂದಿದ್ದ ಪೇಪರುಗಳನ್ನು ವಿದ್ಯಾರ್ಥಿಗಳಿಗೆ ನೀಡಿ, ಅದರಲ್ಲಿ ಆ ತರಗತಿಯಲ್ಲಿರುವ ತನ್ನ ಸಹಪಾಠಿಗಳ ಹೆಸರು ಬರೆಯಲು ತಿಳಿಸಿದರು. ಹಿಂದೆಮುಂದೆ ನೋಡುವಂತಿಲ್ಲ, ನೆನಪಿನ ಆಧಾರದ ಮೇಲೆ ಬರೆಯಬೇಕು. ಬರೆಯುವಾಗ ಪ್ರತಿ ಸಾಲಿನ ನಡುವೆ ಒಂದು ಸಾಲು ಖಾಲಿ ಬಿಡಬೇಕು ಎಂದು ತಿಳಿಸಿದ್ದರು. ವಿದ್ಯಾರ್ಥಿಗಳು ಬರೆದರು. ನಂತರ ಆ ಶಿಕ್ಷಕಿ, ಈಗ ನೀವು ಖಾಲಿ ಬಿಟ್ಟಿರುವ ಸಾಲಿನಲ್ಲಿ, ಮೇಲೆ ಬರೆದ ಹೆಸರಿನ ವಿದ್ಯಾರ್ಥಿಯ ವಿಶೇಷ ಗುಣ ಏನು ಎಂಬುದನ್ನು ಬರೆಯಬೇಕು ಎಂದು ತಿಳಿಸಿದರು. ಅಂದರೆ ಒಬ್ಬ ವಿದ್ಯಾರ್ಥಿಯ ಹೆಸರಿನ ನಂತರ ಆತನ ವಿಶೇಷ ಗುಣದ ಬಗ್ಗೆ ಬರೆಯಬೇಕು. ವಿದ್ಯಾರ್ಥಿಗಳು ಯೋಚಿಸಿ ಬರೆದರು. ಕೆಲ ದಿನಗಳ ನಂತರ ಆ ಶಿಕ್ಷಕಿ, ಇಡೀ ತರಗತಿಯವರು ಪ್ರತಿಯೊಬ್ಬರ ಬಗ್ಗೆ ಬರೆದ ಅಭಿಪ್ರಾಯವನ್ನು ಸಂಗ್ರಹಿಸಿ, ಅದಕ್ಕೆ ಟಿಪ್ಪಣಿ ಹಾಕಿ, ಆಯಾ ವಿದ್ಯಾರ್ಥಿಗೆ ನೀಡಿದರು. ಅದನ್ನು ಓದಿದ ಹಲವರು ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದರು. ಏಕೆಂದರೆ ಅವರ ಬಗ್ಗೆ ಇತರರು ಅನೇಕ ಶ್ಲಾಘನೀಯ ಮಾತುಗಳನ್ನು ಬರೆದಿದ್ದರು. ಅಂದಿನಿಂದ ಆ ತರಗತಿಯ ವಿದ್ಯಾರ್ಥಿಗಳ ವರ್ತನೆಯಲ್ಲಿ ಬಹಳಷ್ಟು ಬದಲಾವಣೆ ಕಂಡುಬಂದಿತು. ಅಲ್ಲಿದ್ದವರೆಲ್ಲಾ ಮತ್ತಷ್ಟು ಆತ್ಮೀಯರಾದರು. ಅವರು ತಮ್ಮ ಓದು ಪೂರೈಸಿದ ನಂತರವೂ ಪರಸ್ಪರ ಆತ್ಮೀಯರಾಗೇ ಇದ್ದರು. ಕೆಲ ವರ್ಷಗಳ ನಂತರ ಅಲ್ಲಿನ ಒಬ್ಬ ವಿದ್ಯಾರ್ಥಿ ಸೈನ್ಯದಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಯುದ್ಧದಲ್ಲಿ ವೀರ ಮರಣ ಹೊಂದುತ್ತಾನೆ. ಇದನ್ನು ತಿಳಿದ ಶಿಕ್ಷಕಿ ಅವನಿಗೆ ಗೌರವ ಸಲ್ಲಿಸಲು ಪುಷ್ಪಗುಚ್ಛದೊಂದಿಗೆ ಅಲ್ಲಿಗೆ ಹೋಗುತ್ತಾರೆ. ಕಣ್ಣೀರು ಸುರಿಸುತ್ತಿದ್ದ ಆಕೆಯನ್ನು ಕಂಡ ವೀರ ಯೋಧನ ಜೊತೆ ಕೆಲಸ ಮಾಡುತ್ತಿದ್ದ ಯೋಧ ಬಂದು, 'ನೀವು ಸಂಜಯ್ ಅವರ ಟೀಚರ್ ಅಲ್ಲವೇ? ಸಂಜಯ್ ಯಾವಾಗಲೂ ನಿಮ್ಮ ಬಗ್ಗೆ ಹೇಳುತ್ತಿದ್ದ' ಎಂದ. ಅಂತಿಮ ವಿಧಿಯ ನಂತರ ಆ ಸಂಜಯ್ ಜೊತೆಗೆ ಹಿಂದೆ ಓದುತ್ತಿದ್ದ ಎಲ್ಲರೂ ಅಲ್ಲಿ ಹಾಜರಿದ್ದರು. ಸಂಜಯ್‌ನ ತಂದೆ ತಾಯಿ ಕೂಡ ಶಿಕ್ಷಕಿಯ ಬಳಿ ಬಂದು, ನಾವು ನಿಮಗೇ ಏನನ್ನೋ ತೋರಿಸಬೇಕು ಎಂದರು. ಅವರು ಸಂಜಯ್ ಉಪಯೋಗಿಸುತ್ತಿದ್ದ ಪರ್ಸಿನಿಂದ ಒಂದು ಚೀಟಿ ತೆಗೆದರು. ಸಂಜಯ್ ಸಾವಿನ ಸಮಯದಲ್ಲೂ ಇದನ್ನು ಜೊತೆಯಲ್ಲಿ ಇಟ್ಟುಕೊಂಡಿದ್ದನಂತೆ, ನೀವು ಇದನ್ನು ಗುರುತಿಸಬಹುದೇ? ಎಂದು ಕೇಳಿದರು. ಹರಿದಿದ್ದ, ಆದರೆ ಅದನ್ನು ಅಲ್ಲಲ್ಲಿ ಅಂಟಿಸಿದ್ದ ಆ ಪೇಪರ್ ನೋಡಿದ ಕೂಡಲೇ ಶಿಕ್ಷಕಿ ಅದನ್ನು ಗುರುತಿಸಿ ಅಳಲು ಆರಂಭಿಸಿದರು. ಸಂಜಯ್‌ನ ತಾಯಿ ಶಿಕ್ಷಕಿಗೆ ವಂದನೆ ಸಲ್ಲಿಸುತ್ತಾ, ಸಂಜಯ್ ಇದನ್ನು ವಿಶೇಷ ಆಸ್ತಿ ಎಂಬಂತೆ ಜೋಪಾನ ಮಾಡಿಟ್ಟುಕೊಂಡಿದ್ದ ಎನ್ನುತ್ತಾರೆ. ಅಲ್ಲಿ ಸೇರಿದ್ದ ಹಲವು ಹಳೆ ವಿದ್ಯಾರ್ಥಿಗಳೂ ತಮ್ಮ ಜೇಬಿನಿಂದ ಅಂತಹುದೇ ಹರಿದ, ಆದರೆ ಜೋಪಾನ ಮಾಡಿಟ್ಟುಕೊಂಡಿದ್ದ ಪತ್ರಗಳನ್ನು ಶಿಕ್ಷಕಿಗೆ ತೋರಿಸುತ್ತಾರೆ. ಕೆಲವರು ತಾವು ಅದನ್ನು ಮನೆಯಲ್ಲಿ ಜೋಪಾನವಾಗಿ ಇಟ್ಟಿರುವುದಾಗಿ ತಿಳಿಸುತ್ತಾರೆ. ಶಿಕ್ಷಕಿ ಎಲ್ಲವನ್ನೂ ನೋಡಿ, ಕೇಳಿ ಕಣ್ಣೀರು ಸುರಿಸುತ್ತಾ ಕುಸಿದು ಬೀಳುತ್ತಾರೆ. ಇದು ಕಥೆಯೂ ಹೌದು, ಜೀವನದ ಸಂಗತಿಯೂ ಹೌದು. ಶಿಕ್ಷಕಿ ಮಾಡಿದ್ದ ಸಣ್ಣ ಕೆಲಸ ಒಬ್ಬರು ಇನ್ನೊಬ್ಬರ ಬಗ್ಗೆ ಯಾವ ಒಳ್ಳೆಯ ವಿಷಯ ಗ್ರಹಿಸಿದ್ದಾರೆ ಎಂದು ತಿಳಿದು, ಅದನ್ನು ಆಯಾ ವಿದ್ಯಾರ್ಥಿಗೆ ಬರಹದ ರೂಪದಲ್ಲಿ ನೀಡಿದ್ದು. ಇದರಿಂದ ಎಲ್ಲರ ಭಾವನೆ ಹಾಗೂ ಜೀವನವೇ ಬದಲಾಗಿಹೋಗಿತ್ತು. ನನ್ನಲ್ಲಿ ಅಂತಹ ಒಳ್ಳೆ ಗುಣ ಇಲ್ಲವೆಂದುಕೊಂಡವರೂ, ನಾನೇಕೆ ಅಂತಹ ಗುಣ ಬೆಳೆಸಿಕೊಳ್ಳಬಾರದು? ಎಂದು ಹಂಬಲಿಸಿ ಬದಲಾದರು. ಅವರ ಬದಲಾದ ಮನೋಭಾವ ಹಾಗೂ ವರ್ತನೆ, ತಮ್ಮನ್ನು ತಾವು ಕಂಡುಕೊಳ್ಳಲು ಸಹಕರಿಸಿತು, ಇದರಿಂದಾಗಿ ಎಲ್ಲರೂ ಉನ್ನತ ಹುದ್ದೆಗಳಿಗೆ ಏರಿದರು. ಆದರೂ ಕೊನೆಯವರೆಗೆ ಎಲ್ಲರೂ ಪರಸ್ಪರ ಆತ್ಮೀಯ ಸ್ನೇಹಿತರಾಗೇ ಉಳಿದರು.

ನಾವು ದೊಡ್ಡವರಾಗಬೇಕೆಂದರೆ ಇನ್ನೊಬ್ಬರನ್ನು ಸಣ್ಣವರಾಗಿಸಬೇಕೆಂದಿಲ್ಲ. ನಾವು ಅವರಿಗಿಂತಲೂ ದೊಡ್ಡವರಾಗಲು ಪ್ರಯತ್ನಿಸಬೇಕು. ಇದು ಪೈಪೋಟಿಯಲ್ಲ, ಬದಲಿಗೆ ಬದುಕಿನ ರೀತಿ. ಇಂತಹ ಮನೋಭಾವದ ಅಗತ್ಯತೆ ಇಂದು ಹೆಚ್ಚಾಗಿದೆ. ಹಣದ ಧಾವಂತದಲ್ಲಿ ನಾವು ಇಂತಹ ಸ್ನೇಹಮಯವಾದ ವಾತಾವರಣವನ್ನು ಕಳೆದುಕೊಳ್ಳುತ್ತಿದ್ದೇವೆ. ಈಗಲೂ ಅನೇಕ ಹಿರಿಯರು ತಾವು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದವರನ್ನು ಭೇಟಿಯಾಗಿ ಗಂಟಗಟ್ಟಲೆ ಹರಟುವುದನ್ನು ಕಾಣುತ್ತೇವೆ, ಕೇಳುತ್ತೇವೆ. ಅಂತಹ ವಾತಾವರಣದಲ್ಲಿ ಅವರು ಚಿಕ್ಕ ಮಕ್ಕಳಂತೆ ನಗುತ್ತಾ, ಛೇಡಿಸುತ್ತಾ ಪ್ರಪಂಚ ಮರೆಯುತ್ತಾರೆ. ಇದನ್ನು ಯಾರೂ ಸೃಷ್ಟಿಸಲಾಗುವುದಿಲ್ಲ. ನಮ್ಮ ಸ್ವಭಾವದಲ್ಲೇ ಇದು ಬರಬೇಕು. ಅನೇಕರು ಹೇಳುವುದಿದೆ: ಹಣ ಸಂಪಾದನೆ ಎಲ್ಲರೂ ಮಾಡುತ್ತಾರೆ, ಅದನ್ನು ಖರ್ಚೂ ಮಾಡುತ್ತಾರೆ. ಅದರಲ್ಲಿ ಏನಿದೆ ವಿಶೇಷ. ಬದಲಿಗೆ ನಮಗೆ ಆತ್ಮೀಯರಿದ್ದಾರೆ, ನನ್ನನ್ನು ಇಷ್ಟಪಡುವವರಿದ್ದಾರೆ ಎಂದಾಗ ನಮಗೆ ಹಣವೇ ಬೇಡ ಎನಿಸುತ್ತದೆ' ಎನ್ನುವುದನ್ನೂ ನಾವು ಕೇಳುತ್ತೇವೆ.

ಜೀವನವೇ ಹಾಗೆ, ಬಂದುದನ್ನು ಹಾಗೆಯೇ ಒಪ್ಪಿಕೊಳ್ಳಬೇಕು, ಅಪ್ಪಿಕೊಳ್ಳಬೇಕು, ಅದನ್ನು ಖುಷಿಯಿಂದ ಅನುಭವಿಸಬೇಕು. ನಮಗೆ ಸಿಗದಿದ್ದರ ಬಗ್ಗೆ ನಾವು ಸಾಕಾರ ಮನೋಭಾವ ಬೆಳೆಸಿಕೊಳ್ಳಬೇಕು. ಪದೇಪದೆ ನೆನಪಾಗುವ ಡಿವಿಜಿಯವರ ಮಾತು " ಇರುವ ಭಾಗ್ಯವ ನೆನೆದು ಬಾರದೆಂಬುದನು ಬಿಡು.. ಹರುಷಕಿದೇ ದಾರಿ". ಭಾಗ್ಯ ಎಂಬುದು ಹಣೇಬರಹ ಎಂಬುದೂ ಒಪ್ಪುವ ಮಾತೇ ಆದರೂ, ಸಿಗದಿದ್ದರ ಬಗ್ಗೆ ತಲೆಕೆಡಿಸಿ ಕೊಂಡು ಇದ್ದುದನ್ನೂ ಕಳೆದುಕೊಳ್ಳುವುದು ಮೂರ್ಖತನ. ಇದ್ದುದನ್ನೇ ಅನುಭವಿಸುವುದು ಜಾಣತನ ಎಂಬ ಮಾತು ಎಂದೆಂದಿಗೂ ಸತ್ಯವೇ.

ಇಂದು ಐಪಿಎಲ್ ಫೈನಲ್: ಗುಜರಾತ್–ಚೆನ್ನೈ ಹಣಾಹಣಿ

ಅಹಮದಾಬಾದ್,ಮೇ 27(ಸಿಎನ್)– ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ಹಾಗೂ 4 ಬಾರಿಯ ಚಾಂಪಿಯನ್ ಚೆನ್ನೈ ಸೂಪರ್‌ಕಿಂಗ್ಸ್ ನಡುವೆ ಭಾನುವಾರ (ಮೇ 28) ಫೈನಲ್ ಪಂದ್ಯ ನಡೆಯಲಿದೆ.




ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸಂಜೆ 7.30ಕ್ಕೆ ಪಂದ್ಯ ಆರಂಭವಾಗಲಿದ್ದು, ಪ್ರಶಸ್ತಿಗಾಗಿ ಉಭಯ ತಂಡಗಳು ಕಾದಾಟ ನಡೆಸಲಿವೆ. ಈ ಮೂಲಕ ಚೆನ್ನೈ ಐದನೇ ಬಾರಿಗೆ ಚಾಂಪಿಯನ್ ಆಗುವ ಮೂಲಕ ಮುಂಬೈ ಇಂಡಿಯನ್ಸ್ ದಾಖಲೆ ಸರಿಗಟ್ಟಲು ಎದುರು ನೋಡುತ್ತಿದೆ. ಈ ಹಿನ್ನೆಲೆಯಲ್ಲಿ ಮೊದಲನೇ ಕ್ವಾಲಿಫೈಯರ್ ಪಂದ್ಯದಲ್ಲಿ ತೋರಿದ್ದ ಪ್ರದರ್ಶನವನ್ನೇ ಫೈನಲ್ ಪಂದ್ಯದಲ್ಲಿ ಮುಂದುವರಿಸುವ ಯೋಜನೆ ಹಾಕಿಕೊಂಡಿದೆ.

ಅತ್ತ ಹಾರ್ದಿಕ್ ಪಡೆ ತವರು ಅಂಗಳದ ಲಾಭ ಪಡೆದು ಚೆನ್ನೈ ತಂಡವನ್ನು ಮಣಿಸಿ ಸತತ ಎರಡನೇ ಬಾರಿ ಪ್ರಶಸ್ತಿ ಮುಡಿಗೇರಿಸಿಕೊಳ್ಳುವ ತವಕದಲ್ಲಿದೆ. ಈ ಸಾಲಿನ ಟೂರ್ನಿ ಆರಂಭದಿಂದಲೂ ಅಬ್ಬರಿಸಿದ ಗುಜರಾತ್ ಟೈಟನ್ಸ್ ತಂಡ ಬ್ಯಾಟಿಂಗ್ ಹಾಗೂ ಬೌಲಿಂಗ್ ವಿಭಾಗದಲ್ಲಿ ಸಮತೋಲನದಿಂದ ಕೂಡಿದೆ.

ಟೂರ್ನಿಯಲ್ಲಿ ಅತೀ ಹೆಚ್ಚು ರನ್ ಗಳಿಸಿ ಆರೆಂಜ್ ಕ್ಯಾಪ್ ಗಳಿಸಿರುವ ಶುಭ್‌ಮನ್ ಗಿಲ್ ಅತ್ಯುತ್ತಮ ಫಾರ್ಮ್‌ನಲ್ಲಿದ್ದರೇ, ಅವರಿಗೆ ವೃದ್ಧಿಮಾನ್ ಸಹಾ, ನಾಯಕ ಹಾರ್ದಿಕ್ ಪಾಂಡ್ಯ, ಸಾಯಿ ಸುದರ್ಶನ್, ವಿಜಯ್ ಶಂಕರ್, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯ ಬ್ಯಾಟಿಂಗ್‌ನಲ್ಲಿ ಸಾಥ್ ನೀಡಲಿದ್ದಾರೆ.

ಇನ್ನು ಕರಾರುವಾಕ್ ಬೌಲಿಂಗ್‌ನಿಂದ ಅತೀ ಹೆಚ್ಚು ವಿಕೆಟ್ ಕಬಳಿಸಿ ಪರ್ಪಲ್ ಕ್ಯಾಪ್ ಗಳಿಸಿರುವ ವೇಗಿ ಮಹಮ್ಮದ್ ಶಮಿ ಕೂಡ ಉತ್ತಮ ಫಾರ್ಮ್‌ನಲ್ಲಿದ್ದು ನಾಳಿನ ಪಂದ್ಯದಲ್ಲಿ ಚೆನ್ನೈ ಬ್ಯಾಟಿಂಗ್ ಬೆನ್ನೆಲುಬು ಮುರಿಯಲು ಸಿದ್ಧರಾಗಿದ್ದಾರೆ. ಇವರಿಗೆ ಮೋಹಿತ್ ಶರ್ಮಾ, ರಶೀದ್ ಖಾನ್, ನೂರ್ ಅಹ್ಮದ್ ಸಾಥ್ ನೀಡಲಿದ್ದಾರೆ.

ಮತ್ತೊಂದೆಡೆ ಧೋನಿ ಸಾರಥ್ಯದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಸಹ ನಾಳಿನ ಪಂದ್ಯದಲ್ಲಿ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಆಟವಾಡಲಿದೆ. ಚೆನ್ನೈಗೆ ಧೋನಿ ನಾಯಕತ್ವ ವರದಾನವಾಗಿದ್ದು, ಋತುರಾಜ್ ಗಾಯಕ್ವಾಡ್, ಡೆವೋನ್ ಕಾನ್ವೆ, ಅಜಿಂಕ್ಯ ರಹಾನೆ, ಅಂಬಾಟಿ ರಾಯುಡು, ಶಿವಂ ದುಬೆ, ಮೊಯೀನ್ ಅಲಿ, ರವೀಂದ್ರ ಜಡೇಜಾ ಬ್ಯಾಟಿಂಗ್‌ನಲ್ಲಿ ರನ್ ಹೊಳೆ ಹರಿಸುತ್ತಿದ್ದಾರೆ. ಇನ್ನು ಬೌಲಿಂಗ್‌ನಲ್ಲೂ ಕೈ ಚಳಕ ತೋರಿರುವ ರವೀಂದ್ರ ಜಡೇಜಾಗೆ ದೀಪಕ್ ಚಹರ್, ತುಷಾರ್ ದೇಶಪಾಂಡೆ, ಮಹೇಶ್ ತೀಕ್ಷ್ಣ ಸೇರಿದಂತೆ ಇನ್ನಿತರರು ಸಾಥ್ ನೀಡಲಿದ್ದಾರೆ. ಒಟ್ಟಾರೆ ನಾಳಿನ ಫೈನಲ್ ಪಂದ್ಯ ರೋಚಕತೆಯಿಂದ ಕೂಡಿರಲಿದೆ.



ಫೈನಲ್‌ಗೂ ಮುನ್ನ ವರ್ಣರಂಜಿತ ಕಾರ್ಯಕ್ರಮ: ಫೈನಲ್ ಪಂದ್ಯಕ್ಕೂ ಮುನ್ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಬಿಸಿಸಿಐ ವತಿಯಿಂದ ಐಪಿಎಲ್ ಸಮಾರೋಪ ಸಮಾರಂಭದಲ್ಲಿ ವರ್ಣರಂಜಿತ ಕಾರ್ಯಕ್ರಮ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ರ್‍ಯಾಪರ್ ಗಾಯಕ ಡಿವೈನ್ ಮತ್ತು ನ್ಯೂಕ್ಲಿಯಾ ಕಾರ್ಯಕ್ರಮ ನೀಡಲಿದ್ದಾರೆ. ಕೆಲವು ವರದಿಗಳ ಪ್ರಕಾರ, ನಟ ರಣವೀರ್ ಸಿಂಗ್, ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಸಮಾರೋಪ ಸಮಾರಂಭದಲ್ಲಿ ಪ್ರದರ್ಶನ ನೀಡುವ ನಿರೀಕ್ಷೆಯಿದೆ. ಐಪಿಎಲ್ ಟ್ವೀಟ್ ಮಾಡಿದಂತೆ ಭಾರತೀಯ ರ್‍ಯಾಪರ್ ನ್ಯೂಕ್ಲಿಯಾ ಮತ್ತು ಗಾಯಕ ಕಿಂಗ್ ಸಂಜೆ 6 ರಿಂದ ಪ್ರದರ್ಶನ ನೀಡಲಿದ್ದಾರೆ. ನಂತರ, ಐಪಿಎಲ್ ಮಧ್ಯ ಇನಿಂಗ್ಸ್ ವಿರಾಮದಲ್ಲಿ ಗಾಯಕಿ ಜೋನಿತಾ ಗಾಂಧಿ ಮತ್ತು ರಾಪರ್ ಡಿವೈನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಗುಜರಾತ್ ಟೈಟನ್ಸ್: ಶುಭ್‌ಮನ್ ಗಿಲ್, ವೃದ್ಧಿಮಾನ್ ಸಹಾ (ವಿಕೆಟ್ ಕೀಪರ್), ಸಾಯಿ ಸುದರ್ಶನ್, ಹಾರ್ದಿಕ್ ಪಾಂಡ್ಯ (ನಾಯಕ), ವಿಜಯ್ ಶಂಕರ್, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯ, ಮೋಹಿತ್ ಶರ್ಮಾ, ರಶೀದ್ ಖಾನ್, ಮೊಹಮ್ಮದ್ ಶಮಿ, ನೂರ್ ಅಹ್ಮದ್.

ಚೆನ್ನೈ ಸೂಪರ್ ಕಿಂಗ್ಸ್: ಋತುರಾಜ್ ಗಾಯಕ್ವಾಡ್, ಡೆವೋನ್ ಕಾನ್ವೆ, ಅಜಿಂಕ್ಯ ರಹಾನೆ, ಅಂಬಾಟಿ ರಾಯುಡು, ಶಿವಂ ದುಬೆ, ಮೊಯೀನ್ ಅಲಿ, ರವೀಂದ್ರ ಜಡೇಜಾ, ಎಂಎಸ್ ಧೋನಿ (ವಿಕೆಟ್ ಕೀಪರ್/ ನಾಯಕ), ದೀಪಕ್ ಚಹರ್, ತುಷಾರ್ ದೇಶಪಾಂಡೆ, ಮಹೇಶ್ ತೀಕ್ಷಣ, ಮತೀಶ್ ಪ್ರತಿರಣ.


ಬಹುಮಾನದ ವಿವರ

ವಿಜೇತ ತಂಡ–	20 ಕೋಟಿ ರೂ.
ರನ್ನರ್ ಅಪ್–	13 ಕೋಟಿ ರೂ.
ಮೂರನೇ ತಂಡ–	7 ಕೋಟಿ ರೂ.
ನಾಲ್ಕನೇ ತಂಡ–	6.5 ಕೋಟಿ ರೂ.
ಆರೆಂಜ್ ಕ್ಯಾಪ್ –	15 ಲಕ್ಷ ರೂ.
ಪರ್ಪಲ್ ಕ್ಯಾಪ್ –	15 ಲಕ್ಷ ರೂ.
ಉದಯೋನ್ಮುಖ ಆಟಗಾರ –	20 ಲಕ್ಷ ರೂ.
ಅತ್ಯಂತ ಮೌಲ್ಯಯುತ ಆಟಗಾರ –	12 ಲಕ್ಷ ರೂ.
ಸೂಪರ್ ಸ್ಟ್ರೈಕರ್ –	15 ಲಕ್ಷ ರೂ.
ಪವರ್ ಪ್ಲೇಯರ್–	12 ಲಕ್ಷ ರೂ.
ಗರಿಷ್ಠ ಸಿಕ್ಸರ್ –	12 ಲಕ್ಷ ರೂ.
ಗೇಮ್ ಚೇಂಜರ್–	12 ಲಕ್ಷ ರೂ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bos), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಖಾತೆ ಹಂಚಿಕೆ ಅಸಮಾಧಾನ; ರಾಜೀನಾಮೆಗೆ ಮುಂದಾದ ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರಕ್ಕೆ ಖಾತೆ ಹಂಚಿಕೆ ಕಗ್ಗಂಟಾಗಿದ್ದು ತಮಗೆ ಸಾರಿಗೆ ಖಾತೆ ಕೊಡುವ ಲಕ್ಷಣ ಕಾಣುತ್ತಿದ್ದಂತೆಯೇ ಹಿರಿಯ ಸಚಿವ ರಾಮಲಿಂಗಾರೆಡ್ಡಿ ರಾಜೀನಾಮೆಗೆ ಮುಂದಾಗಿದ್ದಾರೆ ಎನ್ನಲಾಗಿದೆ.



ಇದೇ ರೀತಿ ಹಲವು ಸಚಿವರು ತಮಗೆ ಸಿಗುವ ಖಾತೆಯ ಸುಳಿವು ಸಿಗುತ್ತಿದ್ದಂತೆಯೇ ಅಸಮಾಧಾನಗೊಂಡಿದ್ದು, ಉದ್ದೇಶಪೂರ್ವಕವಾಗಿ ತಮ್ಮನ್ನು ಅವಮಾನಿಸುವ ಪ್ರಯತ್ನವಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ತಮಗೆ ಸಾರಿಗೆ ಖಾತೆ ಕೊಡುವ ನಿರ್ಧಾರದ ಬಗ್ಗೆ ಕೆಂಡಾಮಂಡಲಗೊಂಡಿರುವ ರಾಮಲಿಂಗಾ ರೆಡ್ಡಿ, ಇದು ತಮ್ಮನ್ನು ಅವಮಾನಿಸುವ ಯತ್ನ ಎಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆ.

ಈ ಹಿಂದೆ ನಾಲ್ಕು ವರ್ಷಕ್ಕೂ ಹೆಚ್ಚು ಕಾಲ ತಾವು ಸಾರಿಗೆ ಸಚಿವರಾಗಿ ಕೆಲಸ ಮಾಡಿದ್ದು, ಈಗ ಅದೇ ಖಾತೆಯನ್ನು ಕೊಡುವ ಅಗತ್ಯವಿರಲಿಲ್ಲ. ಗೃಹ ಸಚಿವರಾಗಿ ಕೆಲಸ ಮಾಡಿರುವ ತಮಗೆ ಇನ್ನೂ ಮಹತ್ವದ ಖಾತೆ ನೀಡಬೇಕಿತ್ತು. ಆದರೆ ಸಾರಿಗೆ ಖಾತೆಯನ್ನೇ ಕೊಡಲು ಮುಂದಾಗಿ ತಮ್ಮನ್ನು ಅವಮಾನಿಸಲಾಗುತ್ತಿದೆ. ತಮಗಿಂತ ಕಿರಿಯರಿಗೆ ಮಹತ್ವದ ಖಾತೆಗಳನ್ನು ಕೊಟ್ಟು,ತಮಗೆ ಮಾತ್ರ ಹಿಂಬಡ್ತಿ ನೀಡುವ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ. ಇದು ಸರಿಯಲ್ಲ.

ಸಾರಿಗೆ ಖಾತೆಯನ್ನೇ ನನಗೆ ನೀಡುವುದಾದರೆ ನನಗೆ ಸಚಿವ ಸ್ಥಾನವೇ ಬೇಡ. ತಕ್ಷಣವೇ ರಾಜೀನಾಮೆ ಕೊಟ್ಟು ಬಿಡುತ್ತೇನೆ ಎಂದು ರಾಮಲಿಂಗಾರೆಡ್ಡಿ ಅಸಮಾಧಾನ ತೋಡಿಕೊಂಡಿದ್ದಾರೆ.

ಹೀಗೆ ಖಾತೆ ಹಂಚಿಕೆಯ ವಿಷಯದಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಹಲವು ಸಚಿವರು ಅಸಮಾಧಾನ ವ್ಯಕ್ತಪಡಿಸತೊಡಗಿದ್ದು, ಸರಿಪಡಿಸದೆ ಹೋದರೆ ಸಿದ್ಧರಾಮಯ್ಯ ಅವರ ಸರ್ಕಾರಕ್ಕೆ ಮುಜುಗರ ಉಂಟಾಗುವುದು ಬಹುತೇಕ ಖಚಿತ.

ತನ್ವೀರ್ ಸೇಠ್‌ಗೆ ಕೈ ತಪ್ಪಿದ ಸಚಿವ ಸ್ಥಾನ; ಮೈಸೂರಲ್ಲಿ ಬೆಂಬಲಿಗರ ಪ್ರತಿಭಟನೆ

ಮೈಸೂರು, ಮೇ 27(ಎಸ್‌ಪಿಎನ್)– ಸೋಲಿಲ್ಲದ ಸರದಾರ, ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಹಾಗೂ 6 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಿರಿಯ ರಾಜಕಾರಣಿ ತನ್ವೀರ್ ಸೇಠ್ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡದಿರುವುದಕ್ಕೆ ಅಭಿಮಾನಿಗಳು ಬಳಗ ತೀವ್ರ ಅಸಮಾಧಾನ ಹೊರಹಾಕಿ, ಶನಿವಾರ ಪ್ರತಿಭಟನೆ ನಡೆಸಿದರು.

ಮೈಸೂರು ಗಾಂಧಿಚೌಕದಲ್ಲಿ ಶಾಸಕ ತನ್ವೀರ್ ಸೇಠ್ ಅಭಿಮಾನಿ ಬಳಗದ ಅಧ್ಯಕ್ಷ ಎಂ.ರಸೂಲ್ ನೇತೃತ್ವದಲ್ಲಿ ಎನ್.ಆರ್. ಕ್ಷೇತ್ರದ ಕಾರ್ಯಕರ್ತರು ಜಮಾಯಿಸಿ, ಶಾಸಕ ತನ್ವೀರ್‌ಸೇಠ್ ಅವರ ಭಾವಚಿತ್ರ ಹಿಡಿದು ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಶಾಸಕರ ಪರ ಘೋಷಣೆ ಕೂಗಿದರು.



ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಈ ಬಾರಿಯ ಚುನಾವಣೆಯಲ್ಲಿ 135 ಸ್ಥಾನಗಳನ್ನು ಗೆಲ್ಲುವ ಮೂಲಕ ಬಹುಮತದ ಸರ್ಕಾರ ರಚನೆಯಾಗಿದೆ. ಇಷ್ಟೊಂದು ದೊಡ್ಡ ಮಟ್ಟದ ಬಹುಮತ ಬರಲು ರಾಜ್ಯಾದ್ಯಂತ ಮುಸ್ಲಿಂ ಸಮುದಾಯ ಪ್ರಮುಖ ಪಾತ್ರವಹಿಸಿದೆ. ಬಿಜೆಪಿ ದುರಾಡಳಿತ ನೀತಿಯನ್ನು ವಿರೋಧಿಸಿ, ಮುಸ್ಲಿಂ ಸಮುದಾಯ ಒಮ್ಮತದಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿದೆ ಎಂದರು.

ಮೈಸೂರು ಭಾಗದಲ್ಲಿ ಶಾಸಕ ತನ್ವೀರ್ ಸೇಠ್ ಎಲ್ಲಾ ಸಮುದಾಯದವರ ವಿಶ್ವಾಸ ಗಳಿಸಿ ಎನ್.ಆರ್. ಕ್ಷೇತ್ರದಲ್ಲಿ ಸತತ 6 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಇಂತಹ ಹಿರಿಯ ರಾಜಕಾರಣಿಗೆ ಸಚಿವ ಸ್ಥಾನ ನೀಡದಿರುವುದು ಬೇಸರ ಸಂಗತಿ ಎಂದು ತಿಳಿಸಿದರು.

ಮಾಜಿ ಸಚಿವ ಅಜೀಜ್ ಸೇಠ್ ನಿಧನದಿಂದ ತೆರವಾದ ಸ್ಥಾನಕ್ಕೆ 2002ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಜಯಗಳಿಸಿ, ಅಲ್ಲಿಂದ ಇಲ್ಲಿಯವರೆಗೂ ಸತತ ಆರು ಬಾರಿ ಶಾಸಕರಾಗಿ ಇತಿಹಾಸ ನಿರ್ಮಿಸಿದ್ದಾರೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಕ್ಫ್, ಶಿಕ್ಷಣ, ಕಾರ್ಮಿಕ ಇಲಾಖೆ ಸಚಿವರಾಗಿ ಹಾಗೂ ಮೈಸೂರು, ಕೊಡಗು ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಅತ್ಯುತ್ತಮವಾಗಿ ಕೆಲಸ ಮಾಡಿ, ತಮ್ಮ ಸ್ವಕ್ಷೇತ್ರ ಎನ್.ಆರ್. ಕ್ಷೇತ್ರದ ಅಭಿವೃದ್ಧಿಗೂ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಶಾಸಕ ತನ್ವೀರ್ ಸೇಠ್ ಅವರು, ವಿವಿಧ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿದ್ದು, ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಹಾಗೂ ಮೈಸೂರು ಜಿಲ್ಲೆಯಲ್ಲಿ ಶೇಕಡಾ 100ರಷ್ಟು ಮುಸ್ಲಿಂ ಮತಗಳನ್ನು ಕಾಂಗ್ರೆಸ್ ಪಕ್ಷಕ್ಕೆ ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಕಾಂಗ್ರೆಸ್ ಪಕ್ಷದ ಕಟ್ಟಾಳು, ಜನನಾಯಕನಿಗೆ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡುವುದು ಅಗತ್ಯವಾಗಿದೆ. ಈ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ತನ್ವೀರ್ ಸೇಠ್ ಅಭಿಮಾನಿ ಬಳಗದ ಮಜರ್‌ಪಾಷ, ನೂರುಲ್ಲಾ, ಅಪ್ರೋಜ್, ಸೈಯದ್ ಫಾರೂಖ್, ನಾಸೀರ್, ಅಜ್ಮಲ್, ಮೊಖ್ತಾರ್ ಪಾಷ ಸೇರಿದಂತೆ ಇನ್ನಿತರರಿದ್ದರು.

ರಂಗಾಯಣದಲ್ಲಿ ಮೊಳಗಿದ ಬಹುಸಂಸ್ಕೃತಿ ಘೋಷ



ಮೈಸೂರು, ಮೇ 27(ಎಂಕೆ)– ಮೈಸೂರು ರಂಗಾಯಣ ಆವರಣದಲ್ಲಿ ರಂಗಗೀತೆ, ಜಾನಪದ, ತತ್ವಪದ ಗಾಯನದೊಂದಿಗೆ 'ರಂಗ ಸಂಸ್ಕೃತಿ ಉಳಿಸೋಣ–ಬೆಳೆಸೋಣ, ಬಹುತ್ವ ಸಂಸ್ಕೃತಿಯತ್ತ ಸಾಗೋಣ ಬನ್ನಿ' ಎಂಬ ಘೋಷಣೆ ಮೊಳಗಿಸಲಾಯಿತು.

ರಂಗಾಯಣದ ಕಿಂದರ ಜೋಗಿ ಆವರಣದಲ್ಲಿ ಪ್ರಗತಿಪರ ಸಂಘಟನೆಗಳ ಒಕ್ಕೂಟ ಹಾಗೂ ಮೈಸೂರಿನ ರಂಗಕರ್ಮಿಗಳ ವತಿಯಿಂದ ಆಯೋಜಿಸಿದ್ದ ಗೀತಗಾಯನ ಕಾರ್ಯಕ್ರಮದಲ್ಲಿ ಅಮೆರಿಕಾ ಮಾಜಿ ಅಧ್ಯಕ್ಷ ಅಬ್ರಾಹಂ ಲಿಂಕನ್ ತನ್ನ ಮಗನ ಶಿಕ್ಷಕನಿಗೆ ಬರೆದ ಪತ್ರ 'ಕಲಿಸು ಗುರುವೆ ಕಲಿಸು ಸದ್ಗುರುವೆ ನೀ ಕಲಿಸು' ಹಾಡಿನೊಂದಿಗೆ ದೀಪ ಹಿಡಿದು ರಂಗಾಯಣದೊಳಗೆ ಪ್ರವೇಶ ಮಾಡಲಾಯಿತು. ಈ ವೇಳೆ ಬಿ.ವಿ.ಕಾರಂತರ ಪುತ್ಥಳಿಗೆ ನಮಿಸಿ, ರಂಗಾಯಣದಲ್ಲಿ ಬಹು ಸಂಸ್ಕೃತಿ ಬೆಳಗಲಿ ಎಂದು ಆಶಿಸಿದರು.

ಬಳಿಕ 'ಹಾಲಲದ್ದು, ನೀರಲದ್ದು' ವಚನ ಗಾಯನದೊಂದಿಗೆ ಜಾನಪದ, ವಾದ್ಯ ಪರಿಕರ ನಾದ–ನಿನಾದ ಸೇರಿದಂತೆ ಹತ್ತು ಹಲವು ಹಾಡುಗಳನ್ನು ಸುಮಧುರವಾಗಿ ಹಾಡಿ ನೆರೆದಿದ್ದವರನ್ನು ರಂಜಿಸಲಾಯಿತು.

ಈ ನಡುವೆ ರಂಗಾಯಣದ ಮಾಜಿ ನಿರ್ದೇಶಕ ಹೆಚ್.ಜನಾರ್ಧನ್ (ಜನ್ನಿ) ಮಾತನಾಡಿ, ರಂಗಾಸಕ್ತರು ಕಟ್ಟಿ ಬೆಳೆಸಿದ ಹಾಗೂ ನಮಗೆ ಗುರುಮನೆಯಾಗಿದ್ದ ಮೈಸೂರು ರಂಗಾಯಣ, ಕೆಲ ವರ್ಷಗಳಿಂದ ಸೆರೆಮನೆಯಂತಾಗಿತ್ತು. ಇಂದು ಆ ಸೆರೆಮನೆಯನ್ನು ಬಿಡಿಸಿ, ಮತ್ತೆ ಗುರುಮನೆಗೆ ಪ್ರವೇಶ ಮಾಡುತ್ತಿದ್ದೇವೆ ಎಂದರು.

ಎಚ್ಚರ ವಹಿಸಬೇಕು: ಸಮಾಜಕ್ಕೆ ಒಳ್ಳೆಯ ಮಾಹಿತಿ ಹಾಗೂ ನಿರ್ಮಲ ವಾತಾವರಣ ನೀಡುವುದಕ್ಕಾಗಿ ರಂಗಾಯಣ ಕಟ್ಟಿದ್ದು, ಬೆಳೆಸಿದ್ದು. ಸಂಸ್ಕೃತಿ ಮತ್ತು ಸಾಹಿತ್ಯ ರಂಗ ಮನಸ್ಸುಗಳಿಗೆ ಮುದ ನೀಡುವಂತಿರಬೇಕು. ಕಲೆ, ಸಾಹಿತ್ಯ, ಬಹುಸಂಸ್ಕೃತಿಯ ಪ್ರತೀಕವಾದ ರಂಗಾಯಣಕ್ಕೆ ನಿರ್ದೇಶಕರನ್ನು ನೇಮಕ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

ರೈತ ಮುಖಂಡ ಹೊಸಕೋಟೆ ಬಸವರಾಜು ಮಾತನಾಡಿ, ರಂಗಾಯಣ ಇರುವುದು ಪ್ರೀತಿ ಹಂಚುವುದಕ್ಕಾಗಿಯೇ ಹೊರತು ದ್ವೇಷವನ್ನಲ್ಲ. ಎಲ್ಲಾ ಜಾತಿ–ಧರ್ಮವನ್ನೂ ಒಟ್ಟಾಗಿ ಕಾಣಬೇಕು. ಆದರೆ ಹಿಂದಿನ ರಂಗಾಯಣ ನಿರ್ದೇಶಕರಾಗಿದ್ದ ಅಡ್ಡಂಡ ಸಿ.ಕಾರ್ಯಪ್ಪ, ಏಕ ಸಂಸ್ಕೃತಿಗೆ ಅವಕಾಶ ಮಾಡಿಕೊಟ್ಟಿದ್ದರು. ಮುಂದಿನ ದಿನಗಳಲ್ಲಿ ರಂಗಾಯಣ ಮೊದಲಿನಂತೆ ಸರ್ವರನ್ನು ಸಮಾನವಾಗಿ ಕಾಣುವಂತಾಗಲಿ ಎಂದು ಆಶಿಸಿದರು.

ಪ್ರೊ.ಜಿ.ಹೆಚ್.ನಾಯಕ್‌ರಿಗೆ ಶ್ರದ್ಧಾಂಜಲಿ...

ಪ್ರಗತಿಪರ ಸಂಘಟನೆಗಳ ಒಕ್ಕೂಟ ಹಾಗೂ ಮೈಸೂರಿನ ರಂಗಕರ್ಮಿಗಳ ವತಿಯಿಂದ ಖ್ಯಾತ ವಿಮರ್ಶಕ ಪ್ರೊ.ಜಿ.ಹೆಚ್.ನಾಯಕ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಸಾಹಿತಿ ಪ್ರೊ.ಪಂಡಿತಾರಾಧ್ಯ ನುಡಿನಮನ ಸಲ್ಲಿಸಿದರೆ, ಪ್ರೊ.ಜಿ.ಹೆಚ್.ನಾಯಕ್ ಅವರ ಮಕ್ಕಳು, ಮೊಮ್ಮಕ್ಕಳು ಪುಷ್ಪನಮನ ಸಲ್ಲಿಸಿದರು. ಈ ವೇಳೆ ರಂಗಕರ್ಮಿ ಜನಾರ್ಧನ್(ಜನ್ನಿ) ಮಾತನಾಡಿ, ವ್ಯಕ್ತಿಯನ್ನು ವ್ಯಕ್ತಿತ್ವವಾಗಿ ರೂಪಿಸುತ್ತಿದ್ದ ನಮ್ಮ ಮೇಷ್ಟ್ರು ಜಿ.ಹೆಚ್.ನಾಯಕ್ ಅವರಿಗೆ ಗೀತಗಾಯನ ಕಾರ್ಯಕ್ರಮವನ್ನು ಅರ್ಪಿಸುತ್ತಿದ್ದೇವೆ ಎಂದರು.

ದುರಸ್ಥಿ ಕೆಲಸವಾಗಬೇಕು: ಚಿಂತಕ ನಾ.ದಿವಾಕರ್ ಮಾತನಾಡಿ, ಮೈಸೂರು ರಂಗಾಯಣವನ್ನು ಬೆಳೆಸಲೇಬೇಕು ಎಂಬ ಕೂಗಿನಿಂದ ಬೆಳೆಸಲಾಗಿದೆ. ಆದರೆ ಇಂದು ಉಳಿಸಬೇಕು ಎಂಬ ಕೂಗು ಕೇಳುತ್ತಿದೆ ಹಾಗೂ ಮೂಲ ಅರ್ಥವನ್ನು ಕಳೆದುಕೊಳ್ಳುತ್ತಿದೆ ಎಂದರೆ ರಂಗಾಯಣಕ್ಕೆ ದುರಸ್ಥಿ ಕೆಲಸವಾಗಬೇಕಾಗಿದೆ ಎಂದರು.

ಕಾರ್ಮೋಡವನ್ನು ಸ್ಮರಿಸುವುದು ಬೇಡ: ರಂಗಕರ್ಮಿ ಕೃಷ್ಣಪ್ರಸಾದ್ ಮಾತನಾಡಿ, ಕೆಡವುದು ನಮ್ಮ ಸಂಸ್ಕೃತಿಯಲ್ಲ, ಕಟ್ಟುವುದು ನಮ್ಮ ಸಂಸ್ಕೃತಿ ಎಂಬುದನ್ನು ಬಿ.ವಿ. ಕಾರಂತರು ನಮಗೆ ಕಲಿಸಿಕೊಟ್ಟಿದ್ದಾರೆ. ಇಂತಹ ಗುರುಗಳ ನಡುವೆ ಇರುವ ನಾವು ಉಳಿಸಿ–ಬೆಳೆಸದೆ ಮತ್ತೇನು ಮಾಡಬೇಕು. ಕಪ್ಪು ಕಾರ್ಮೋಡ ಹೋಗಿದೆ. ಆ ಕಪ್ಪನ್ನು ಮತ್ತೆ ನೆನಪಿಸಿಕೊಳ್ಳುವುದು ಬೇಡ. ಬೆಳದಿಂಗಳು ಬಂದಿದೆ. ಆ ಬೆಳದಿಂಗಳಿನಲ್ಲಿ ರಂಗಭೂಮಿಯನ್ನು ಕಟ್ಟಿ, ಬೆಳೆಸೋಣ ಎಂದು ಹೇಳಿದರು. ಹಿರಿಯ ರಂಗಕರ್ಮಿ ಮೈಮ್ ರಮೇಶ್, ಪ್ರಗತಿಪರ ಚಿಂತಕ ಕೆ.ಆರ್. ಗೋಪಾಲಕೃಷ್ಣ, ಜಗದೀಶ್ ಕೊಪ್ಪ ಮತ್ತಿತರರಿದ್ದರು.

ಕನ್ನಡದ ಖ್ಯಾತ ವಿಮರ್ಶಕ ಜಿ.ಹೆಚ್.ನಾಯಕ್ ಅಂತ್ಯಕ್ರಿಯೆ

ಮಾಜಿ ಸಿಎಂ ವೀರಪ್ಪ ಮೊಯ್ಲಿ ಅಂತಿಮ ನಮನ

ಮೈಸೂರು, ಮೇ 27– ಕನ್ನಡದ ಖ್ಯಾತ ವಿಮರ್ಶಕ ಜಿ.ಎಚ್.ನಾಯಕ್ (88) ಅವರ ಅಂತ್ಯಕ್ರಿಯೆಯು ಚಾಮುಂಡಿಬೆಟ್ಟ ತಪ್ಪಲಿನ ಹರಿಶ್ಚಂದ್ರ ಘಾಟ್‌ನ ವಿದ್ಯುತ್ ಚಿತಾಗಾರದಲ್ಲಿ ಯಾವುದೇ ವಿಧಿ–ವಿಧಾನಗಳಿಲ್ಲದೆ ಶನಿವಾರ ಮಧ್ಯಾಹ್ನ 2.30ರ ಸುಮಾರಿಗೆ ನೆರವೇರಿತು.



ಪತ್ನಿ, ಸಾಮಾಜಿಕ ಹೋರಾಟಗಾರ್ತಿ ಮೀರಾ ನಾಯಕ್, ಪುತ್ರಿ ಕೀರ್ತಿ ಸೇರಿದಂತೆ ಕುಟುಂಬದವರು, ಬಂಧುಗಳು, ಆಪ್ತರು, ಒಡನಾಡಿಗಳು, ಶಿಷ್ಯರು ಹಾಗೂ ಗಣ್ಯರು ಪಾಲ್ಗೊಂಡು ಕಂಬನಿ ಮಿಡಿದರು. ಈ ವೇಳೆ ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ದನ್ (ಜನ್ನಿ) ನೇತೃತ್ವದಲ್ಲಿ 'ಗಿಳಿಯು ಪಂಜರದೊಳಿಲ್ಲ' ಮತ್ತು 'ಓ ನನ್ನ ಚೇತನ, ಆಗು ನೀ ಅನಿಕೇತನ' ಗೀತೆಗಳನ್ನು ಹಾಡಿ ಜಿ.ಎಚ್.ನಾಯಕ್ ಅವರ ಆತ್ಮಕ್ಕೆ ಶ್ರದ್ಧಾಂಜಲಿ ಕೋರಿದರು. ನಂತರ ರಂಗಾಯಣ ಕಲಾವಿದರು 'ಮೂಲೋಕದಯ್ಯ ದೇವನೆಸಯ್ಯ ಸೋಲಿಸಬೇಡ ಗೆಲಿಸಯ್ಯ' ಹಾಡು ಹಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಅಂತ್ಯಕ್ರಿಯೆಯಲ್ಲಿ ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಮಾಜಿ ಶಾಸಕ ವಾಸು, ಡಾ.ನೀಲಗಿರಿ ತಳವಾರ, ನಿಡುಮಾಮಿಡಿ ಮಹಾಸಂಸ್ಥಾನದ ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಹಿರಿಯ ಸಾಹಿತಿಗಳಾದ ಓ.ಎಲ್.ನಾಗಭೂಷಣ ಸ್ವಾಮಿ, ರಾಜಪ್ಪ ದಳವಾಯಿ, ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಹೊಸಕೋಟೆ ಬಸವರಾಜು, ಕುರುಬೂರು ಶಾಂತಕುಮಾರ್, ಡಾ.ಎಚ್.ಆರ್.ತಿಮ್ಮೇಗೌಡ, ಡಾ.ಸತ್ಯನಾರಾಯಣ ಮಲ್ಲಿಪಟ್ಟಣ, ವಿನಯ ವಕ್ಕುಂದ, ಎಂ.ಡಿ.ವಕ್ಕುಂದ, ಪಿ.ಚಂದ್ರಿಕಾ, ಕನ್ನಡ ಗಣಕ ಪರಿಷತ್ ಕಾರ್ಯದರ್ಶಿ ನರಸಿಂಹಮೂರ್ತಿ, ಪ್ರೊ.ಕಾಳಚನ್ನೇಗೌಡ, ಪ್ರೊ.ಪಂಡಿತಾರಾಧ್ಯ, ಬಸವರಾಜು, ಪ್ರೊ.ಪೃಥ್ವಿದತ್ತ ಚಂದ್ರಶೋಭಿ, ಡಾ.ನರೇಂದ್ರ ಕುಮಾರ್, ಧನಂಜಯ ಈ. ಎಲಿಯೂರು, ಚಿಂತನ–ಚಿತ್ತಾರ ಪ್ರಕಾಶನದ ನಿಂಗರಾಜು ಚಿತ್ತಣ್ಣನವರ್, ಲೇಖಕ ಗಣೇಶ್ ಅಮೀನಗಡ, ರಂಗಾಯಣದ ಕಲಾವಿದರಾದ ಪ್ರಶಾಂತ್ ಹಿರೇಮಠ, ಹುಲುಗಪ್ಪ ಕಟ್ಟೀಮನಿ, ಕೃಷ್ಣಪ್ರಸಾದ್, ನಂದಿನಿ, ಶಶಿಕಲಾ, ಪಂಕಜ ಗೊರೂರು, ಅಪ್ಪಾಜಿಗೌಡ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು. ಶನಿವಾರ ಮಧ್ಯಾಹ್ನ 12.30ರವರೆಗೆ ಮೈಸೂರಿನ ಸರಸ್ವತಿಪುರಂ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಮುಂದಿನ ಸಚಿವ ಸಂಪುಟದಲ್ಲಿ ಗ್ಯಾರಂಟಿ ಕುರಿತು ಸ್ಪಷ್ಟ ನಿರ್ಧಾರ

ಬೆಂಗಳೂರು, ಮೇ 27– ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಜೂನ್‌ನಲ್ಲಿ ಮುಂದಿನ ಸಚಿವ ಸಂಪುಟ ಸಭೆ ನಡೆಯುವ ಸಾಧ್ಯತೆಯಿದೆ. ಈ ಹಿಂದೆ ಅಧಿಕಾರದಲ್ಲಿದ್ದ ವಿಪಕ್ಷಗಳು ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. 2013–18ರಲ್ಲಿ ನಾವು ನೀಡಿದ್ದ ಭರವಸೆಗಳನ್ನು ಈಡೇರಿಸಿದ್ದೇವೆ. ಅದೇ ರೀತಿಯಲ್ಲಿ ಈ ಬಾರಿಯೂ ಜನರಿಗೆ ನೀಡಿರುವ ಭರವಸೆಗಳನ್ನು ಈಡೇರಿಸಲಾಗುವುದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಐದು ಭರವಸೆಗಳ ಅನುಷ್ಠಾನಕ್ಕೆ ಚರ್ಚಿಸಿ ಅನುಮೋದನೆ ನೀಡಲಾಗುವುದು. ಸಚಿವ ಸಂಪುಟ ಹೊಸ ಮತ್ತು ಹಳೆಯ ಮುಖಗಳ ಮಿಶ್ರಣವಾಗಿದೆ ಆದರೆ ಮೊದಲ ಬಾರಿಗೆ ಶಾಸಕರಾಗಿ ಗೆದ್ದ ಯಾರನ್ನೂ ಮಂತ್ರಿ ಮಾಡಲಾಗಿಲ್ಲ. ಜನರು ಬದಲಾವಣೆ ಬಯಸಿರುವುದರಿಂದ ಸರ್ಕಾರ ನೀಡಿದ ಭರವಸೆಯನ್ನು ಈಡೇರಿಸಬೇಕು ಮತ್ತು ಆಡಳಿತಕ್ಕೆ ಹೊಸ ರೂಪ ನೀಡುವ ನಿಟ್ಟಿನಲ್ಲಿ ಈ ಸಚಿವ ಸಂಪುಟ ರಚನೆ ಮಾಡಲಾಗಿದೆ ಎಂದರು.

ಮಾ ಉತ್ಸವ: ಮೈಸೂರು ಮೆಡಿಕಲ್ ಕಾಲೇಜು ಸಾಧಕ ಹಿರಿಯ ವಿದ್ಯಾರ್ಥಿಗಳಿಗೆ ಸನ್ಮಾನ



ಮೈಸೂರು, ಮೇ 27(ಎಂಕೆ)– ನಗರದ ಜೆ.ಕೆ. ಮೈದಾನ(ಎಂಎಂಸಿ ಸ್ಪೋರ್ಟ್ ಗ್ರೌಂಡ್)ದಲ್ಲಿರುವ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಅಲುಮ್ನಿ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಮಾ ಉತ್ಸವ–2023'ದಲ್ಲಿ ಎಂಎಂಸಿ–ಆರ್‌ಐನ ಹಿರಿಯ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ವೈದ್ಯರಾಗಿ ಅಪಾರ ಸೇವೆ ಸಲ್ಲಿಸಿದವರನ್ನು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಮಾ ಉತ್ಸವದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಹಾಗೂ ಇತರೆ ಗಣ್ಯರು ಹಿರಿಯ ವೈದ್ಯರಾದ ಡಾ.ಬೃಂದಾ ದೇವಿ, ಡಾ.ಚಂದ್ರಶೇಖರ್, ಡಾ.ಹನುಮಕ್ಕ, ಡಾ.ಇಂದಿರಾರಾವ್, ಡಾ.ಕಮಲಮ್ಮ, ಡಾ.ಕನಕಲತಾ ಸುಂದರೇಶ್, ಡಾ.ಲಿಂಗಮ್ಮ, ಡಾ.ಕೆ.ಎನ್.ಮೋಹನ್, ಡಾ.ಎಂ.ಎಸ್.ಪ್ರಸನ್ನ ಕುಮಾರ್, ಡಾ.ಹೆಚ್.ಎಸ್.ರುದ್ರೇಶ್, ಡಾ.ಸಚ್ಚಿದಾನಂದ, ಡಾ.ಸಿ.ಕೆ.ಶಾಸ್ತ್ರಿ, ಡಾ.ಎಸ್.ಪಿ.ಶ್ರೀನಿವಾಸ್, ಡಾ.ಶಿವಮಾದು, ಡಾ.ಸುಂದರೇಶನ್, ಡಾ.ಉದಯ್ ಕುಮಾರ್ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಬಳಿಕ ಮಾತನಾಡಿದ ಪ್ರೊ.ಕೆ.ಎಸ್.ರಂಗಪ್ಪ, ಮೈಸೂರು ಮೆಡಿಕಲ್ ಕಾಲೇಜು ಆರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಡಿಯಲ್ಲಿ ಬರುತ್ತಿತ್ತು. ನಮ್ಮ ಮೈಸೂರು ನಗರ ಸಾಂಸ್ಕೃತಿಕತೆಗೆ ಮಾತ್ರವಷ್ಟೇ ಹೆಸರಾಗಿಲ್ಲ. ದೇಶದಲ್ಲಿಯೇ ಅತ್ಯುನ್ನತ ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ಸಾಂಪ್ರದಾಯಿಕ ಹಾಗೂ ಉನ್ನತ ಶಿಕ್ಷಣ ನೀಡುವಲ್ಲಿ ಅಪಾರ ಕೊಡುಗೆಯನ್ನು ನೀಡುತ್ತಿದೆ. ಇದಕ್ಕೆಲ್ಲಾ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಕಾರಣ ಎಂದು ಶ್ಲಾಘಿಸಿದರು.

ಮೈಸೂರಿನಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡಿರುವ ನೂರಾರು ಮಂದಿ ವೈದ್ಯರು ಪ್ರಪಂಚದೆಲ್ಲೆಡೆ ಸೇವೆ ಸಲ್ಲಿಸುತ್ತಿದ್ದಾರೆ. ದೇಶದ ಅಭಿವೃದ್ಧಿಯ ಕೇಂದ್ರ ಭಾಗವಾದ ವೈದ್ಯಕೀಯ ಕ್ಷೇತ್ರಕ್ಕೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಬೇಕು. ಕೋವಿಡ್ ಸಮಯದಲ್ಲಿ ವೈದ್ಯರು ನೀಡಿದ ಸೇವೆ ಸ್ಮರಿಸುವಂತಹದ್ದಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಸನ್ಮಾನಿತ ಹಿರಿಯ ವೈದ್ಯರಿಗೆ ಶುಭ ಕೋರಿದರು. ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಅಲೂಮ್ನಿ ಅಸೋಸಿಯೇಷನ್‌ನ ಗೌರವಾಧ್ಯಕ್ಷ ಡಾ.ಬಿ.ಡಿ.ಗಣಪತಿ, ಅಧ್ಯಕ್ಷ ಡಾ.ಎಸ್.ಚಂದ್ರಶೇಖರ್, ಮಾ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಚಂದ್ರಶೇಖರ್ ಶೆಟ್ಟಿ, ಆದಿಚುಂಚನಗಿರಿ ವಿವಿ ಕುಲಪತಿ ಡಾ.ಎಂ.ಎ.ಶೇಖರ್, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಾದ ಡಾ.ಕೆ.ಆರ್.ದಾಕ್ಷಾಯಿಣಿ, ಮಾ ಕಾರ್ಯದರ್ಶಿ ಡಾ.ಹೆಚ್.ಬಿ.ಶಶಿಧರ್, ಖಜಾಂಚಿ ಡಾ.ಎ.ಎಸ್.ಸರ್ವೇಶ್ ರಾಜೆ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಪ್ರವೀಣ್ ನೆಟ್ಟಾರು ಪತ್ನಿ ಮರು ನೇಮಕ: ಸಿಎಂ ಸ್ಪಷ್ಟನೆ

ಬೆಂಗಳೂರು: ಕಳೆದ ವರ್ಷ ಹತ್ಯೆಗೀಡಾದ ಹಿಂದೂ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಪತ್ನಿ ನೂತನ ಕುಮಾರಿ ಅವರ ಕೆಲಸದ ವಿಚಾರವಾಗಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾನವೀಯತೆ ಆಧಾರದಲ್ಲಿ ಮರು ನೇಮಕ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಶನಿವಾರ ಸಂಜೆ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಹೊಸ ಸರ್ಕಾರ ಬಂದ ನಂತರ ಹಿಂದಿನ ಸರ್ಕಾರ ನೇಮಕ ಮಾಡಿಕೊಂಡಿದ್ದ ತಾತ್ಕಾಲಿಕ ನೌಕರರನ್ನು ಸೇವೆಯಿಂದ ವಜಾ ಮಾಡುವುದು ಒಂದು ಸಹಜ ಪ್ರಕ್ರಿಯೆ. ಪ್ರವೀಣ್ ಅವರ ಪತ್ನಿ ಮಾತ್ರವಲ್ಲ ಸುಮಾರು 150ಕ್ಕೂ ಹೆಚ್ಚು ಗುತ್ತಿಗೆ ನೌಕರರನ್ನು ಈಗಾಗಲೇ ಸೇವೆಯಿಂದ ವಜಾ ಮಾಡಲಾಗಿದೆ. ಇದರಲ್ಲಿ ಸರ್ಕಾರದ ಯಾವುದೇ ಹಸ್ತಕ್ಷೇಪವಿಲ್ಲ. ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾನವೀಯತೆ ಆಧಾರದಲ್ಲಿ ನೂತನ ಕುಮಾರಿ ಅವರ ಮರು ನೇಮಕ ಮಾಡಲಾಗುವುದು ಎಂದು ತಿಳಿಸಿದ್ದಾರೆ.


ಪ್ರವೀಣ್ ಪತ್ನಿಯ ಗುತ್ತಿಗೆ ಕೆಲಸವು ಕೈತಪ್ಪಿರುವ ವಿಚಾರ ಚರ್ಚೆಗೆ ಗ್ರಾಸವಾಗಿದ್ದು, ಬಿಜೆಪಿ ಕಾಂಗ್ರೆಸ್ ಪಕ್ಷಗಳು ಒಬ್ಬರ ಮೇಲೆ ಮತ್ತೊಬ್ಬರು ಆರೋಪ ಮಾಡುತ್ತಿದ್ದರು. ಸಾಮಾಜಿಕ ಜಾಲತಾಣಗಳಲ್ಲಿ ಪರ ವಿರೋಧದ ಪೋಸ್ಟ್‌ಗಳು ವೈರಲ್ ಆಗಿದ್ದವು.

ಕೆಪಿಸಿಸಿ ಟ್ವೀಟ್‌ನಲ್ಲಿ ಏನಿದೆ: ಪ್ರವೀಣ್ ಕುಟುಂಬದ ಬಗ್ಗೆ ಕಾಳಜಿ ಇದ್ದ ಬಿಜೆಪಿ ತಾತ್ಕಾಲಿಕ ಗುತ್ತಿಗೆ ಕೆಲಸ ನೀಡಿದ್ದೇಕೆ ಎಂದು ಪ್ರಶ್ನಿಸಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಈಗ ನೆಟ್ಟಾರು ಕುಟುಂಬಕ್ಕೆ ರಾಜ್ಯ ಬಿಜೆಪಿ ಕಚೇರಿಯಲ್ಲಿಯೇ ಶಾಶ್ವತ ಕೆಲಸ ಕೊಟ್ಟು ಬದ್ಧತೆ ಪ್ರದರ್ಶಿಸಲಿ ಎಂದು ತಿರುಗೇಟು ನೀಡಿತು. ಶನಿವಾರ ಟ್ವೀಟ್ ಮಾಡಿರುವ ಕೆಪಿಸಿಸಿ, ಪ್ರವೀಣ್ ನೆಟ್ಟಾರು ಬಿಜೆಪಿ ಕಾರ್ಯಕರ್ತ, ಬಿಜೆಪಿಗೆ ನಿಜಕ್ಕೂ ಆತನ ಕುಟುಂಬದ ಮೇಲೆ ಕಾಳಜಿ ಇದ್ದಿದ್ದೇ ಆದರೆ ತಾತ್ಕಾಲಿಕ ಕೆಲಸ ನೀಡಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿರಲಿಲ್ಲ. ಈಗಲೂ ಕಾಲ ಮಿಂಚಿಲ್ಲ ರಾಜ್ಯ ಬಿಜೆಪಿ ಕಚೇರಿಯಲ್ಲೆ ಉತ್ತಮ ವೇತನದೊಂದಿಗೆ ಶಾಶ್ವತ ಉದ್ಯೋಗ ಕಲ್ಪಿಸಲಿ ಎಂದು ಹೇಳಿದೆ.


ಸಂಪುಟದಲ್ಲಿ ಸಚಿವ ಸ್ಥಾನ ವಂಚಿತ ಪ್ರಮುಖರು

ಬೆಂಗಳೂರು, ಮೇ 27–ಬೆಂಗಳೂರಿನ ರಾಜಭವನದಲ್ಲಿ 24 ಶಾಸಕರು ಶನಿವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಮೂರು ದಿನಗಳ ಕಾಲ ದೆಹಲಿಯಲ್ಲಿ ಮೊಕ್ಕಾಂ ಹೂಡಿ 24 ಸಚಿವ ಸ್ಥಾನಗಳಿಗೆ ಶಾಸಕರ ಹೆಸರನ್ನು ಅಂತಿಮಗೊಳಿಸಿ ಅವರ ಪ್ರಮಾಣ ವಚನ ಕೂಡ ಮುಗಿದಿದೆ. ಕಾಂಗ್ರೆಸ್ ಹೈಕಮಾಂಡ್ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿದೆ. ಅದರಂತೆ ರಾಜ್ಯದ ಹಲವಾರು ಪ್ರಮುಖ ಕಾಂಗ್ರೆಸ್ ನಾಯಕರಿಗೆ ಸಚಿವ ಸ್ಥಾನ ಕೈತಪ್ಪಿಹೋಗಿದೆ.

ಆರ್.ವಿ.ದೇಶಪಾಂಡೆ: ಒಂಬತ್ತು ಬಾರಿ ಶಾಸಕರಾಗಿ ಹಾಗೂ ಮಾಜಿ ಸಚಿವರಾಗಿದ್ದ ಇವರು ಹೊಸದಾಗಿ ಆಯ್ಕೆಯಾದ ಶಾಸಕರಿಗೆ ಪ್ರಮಾಣ ವಚನ ಬೋಧಿಸಲು ಹಂಗಾಮಿ ಸ್ಪೀಕರ್ ಆಗಿದ್ದರು. ಹಳಿಯಾಳದ 76 ವರ್ಷದ ಆರ್.ವಿ. ದೇಶಪಾಂಡೆಯವರಿಗೆ ಸ್ಪೀಕರ್ ಸ್ಥಾನವನ್ನು ವರಿಷ್ಠರು ನೀಡಿದರೂ ಅವರು ಒಪ್ಪಲಿಲ್ಲ. ಅವರು ಕ್ಯಾಬಿನೆಟ್ ಸ್ಥಾನದ ಸ್ಪರ್ಧಿಗಳಲ್ಲಿ ಒಬ್ಬರಾಗಿದ್ದರು ಆದರೆ ಕಾಂಗ್ರೆಸ್ ಅವರನ್ನು ನಿರಾಕರಿಸಿದೆ.



ಲಕ್ಷ್ಮಣ ಸವದಿ: ಬೆಳಗಾವಿ ಜಿಲ್ಲೆಯ ಅಥಣಿಯ 63 ವರ್ಷದ ನಾಯಕನಿಗೆ ಈ ಬಾರಿ ಬಿಜೆಪಿ ಟಿಕೆಟ್ ನಿರಾಕರಿಸಿದ ನಂತರ ಕಾಂಗ್ರೆಸ್ ಸೇರಿದರು. ಕಾಂಗ್ರೆಸ್ ಅವರನ್ನು ಮುಕ್ತಕಂಠದಿಂದ ಸ್ವಾಗತಿಸಿ ಅಥಣಿಯಿಂದ ಟಿಕೆಟ್ ನೀಡಿತು. ಅವರು ಕಾಗವಾಡ ಮತ್ತು ಕುಡಚಿ ವಿಧಾನ ಸಭಾ ಕ್ಷೇತ್ರಗಳಲ್ಲಿ ವ್ಯಾಪಕ ಪ್ರಚಾರ ನಡೆಸಿದರು. ಲಿಂಗಾಯತ ನಾಯಕ ಕ್ಯಾಬಿನೆಟ್ ಸ್ಥಾನದ ನಿರೀಕ್ಷೆಯಲ್ಲಿದ್ದರು ಆದರೆ ಪಕ್ಷವು ಅವರನ್ನು ನಿರಾಕರಿಸಿದೆ. ಸಚಿವ ಸ್ಥಾನ ನಿರಾಕರಿಸಿದ್ದಕ್ಕೆ ಅವರ ಬೆಂಬಲಿಗರು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.




ಪ್ರಕಾಶ ಹುಕ್ಕೇರಿ: ಹಿರಿಯ ಕಾಂಗ್ರೆಸ್ ನಾಯಕ, ಮಾಜಿ ಸಚಿವರು, ಶಾಸಕರು ಮತ್ತು ಸಂಸದರು ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 76 ವರ್ಷದ ಅವರು ಎಂಎಲ್‌ಸಿ ಕೋಟಾದಲ್ಲಿ ಕ್ಯಾಬಿನೆಟ್ ಸ್ಥಾನವನ್ನು ನಿರೀಕ್ಷಿಸುತ್ತಿದ್ದರು ಆದರೆ ವಯಸ್ಸಿನ ಅಂಶದಿಂದಾಗಿ ಕಾಂಗ್ರೆಸ್ ಅವರನ್ನು ನಿರಾಕರಿಸಿದೆ. ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು.



ಟಿ.ಬಿ.ಜಯಚಂದ್ರ: ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಸಂಪುಟ ಸ್ಥಾನವನ್ನು ನಿರಾಕರಿಸಲಾಗಿದೆ. 6 ಬಾರಿ ಶಾಸಕರಾಗಿರುವ ಇವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರು. 2018ರ ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ, ಅವರು ಇತ್ತೀಚೆಗೆ ಮುಗಿದ ಚುನಾವಣೆಯಲ್ಲಿ ಸಿರಾ ವಿಧಾನಸಭಾ ಕ್ಷೇತ್ರದಿಂದ ಗೆದ್ದಿದ್ದಾರೆ.



ಬಿ.ಕೆ.ಹರಿಪ್ರಸಾದ್: ಬಿಲ್ಲವ ಸಮುದಾಯಕ್ಕೆ ಸೇರಿದ 68 ವರ್ಷದ ನಾಯಕ ಅವರು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿದ್ದರು. ಅವರು ಹಾಲಿ ಎಂಎಲ್‌ಸಿ. ಸಚಿವ ಸ್ಥಾನಕ್ಕಾಗಿ ಲಾಬಿ ಮಾಡಲು ಹಲವು ದಿನಗಳಿಂದ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದ ಅವರಿಗೆ ಹೈಕಮಾಂಡ್ ಮನಸೋತಿರಲಿಲ್ಲ. ಹರಿಪ್ರಸಾದ್ ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಅಜಯ್ ಸಿಂಗ್, ಅಶೋಕ್ ಪಟ್ಟಣ್, ಗಣೇಶ್ ಹುಕ್ಕೇರಿ, ರಿಜ್ವಾನ್ ಅರ್ಷದ್, ವಿನಯ್ ಕುಲಕರ್ಣಿ, ಶಿವಲಿಂಗೇಗೌಡ ಮತ್ತು ಎನ್.ಎ.ಹ್ಯಾರಿಸ್ ಕ್ಯಾಬಿನೆಟ್ ಸ್ಥಾನ ವಂಚಿತ ಇತರರಲ್ಲಿ ಪ್ರಮುಖರು.



ಹೆಬ್ಬಾಳಲ್ಲಿ ಸ್ಕೇಟಿಂಗ್ ರಿಂಕ್ ನಿರ್ಮಾಣಕ್ಕೆ ಶಂಕುಸ್ಥಾಪನೆ

ಮೂರು ತಿಂಗಳಲ್ಲಿ ಕಾಮಗಾರಿ ಮುಗಿಸುವ ಷರತ್ತು



ಮೈಸೂರು, ಮೇ 27 (ಆರ್‌ಕೆ)– ಮೈಸೂರಿನ ಹೆಬ್ಬಾಳು 2ನೇ ಹಂತದ ಸಿಐಟಿಬಿ ಕಲ್ಯಾಣ ಮಂಟಪ ಬಳಿಯ ಆಟದ ಮೈದಾನದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸ್ಕೇಟಿಂಗ್ ರಿಂಕ್ ಕಾಮಗಾರಿಗೆ ಇಂದು ಶಂಕುಸ್ಥಾಪನೆ ನೆರವೇರಿಸಲಾಯಿತು.

ಮೈಸೂರು ಮಹಾನಗರಪಾಲಿಕೆಯಿಂದ ನರ್ಮ್ ಯೋಜನೆಯಡಿ 3.5 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸುತ್ತಿರುವ ಸ್ಕೇಟಿಂಗ್ ರಿಂಕ್ ಯೋಜನೆಗೆ ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ ಹಾಗೂ ಶಾಸಕ ಕೆ.ಹರೀಶ್‌ಗೌಡ, ಗುದ್ದಲಿ ಪೂಜೆ ನೆರವೇರಿಸಿದರು. ಪಾಲಿಕೆ ವಲಯ ಕಚೇರಿ–5ರ ವ್ಯಾಪ್ತಿಗೆ ಬರುವ ಆಟದ ಮೈದಾನದಲ್ಲಿ 29 ಮೀಟರ್ ಉದ್ದ, 62 ಮೀಟರ್ ಅಗಲ ಹಾಗೂ 4 ಮೀಟರ್ ಎತ್ತರದ ಸ್ಕೇಟಿಂಗ್ ರಿಂಕ್ ಟೆನ್‌ಸೈಲ್ ರೂಫಿಂಗ್ ಒಳಗೊಂಡಿದ್ದು, ಅದರ ಸುತ್ತ ವೀಕ್ಷಕರಿಗಾಗಿ ಆಸನಗಳ ವ್ಯವಸ್ಥೆ, ಪಾದಚಾರಿ ಮಾರ್ಗ, ರಾತ್ರಿ ವೇಳೆಯೂ ಸ್ಕೇಟಿಂಗ್ ಆಡಲು ಅನುಕೂಲವಾಗುವಂತೆ ಫ್ಲಡ್ ಲೈಟ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ಎಲ್.ಜಿ.ಕುಮಾರ ಎಂಬುವರು ಟೆಂಡರ್ ಮೂಲಕ ಕಾಮಗಾರಿ ವಹಿಸಿಕೊಂಡಿದ್ದು, ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಬೇಕಿದೆ. ಇದು ಮೈಸೂರಿನಲ್ಲಿ ಮೊದಲ ಸ್ಕೇಟಿಂಗ್ ರಿಂಕ್ ಆಗಿದ್ದು, ಸುತ್ತಮುತ್ತಲ ಬಡಾವಣೆಗಳ ಮಕ್ಕಳ ಸ್ಕೇಟಿಂಗ್ ಕ್ರೀಡೆಗೆ ಅನುಕೂಲವಾಗುತ್ತದೆ. ಮಕ್ಕಳಲ್ಲಿ ಈ ಕ್ರೀಡೆ ಬಗ್ಗೆ ಆಸಕ್ತಿ ಮೂಡಿಸಲು ಹಾಗೂ ಪ್ರೋತ್ಸಾಹ ನೀಡಲು ಇದು ಸಹಕಾರಿಯಾಗಲಿದೆ ಎಂದರು.

ಉಪಮೇಯರ್ ಡಾ. ಜಿ.ರೂಪಾ, ನಗರಪಾಲಿಕೆ ಸದಸ್ಯರಾದ ಲಕ್ಷ್ಮೀ ಎಂ.ಶಿವಣ್ಣ, ಎಂ.ಯು.ಸುಬ್ಬಯ್ಯ, ಪಾಲಿಕೆ ಆಯುಕ್ತರಾದ ಜಿ. ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್, ಅಭಿವೃದ್ಧಿ ಅಧಿಕಾರಿ ಯೋಗಾನಂದ, ಅಸಿಸ್ಟೆಂಟ್ ಇಂಜಿನಿಯರ್ ಪೂರ್ಣಶ್ರೀ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಭಾನುವಾರ 28 ಮೇ 2023

ಕೋವಿಡ್ ಬಳಿಕ ಮಕ್ಕಳು, ಯುವಕರಲ್ಲಿ ಹೆಚ್ಚಾದ ಮಾನಸಿಕ ಖಿನ್ನತೆ

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಆತಂಕ



ಮಂಡ್ಯ, ಮೇ 27– ಕೋವಿಡ್ ನಂತರದ ದಿನಗಳಲ್ಲಿ ಮಕ್ಕಳು ಮತ್ತು ಯುವಕರಲ್ಲಿ ಮಾನಸಿಕ ಖಿನ್ನತೆ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ಹುಡುಕಿ ಪರಿಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತಿಳಿಸಿದರು.

ಲಯನ್ಸ್ ಸಂಸ್ಥೆ ವತಿಯಿಂದ ಶನಿವಾರ ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಪ್ರಾಂತೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಮನೆಯಲ್ಲಿ ಎಲ್ಲರೂ ಒಂದಲ್ಲ ಒಂದು ಒತ್ತಡದಲ್ಲೇ ಬದುಕುವಂತಾಗಿದೆ. ಇದರಿಂದಾಗಿ ಮಕ್ಕಳ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಮನೆಯಲ್ಲಿ ಪ್ರೀತಿ, ವಿಶ್ವಾಸ ಇಲ್ಲದೇ ಸಂಕಷ್ಟ, ತುಮುಲ ಇದ್ದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದರು.

ಆಳುವ ಸರ್ಕಾರಗಳು ಎಷ್ಟೇ ಪ್ರಯತ್ನಿಸಿದರೂ, ಇನ್ನೂ ಹಸಿವು ಮುಕ್ತ ಮಾಡಲು ಸಾಧ್ಯವಾಗಿಲ್ಲ. ಹಸಿವಿನಿಂದ ಬಳಲುವವರನ್ನು ಸಂರಕ್ಷಿಸುವುದು, ಹಸಿವನ್ನು ಹೊಡೆದೋಡಿಸುವ ಕಾರ್ಯ ಮಾಡಬೇಕಾಗಿದೆ ಎಂದರು.

ಹಸಿವು ಇರಬೇಕು. ಅದಕ್ಕೆ ತಕ್ಕಂತೆ ಆಹಾರವೂ ಇರಬೇಕು. ಹಸಿವಿನಿಂದ ಸಾವು ಸಂಭವಿಸುತ್ತಿದೆ. ಆಹಾರ ಸಿಗದೆ ಒಬ್ಬ ವ್ಯಕ್ತಿ ಜೀವ ಬಿಡುತ್ತಾನೆ ಎಂದರೆ ಇದಕ್ಕಿಂತ ಭೀಕರತೆ, ಅಮಾನವೀಯತೆ ಬೇರೊಂದಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ಜಾರಿ ಮಾಡಿದೆ. ಯಾರಿಗೆ ಕೆಲಸ ಇಲ್ಲ ಅವರಿಗೆ ಕೆಲಸ ಕೊಡುವುದು, ಆಹಾರವನ್ನು ಕೊಡುವುದು. ಹಸಿವಿನಿಂದ ಯಾರೂ ಬಳಲಬಾರದು ಎಂಬ ಯೋಜನೆ ರೂಪಿಸಿದ್ದರೂ, ಅದು ಸರಿಯಾದ ರೀತಿಯಲ್ಲಿ ಫಲ ನೀಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಲಯನ್ಸ್ ಸಂಸ್ಥೆ ಹಲವಾರು ಸೇವಾ ಕಾರ್ಯ ಮಾಡಿದೆ. ವೈದ್ಯಕೀಯ ಕ್ಷೇತ್ರದಲ್ಲೂ ಕಣ್ಣಿಗೆ ಸಂಬಂಧಿಸಿದಂತೆ ಶಿಬಿರ ಸೇರಿದಂತೆ ಉಚಿತವಾಗಿ ಶಸ್ತ್ರ ಚಿಕಿತ್ಸೆಯಂತಹ ಕಾರ್ಯಗಳನ್ನು ಮಾಡಿದೆ ಎಂದು ಲಯನ್ಸ್‌ನ ಸೇವೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ಷಣಿಕ ಸಂತೋಷ ಬಿಟ್ಟು ಶಾಶ್ವತ ಸಂತಸದ ಕಡೆಗೆ ಹೋಗುವುದು ಮುಖ್ಯ ಎಂದ ಅವರು, ಪರೀಕ್ಷೆ ಬರೆದು ಒಳ್ಳೆಯ ಅಂಕ ಬಂದರೆ ಆ ಕ್ಷಣದಲ್ಲಿ ಸಂತಸವಾಗುತ್ತದೆ. ಆದರೆ ನಾವು ಮಾಡುವ ನಿರಂತರ ಕಾರ್ಯಗಳಿಂದ ಶಾಶ್ವತವಾಗಿ ಸಂತೋಷ ಕಾಣುವಂತಾಗಬೇಕು. ಸೇವಾ ಕಾರ್ಯಗಳನ್ನು ಮಾಡಿದಾಗ ಸಿಗುವಂತಹ ಆನಂದ ಬೇರೆ ಯಾವುದರಲ್ಲೂ ದೊರೆಯದು ಎಂದರು.

ವೇದಿಕೆಯಲ್ಲಿ ಪ್ರಾಂತೀಯ ಸಮ್ಮೇಳನದ ಅಧ್ಯಕ್ಷ ಹೆಚ್.ಎಲ್.ವಿಶಾಲರಘು, ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಮೈಸೂರು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹೃದಯ ತಜ್ಞ ಡಾ.ಕೆ.ಎಸ್.ಸದಾನಂದ, ಜಿಲ್ಲಾ ಲಯನ್ಸ್ ರಾಜ್ಯಪಾಲ ಡಾ.ಶ್ರೀವಿದ್ಯಾ, ಪ್ರಾಂತೀಯ ಅಧ್ಯಕ್ಷ ಡಾ.ವೈ.ಎಚ್.ರತ್ನಮ್ಮ, ಅಪ್ಪಾಜಿ, ಎಚ್.ಆರ್.ಪದ್ಮನಾಭ, ರೆಡ್‌ಕ್ರಾಸ್ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಇತರರಿದ್ದರು.

ನರೇಂದ್ರಸ್ವಾಮಿಗೆ ಸಿಗದ ಸಚಿವ ಸ್ಥಾನ: ಪ್ರತಿಭಟನೆ



ಮಳವಳ್ಳಿ, ಮೇ 27– ಶಾಸಕ ಪಿ.ಎಂ.ನರೇಂದ್ರಸ್ವಾಮಿಗೆ ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪಟ್ಟಣದ ಅನಂತ ರಾಂ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಮಾತನಾಡಿ, ಜೆಡಿಎಸ್ ಭದ್ರಕೋಟೆ ಮಂಡ್ಯ ಜಿಲ್ಲೆಯಲ್ಲಿ ಎನ್.ಚಲುವರಾಯಸ್ವಾಮಿ ಹಾಗೂ ಪಿ.ಎಂ.ನರೇಂದ್ರಸ್ವಾಮಿ ಜೋಡೆತ್ತುಗಳಾಗಿ ಕಾಂಗ್ರೆಸ್ ಪಕ್ಷ ಸಂಘಟಿಸಿ, 2 ವಿಧಾನಪರಿಷತ್ ಮತ್ತು 6 ವಿಧಾನಸಭಾ ಸದಸ್ಯರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹೀಗಾಗಿ ನರೇಂದ್ರಸ್ವಾಮಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಗೆಲ್ಲಿಸಿದರೇ ಮಂತ್ರಿ ಮಾಡುತ್ತೇವೆಂದು ಹೇಳಿದ್ದರು. ಅದರಂತೆ 46 ಸಾವಿರಕ್ಕೂ ಹೆಚ್ಚು ಅಂತರದಲ್ಲಿ ಗೆಲ್ಲಿಸಿ ಕಳುಹಿಸಿದ್ದೇವೆ. ಕೊಟ್ಟ ಮಾತಿನಂತೆ ನರೇಂದ್ರಸ್ವಾಮಿ ಅವರಿಗೆ ಮಂತ್ರಿಸ್ಥಾನ ನೀಡಲೇಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸದೃಢವಾಗಿ ಕಟ್ಟುವುದಲ್ಲದೇ, ಪಕ್ಷಕ್ಕಾಗಿ ಕಾರ್ಯಕರ್ತರು ತನು, ಮನ, ಧನವನ್ನು ಧಾರೆ ಎರೆದಿದ್ದಾರೆ. ಇಂತಹ ದಕ್ಷ ಆಡಳಿತಗಾರರಿಗೆ ಮಂತ್ರಿ ಸ್ಥಾನ ನೀಡಲು ಕಾಂಗ್ರೆಸ್ ವರಿಷ್ಠರು ಕ್ರಮ ಕೈಗೊಳ್ಳಬೇಕೆಂದರು.

ಪ್ರತಿಭಟನೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷರಾದ ದೊಡ್ಡಯ್ಯ, ಗಂಗರಾಜೇ ಅರಸ್, ಜಿಪಂ ಮಾಜಿ ಸದಸ್ಯ ಜಯರಾಜು, ಪುರಸಭೆ ಸದಸ್ಯರಾದ ಎಂ.ಎನ್.ಶಿವಕುಮಾರ್, ರಾಜಶೇಖರ್, ಪ್ರಮೀಳ, ಮುಖಂಡರಾದ ರಘು, ಸುರೇಶ್, ಶಿವಕುಮಾರ್, ಬಸವರಾಜು, ಕಿರಣ್ ಶಂಕರ್, ಶಿವರಾಜ್, ಅಜೀದ್, ರವಿ, ವೆಂಕಟೇಶ್, ಬಸಪ್ಪ, ನಂಜುಂಡಯ್ಯ ಇತರರಿದ್ದರು.

ಭಾರತ ಇತರೆ ದೇಶಗಳಿಗೆ ಮಾದರಿ: ತೈಲೂರು ವೆಂಕಟಕೃಷ್ಣ



ಮದ್ದೂರು, ಮೇ 27– ನೂರಾರು ವರ್ಷ ಪರಕೀಯರ ಆಳ್ವಿಕೆ ಬಳಿಕವೂ ಭಾರತ ದೇಶದಲ್ಲಿ ದೇಶಪ್ರೇಮದೊಟ್ಟಿಗೆ ಸೇವಾ ಮನೋಭಾವದಂತಹ ಸಂಸ್ಕಾರ ಗುಣ ಹಾಸು ಹೊಕ್ಕಾಗಿದ್ದು, ಇತರ ದೇಶಗಳಿಗೂ ಮಾದರಿಯಾಗಿದೆ ಎಂದು ಸಾಹಿತಿ ತೈಲೂರು ವೆಂಕಟಕೃಷ್ಣ ಅಭಿಪ್ರಾಯಪಟ್ಟರು.

ತಾಲೂಕಿನ ನಿಡಘಟ್ಟ ಗ್ರಾಮದ ವಿಶ್ವಮಾನವ ಕುವೆಂಪು ಪಿರಮಿಡ್ ಸಭಾಂಗಣದಲ್ಲಿ ಭಾರತ್ ವಿಕಾಸ್ ಪರಿಷತ್ ದಕ್ಷಿಣ ಪ್ರಾಂತ (ಉದ್ದೇಶಿತ) ನೂತನ ಪದಾಧಿಕಾರಿಗಳ ದಾಯಿತ್ವ ಸ್ವೀಕಾರ ಮತ್ತು ಕಾರ್ಯಾಗಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಪರ್ಕ, ಸಹಯೋಗ, ಸಂಸ್ಕಾರ, ಸೇವೆ, ಸಮರ್ಪಣಾ ಮನೋಭಾವದೊಡನೆ ದೇಶದ ಹಿತ ಚಿಂತನೆಯೊಟ್ಟಿಗೆ ಪ್ರಜ್ಞಾವಂತಿಕೆ ಮೆರೆಯುವ ಸಹಕಾರ ಮನೋಭಾವ ಹೊಂದಿರುವ ದೇಶವಾಸಿಗಳು ಭಾಷೆ, ನೆಲ, ಜಲ ಮತ್ತಿತರ ಸಂಪನ್ಮೂಲಗಳ ರಕ್ಷಣೆಯೊಟ್ಟಿಗೆ ಸಂಸ್ಕೃತಿಗೂ ಒತ್ತು ನೀಡಿರುವ ದೇಶ ಭಾರತ ಎಂದರು.

ಭಾರತ್ ವಿಕಾಸ್ ಪರಿಷತ್ ದೇಶಾದ್ಯಂತ ಹತ್ತು ಹಲವು ಸಮಾಜಮುಖಿ ಕಾರ್ಯಗಳ ಮೂಲಕ ಹಲವಾರು ಶಾಖೆಗಳಡಿ ತನ್ನದೇ ಆದ ವೈಶಿಷ್ಟ್ಯಗಳನ್ನು ಪಸರಿಸುವ ಮೂಲಕ ಸೇವಾ ಕೈಂಕರ್ಯಗಳಲ್ಲಿ ತೊಡಗಿಸಿಕೊಂಡಿರುವುದಾಗಿ ಶ್ಲಾಘಿಸಿದರು.

ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಭಾವಿಪ ದಕ್ಷಿಣ ಪ್ರಾಂತ ಮಾಜಿ ಪೋಷಕ ಡಾ.ಸಿ.ಎನ್.ಎನ್.ರಾಜು, ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮೈಸೂರು ಪ್ರಾಂತ ಪದಾಧಿಕಾರಿಗಳು ಮುಂದಿನ ಒಂದು ವರ್ಷದೊಳಗೆ ಸಂಸ್ಥೆಯ ನಿಗದಿತ ಕಾರ್ಯಸೂಚಿಯನ್ವಯ ಸೇವಾ ಕೈಂಕರ್ಯ ಪೂರ್ಣಗೊಳಿಸುವಂತೆ ಸೂಚಿಸಿದರು.

ಮೈಸೂರು ಪ್ರಾಂತ ಘಟಕದ ನೂತನ ಅಧ್ಯಕ್ಷ ಆರ್.ನಾಗಭೂಷಣ್ ಮಾತನಾಡಿ, ಇಂದು ಅಸ್ತಿತ್ವಕ್ಕೆ ಬಂದ ಘಟಕದ ಪದಾಧಿಕಾರಿಗಳು ಮುಂದಿನ ದಿನಗಳಲ್ಲಿ ಭಾರತ್ ವಿಕಾಸ್ ಪರಿಷತ್‌ನ ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಕೊಡಗು ಪ್ರಾಂತ್ಯ ವ್ಯಾಪ್ತಿಯಲ್ಲಿ ಉತ್ತಮ ಕಾರ್ಯಕ್ರಮ ಸಂಯೋಜಿಸುವ ಮೂಲಕ ಮೂಲ ಉದ್ದೇಶಗಳಿಗೆ ನೀರೆರೆಯುವ ಭರವಸೆ ನೀಡಿದರು.

ತರಬೇತಿ ಅಧಿವೇಶನ: ಕಾರ್ಯಕ್ರಮದ ವೇಳೆ ಭಾರತ್ ವಿಕಾಸ್ ಪರಿಷತ್ ಅಂಗ ರಚನೆ ಸಂವಿಧಾನ, ಸೇವಾ ಕೊಡುಗೆಗಳು, ಪ್ರಾಂತ ಮತ್ತು ರಾಜ್ಯಮಟ್ಟದ ಪದಾಧಿಕಾರಿಗಳ ಕರ್ತವ್ಯ, ಪರಿಷತ್‌ನ ಪ್ರಮುಖ ವಾರ್ಷಿಕ ಕಾರ್ಯಕ್ರಮಗಳ ಕುರಿತಾಗಿ ಸಂಪನ್ಮೂಲ ವ್ಯಕ್ತಿಗಳಾದ ಕೆ.ಸದಾನಂದ ಶಾಸ್ತ್ರಿ, ಎಚ್.ಬಿ.ಜಗದೀಶ್, ಸಿ.ಎನ್.ಎನ್. ರಾಜು ಉಪನ್ಯಾಸ ನೀಡಿದರು.

ಸಮಾರೋಪ: ಪ್ರಾಂತ ಅಧ್ಯಕ್ಷ ಆರ್.ನಾಗಭೂಷಣ್ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪದ ವೇಳೆ ಭಾವಿಪ ಚಾರಿಟಬಲ್ ಟ್ರಸ್ಟ್ ಬೆಂಗಳೂರು ಶಾಖೆಯ ಸಂಚಾಲಕ ಕೆ. ಸದಾನಂದ ಶಾಸ್ತ್ರಿ, ವಕೀಲ ಬಿ.ಯೋಗೇಶ್, ಪ್ರಾಂತ ಉಪಾಧ್ಯಕ್ಷ ವಸಂತಕುಮಾರ್, ಚನ್ನಪಟ್ಟಣ ವಾಲ್ಮೀಕಿ ಶಾಖೆಯ ಅಂಬರೀಶ್ ಮಾತನಾಡಿದರು.

ಕಾರ್ಯಕ್ರಮದ ವೇಳೆ ಸಂಸ್ಥೆ ಪೋಷಕ ಡಿ.ಪಿ.ಸ್ವಾಮಿ, ಹಿರಿಯ ಪದಾಧಿಕಾರಿಗಳಾದ ಎಚ್.ಬಿ.ಶಿವಲಿಂಗಪ್ಪ, ಟಿ. ಸುರೇಶ್, ಚಂದ್ರು, ಎಸ್.ಸಿ.ಚಿಕ್ಕಣ್ಣ, ನಾರಾಯಣ್, ಮಹಾಲಿಂಗಯ್ಯ, ಶಿವನಂಜಯ್ಯ, ಚನ್ನಸಂದ್ರ ಮಹದೇವು ಇತರರಿದ್ದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ, ಮೇ 27– ನಾಗಮಂಗಲ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) 2023–24ನೇ ಸಾಲಿನ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿದೆ. ಅರ್ಜಿ ಸಲ್ಲಿಸಲು ಜೂ.7 ಕೊನೆ ದಿನ. ಆಸಕ್ತ ಅಭ್ಯರ್ಥಿಗಳು ಇಲಾಖೆ ವೆಬ್‌ಸೈಟ್ https://cite.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ನೇರವಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, (ಐಟಿಐ) ದೇವಲಾಪುರ ಹ್ಯಾಂಡ್‌ಪೋಸ್ಟ್ ನಾಗಮಂಗಲ ಅಥವಾ ದೂ:9900037810 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಬ್ಬ ಹರಿದಿನ, ಜಾತ್ರೆ ನಮ್ಮ ಸಂಸ್ಕೃತಿಯ ಪ್ರತೀಕ

ನೂತನ ಶಾಸಕ ಹೆಚ್.ಟಿ.ಮಂಜು




ಕೆ.ಆರ್.ಪೇಟೆ, ಮೇ 27– ಪೌರಾಣಿಕ ನಾಟಕ, ಹಬ್ಬ ಹರಿದಿನ, ಜಾತ್ರೆ, ರಥೋತ್ಸವಗಳು ನಮ್ಮ ಸಂಸ್ಕೃತಿ, ಪರಂಪರೆಯ ಪ್ರತೀಕವಾಗಿವೆ. ಹಾಗಾಗಿ ನಮ್ಮ ಸಂಸ್ಕೃತಿ ಉಳಿಸಿ, ಬೆಳೆಸಲು ಎಲ್ಲರೂ ಕೈಜೋಡಿಸಬೇಕು ಎಂದು ಶಾಸಕ ಹೆಚ್.ಟಿ ಮಂಜು ತಿಳಿಸಿದರು.

ತಾಲೂಕಿನ ಗುಬ್ಬಹಳ್ಳಿ ಗ್ರಾಮದಲ್ಲಿ ದೇವಿರಮ್ಮನ ಹಬ್ಬದ ಪ್ರಯುಕ್ತ ಗ್ರಾಮಸ್ಥರು ಆಯೋಜಿಸಿದ್ದ 'ಮಹಾತ್ಯಾಗಿ' ನಾಟಕ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜಕ್ಕೆ ಕಲಾವಿದರ ಕೊಡುಗೆ ಅಪಾರ. ಗ್ರಾಮೀಣ ಜನರು ಯಾವುದೇ ತರಬೇತಿ ಇಲ್ಲದೇ ಜನಪದ ಕಲೆಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಆದರೆ ಪ್ರಸ್ತುತ ಯುವಪೀಳಿಗೆ ನಾಡಿನ ಶ್ರೀಮಂತ ಇತಿಹಾಸ ಅರಿಯಲು ಮುಂದಾಗುತ್ತಿಲ್ಲ. ಕಲೆಗಳು ಹೆಚ್ಚು ಪ್ರಚಲಿತದಲ್ಲಿದ್ದು, ಸಾವಿರಾರು ಕಲಾವಿದರು ತಮ್ಮ ಕಲೆ ಪ್ರದರ್ಶಿಸಲು ಪೌರಾಣಿಕ ನಾಟಕ ಒಂದು ಉತ್ತಮ ವೇದಿಕೆ ಎಂದರು.

ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಮಾತನಾಡಿ, ಗ್ರಾಮದ ಯುವಕರು ಪೌರಾಣಿಕ ನಾಟಕ ಹಮ್ಮಿಕೊಂಡಿರುವುದು ಹೆಮ್ಮೆಯ ವಿಚಾರ. ಗುಬ್ಬಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಸ್ಥರು ತಡರಾತ್ರಿಯಲ್ಲೂ ಮಹಾತ್ಯಾಗಿ ನಾಟಕ ವೀಕ್ಷಿಸುವ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.


ಜೆಡಿಎಸ್ ಮುಖಂಡ ವಿ.ಎಸ್.ಧನಂಜಯ್ ಕುಮಾರ್ ಮಾತನಾಡಿದರು. ಈ ವೇಳೆ ಬೀರುವಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರಪ್ಪ, ಗ್ರಾಪಂ ಸದಸ್ಯರಾದ ಲಕ್ಷ್ಮಿ, ಮೋಹನ್, ಮೂರ್ತಿ, ಗುಬ್ಬಹಳ್ಳಿ ಗ್ರಾಮದ ಮುಖಂಡರಾದ ಸ್ವಾಮಿ, ನಂಜುಂಡಪ್ಪ, ರಾಜೇಗೌಡ, ಜಯಸೋಮಪ್ಪ ಅಣ್ಣಯ್ಯ, ಚಂದ್ರಪ್ಪ, ರುದ್ರೇಗೌಡ, ಸುಬ್ಬೇಗೌಡ, ಚನ್ನಶೆಟ್ಟಿ, ದಾಸಶೆಟ್ಟಿ, ರಾಮಣ್ಣ, ಕಾಳೇಗೌಡ, ನಾಗಣ್ಣ, ರವಿ, ಶಿವಶಂಕರ್, ಚನ್ನಪ್ಪಾಜಿ, ಮಹಾಲಿಂಗಪ್ಪ, ಉಪನ್ಯಾಸಕ ಡಾ.ಗಂಗಾಧರಶೆಟ್ಟಿ, ಬೀರುವಳ್ಳಿ ಪಿಎಸಿಎಸ್ ಅಧ್ಯಕ್ಷ ಈರೇಗೌಡ ಸೇರಿದಂತೆ ನೂರಾರು ಗಣ್ಯರು ಉಪಸ್ಥಿತರಿದ್ದರು.

ನೂತನ ಸಚಿವರ ಪ್ರಮಾಣ ವಚನ


ರಹೀಂ ಖಾನ್


ಶರಣ ಬಸಪ್ಪ ದರ್ಶನಾಪುರ್


ಆರ್.ಬಿ. ತಿಮ್ಮಾಪುರ


ಶಿವಾನಂದ್ ಪಾಟೀಲ್


ಡಿ. ಸುಧಾಕರ್


ಎಸ್.ಎನ್. ಬೋಸರಾಜು



ಸಂತೋಷ್ ಲಾಡ್


ಮಧು ಬಂಗಾರಪ್ಪ


ಭೈರತಿ ಸುರೇಶ್


ಬಿ. ನಾಗೇಂದ್ರ


ಡಾ.ಎಂ.ಸಿ. ಸುಧಾಕರ್


ಹೆಚ್.ಕೆ. ಪಾಟೀಲ್


ಶರಣ ಪ್ರಕಾಶ್ ಪಾಟೀಲ್


ಶಿವರಾಜ್ ತಂಗಡಗಿ


ಲಕ್ಷ್ಮಿ ಹೆಬ್ಬಾಳ್ಕರ್


ಮಂಕಾಳ ವೈದ್ಯ


ಎಸ್.ಎಸ್. ಮಲ್ಲಿಕಾರ್ಜುನ್


ಕೃಷ್ಣ ಭೈರೇಗೌಡ


ಈಶ್ವರ್ ಖಂಡ್ರೆ


ದಿನೇಶ್ ಗುಂಡೂರಾವ್


ಕೆ.ಎನ್. ರಾಜಣ್ಣ

ಒಂದನೇ ಪುಟದಿಂದ

ಸಿದ್ದರಾಮಯ್ಯ ಸಂಪುಟ ಭರ್ತಿ

ತನ್ವೀರ್ ಸೇಠ್, ಪಕ್ಷದ ಹಿರಿಯ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಬಸವರಾಜ ರಾಯರೆಡ್ಡಿ, ಲಕ್ಷ್ಮಣ್ ಸವದಿ, ಪ್ರಕಾಶ್ ಹುಕ್ಕೇರಿ, ಟಿ.ಬಿ. ಜಯಚಂದ್ರ, ಅಜಯ್‌ಸಿಂಗ್, ವಿನಯ್ ಕುಲಕರ್ಣಿ, ಎನ್.ಎ. ಹ್ಯಾರಿಸ್ ಸೇರಿದಂತೆ ಕೆಲವರಿಗೆ ಮಂತ್ರಿಯಾಗುವ ಅವಕಾಶ ತಪ್ಪಿದೆ. ಸಚಿವರಾಗಿ ಸಂಪುಟ ಸೇರಿದವರ ಕುಟುಂಬ ಸದಸ್ಯರು, ಅಭಿಮಾನಿಗಳು, ಕಾರ್ಯಕರ್ತರು, ಮುಖಂಡರು ಈ ವೇಳೆ ಹಾಜರಿದ್ದರು. ವೇದಿಕೆಯ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಉಪಸ್ಥಿತರಿದ್ದರು.

ಬಿ.ಕೆ.ಹರಿಪ್ರಸಾದ್ ಅಸಮಾಧಾನ : ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿದ್ದ ಕಾಲದಲ್ಲಿ ವಿಧಾನಪರಿಷತ್ತಿನ ಪ್ರತಿಪಕ್ಷ ನಾಯಕರಾಗಿ ತಾವು ದಿಟ್ಟವಾಗಿ ಕಾರ್ಯ ನಿರ್ವಹಿಸಿದ್ದು ರಾಷ್ಟ್ರಮಟ್ಟದಲ್ಲಿ ಪಕ್ಷ ವಹಿಸಿದ ಗುರುತರ ಜವಾಬ್ದಾರಿಗಳನ್ನು ನಾನು ನಿರ್ವಹಿಸಿದ್ದೇನೆ. ಇದನ್ನು ಗಮನದಲ್ಲಿಟ್ಟುಕೊಂಡು ತಮಗೆ ಮಂತ್ರಿ ಸ್ಥಾನ ನೀಡಬೇಕಿತ್ತು ಎಂದು ಬಿ.ಕೆ.ಹರಿಪ್ರಸಾದ್ ವರಿಷ್ಠರ ಮುಂದೆ ಅಸಮಾಧಾನ ತೋರ್ಪಡಿಸಿಕೊಂಡಿದ್ದಾರೆ.

ಪಕ್ಷದಲ್ಲಿ ನಾನು ಹಿರಿಯ,ಸಂಪುಟಕ್ಕೆ ಅನುಭವಿಗಳ ಅಗತ್ಯವಿಲ್ಲ ಎಂದರೆ ನಾನು ವಿಧಾನಪರಿಷತ್ತಿನ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟು ಸಾಮಾನ್ಯ ಕಾರ್ಯಕರ್ತನಾಗಿರುತ್ತೇನೆ ಎಂದು ಹರಿಪ್ರಸಾದ್ ಅವರು ಪಕ್ಷದ ನಾಯಕರಿಗೆ ವಿವರಿಸಿದ್ದು, ಅವರನ್ನು ಸಮಾಧಾನಿಸುವ ಕೆಲಸ ಹೈಕಮಾಂಡ್ ನಾಯಕರಿಂದ ನಡೆದಿದೆ. ಇದೇ ರೀತಿ ಅನುಭವಿ ನಾಯಕರಾದ ತನ್ವೀರ್ ಸೇಠ್ ಅವರಿಗೆ ಮಂತ್ರಿ ಸ್ಥಾನ ಸಿಗದೇ ಇರುವುದನ್ನು ವಿರೋಧಿಸಿ ಮೈಸೂರಿನಲ್ಲಿ ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ.

ಸಂಪುಟದೊಂದಿಗೆ ಆಡಳಿತಕ್ಕೆ ಹೊಸ ರೂಪ

ಮುಖಗಳ ಸಮ್ಮಿಶ್ರಣವಾಗಿದೆ. ಮೊದಲ ಬಾರಿ ಗೆದ್ದವರನ್ನು ಮಂತ್ರಿ ಮಾಡಿಲ್ಲ ಎಂದರು. ನಾವು ಕೊಟ್ಟಿರುವ ಭರವಸೆ ಈಡೇರಿಸಬೇಕು. ಜನ ಹೊಸ ಬದಲಾವಣೆ ಬಯಸಿದ್ದಾರೆ. ಅದರಿಂದ ಆಡಳಿತಕ್ಕೆ ಹೊಸ ರೂಪ ಕೊಡುವ ದೃಷ್ಟಿಯಿಂದ ಈ ಸಂಪುಟ ರಚಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ವಿರೋಧ ಪಕ್ಷಗಳು ತಾವು ಕೊಟ್ಟ ವಚನ ಈಡೇರಿಸಿಲ್ಲ. ನಾವು ಹಿಂದೆಯೂ ನಮ್ಮ ವಚನ ಈಡೇರಿಸಿದ್ದೇವೆ. ಈಗಲೂ ಈಡೇರಿಸುತ್ತೇವೆ. ಐದು ಗ್ಯಾರಂಟಿಗಳ ಕುರಿತು ಮುಂದಿನ ಸಚಿವ ಸಂಪುಟದಲ್ಲಿ ವಿವರಗಳನ್ನು ಮಂಡಿಸಲು ಸೂಚಿಸಲಾಗಿದೆ. ಈ ಕುರಿತು ಚರ್ಚಿಸಿ ಅನುಮೋದನೆ ನೀಡಿ ಶೀಘ್ರವೇ ಅವುಗಳನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಕೊಡಗು, ಹಾವೇರಿ, ಹಾಸನ, ಚಿಕ್ಕಮಗಳೂರು ಮತ್ತಿತರ ಜಿಲ್ಲೆಗಳಿಗೆ ಪ್ರಾತಿನಿಧ್ಯ ಲಭಿಸಿಲ್ಲ. ಕೆಲವು ಮಾನದಂಡಗಳನ್ನು ಅನುಸರಿಸುವಾಗ ಹಲವು ಜಿಲ್ಲೆಗಳಿಗೆ ಪ್ರಾತಿನಿಧ್ಯ ದೊರೆತಿಲ್ಲ. ಉದಾಹರಣೆಗೆ ಕೊಡಗು ಜಿಲ್ಲೆಯಲ್ಲಿ ಇಬ್ಬರೂ ಮೊದಲ ಬಾರಿ ಶಾಸಕರಾಗಿದ್ದಾರೆ. ಹಾಗಾಗಿ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡಲು ಸಾಧ್ಯವಾಗಿಲ್ಲ ಎಂದು ನುಡಿದರು. ಪುಟ್ಟರಂಗಶೆಟ್ಟಿ ಅವರು ವಿಧಾನ ಸಭೆಯ ಉಪಾಧ್ಯಕ್ಷ ಹುದ್ದೆಯನ್ನು ಒಪ್ಪಿಕೊಂಡಿಲ್ಲ ಎಂಬ ಕುರಿತ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು, ಅಸಮಾಧಾನ ಯಾವಾಗಲೂ ಇರುತ್ತದೆ. ಅಸಮಾಧಾನದಲ್ಲಿ ಸಮಾಧಾನವಿರುತ್ತದೆ. ಅವರೊಂದಿಗೆ ನಾನು ನಿನ್ನೆ ರಾತ್ರಿಯೇ ಮಾತನಾಡಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಆಗಲು ಒಂದು ಹೆಜ್ಜೆ ಬಾಕಿ

ಸಮಯ ತೆಗೆದುಕೊಳ್ಳುತ್ತಿದ್ದಾರೆ. ಅದಾದ ನಂತರ ಖಂಡಿತವಾಗಿಯೂ ಗ್ಯಾರಂಟಿಗಳು ಜಾರಿಯಾಗುತ್ತವೆ ಎಂದರು. ಲೋಕಸಭೆ ಚುನಾವಣೆ ನಂತರ ಸರ್ಕಾರ ಪತನವಾಗುತ್ತದೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕುಮಾರಸ್ವಾಮಿ ಹಗಲುಗನಸು ಕಾಣುತ್ತಿದ್ದಾರೆ. ಇಷ್ಟು ಅವರಿಗೆ ರಾತ್ರಿ–ಹಗಲು ನಿದ್ದೆ ಬರುತ್ತಿರಲಿಲ್ಲ. ಈಗ ಹಗಲಲ್ಲಿ ನಿದ್ದೆ ಮಾಡಿ ಕನಸು ಕಾಣುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಸ್ವಂತ ಮನೆಯಲ್ಲಿರುವವನು...

ಹಲವಾರು ಆಯಾಮ ಗಳಲ್ಲಿದೆ. ಆದರೆ ಈಗ ಹಲವಾರು ರೀತಿಗಳಲ್ಲಿ ಕೆಲಸಗಳು ನಡೆಯುತ್ತಿದೆ. ಕಾಲ ಬಂದಾಗ ಯಾವುದೇ ಸಂಕೋಚವಿಲ್ಲದೇ ಎಲ್ಲವನ್ನೂ ಹೇಳುತ್ತೇನೆ ಎಂದರು. ನನ್ನನ್ನು ಮಂತ್ರಿ ಮಾಡಲಾಗುತ್ತದೆ ಎಂಬುದು ವಾಟ್ಸಾಪ್ ಮತ್ತು ಟೆಲಿವಿಷನ್ ಯೂನಿವರ್ಸಿಟಿಯಿಂದ ಬಂದ ವಿಷಯ. ಅದೇ ರೀತಿ ನಾನು ರಾಜೀನಾಮೆ ಮಾಡುತ್ತಿದ್ದೇನೆ ಎಂಬುದು ಕೂಡ ಅದೇ ಯೂನಿವರ್ಸಿಟಿಗಳಿಂದ ಬಂದ ವಿಷಯಗಳಾಗಿವೆ. ನಮ್ಮ ಪಕ್ಷದ ಪರಮೋಚ್ಚ ನಾಯಕಿ ಸೋನಿಯಾ ಗಾಂಧಿಯವರು ನನಗೆ ವಿಧಾನಪರಿಷತ್ ಸದಸ್ಯತ್ವದ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಅದನ್ನು ನಾನು ನಿಭಾಯಿಸುತ್ತಿದ್ದೇನೆ. ಸಚಿವ ಸ್ಥಾನ ಇಲ್ಲದಿದ್ದರೂ ಪರಿಷತ್‌ನಲ್ಲಿ ಸಾಮಾನ್ಯ ಸದಸ್ಯನಾಗಿರುತ್ತೇನೆ. ಒಂದು ವೇಳೆ ನಾನು ರಾಜೀನಾಮೆ ನೀಡು ವುದಾಗಿದ್ದರೆ ಅವರಿಗೆ ನೀಡಬೇಕಿತ್ತು. ಅಧಿಕೃತವಾಗಿ ರಾಜೀನಾಮೆ ಸಲ್ಲಿಸಬೇಕಾದರೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸಲ್ಲಿಸಬೇಕಿತ್ತು. ಅದ್ಯಾವುದೂ ಆಗಿಲ್ಲ. ಹಾಗಿರುವಾಗ ವಾಟ್ಸಾಪ್ ಮತ್ತು ಟೆಲಿವಿಷನ್ ಯೂನಿವರ್ಸಿಟಿಗಳಲ್ಲಿ ಈ ವಿಷಯ ಹೇಗೆ ಬಂತೋ ಗೊತ್ತಿಲ್ಲ ಎಂದರು. ವೀರಪ್ಪ ಮೊಯ್ಲಿಯವರ ಮಾತಿಗೆ ನಾನೇನೂ ಹೇಳುವುದಿಲ್ಲ. ಅವರು ಜ್ಞಾನ ಭಂಡಾರ ಇರುವಂತಹವರು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಂದು ನೂತನ ಸಂಸತ್ ಭವನ ಉದ್ಘಾಟನೆ



ರಾತ್ರಿ ವಾಸ್ತು ಹೋಮ ನಡೆಯಿತು. ಸೆಂಗೋಲ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ತಮಿಳುನಾಡು ಪುರೋಹಿತರು ಹಸ್ತಾಂತರಿಸಿದ್ದಾರೆ. ಮಧ್ಯಾಹ್ನ 12.00 ಗಂಟೆಗೆ ಎರಡನೇ ಹಂತದ ಕಾರ್ಯಕ್ರಮ ನಡೆಯಲಿದೆ. ಆರಂಭದಲ್ಲಿ ರಾಜ್ಯಸಭೆ ಡೆಪ್ಯುಟಿ ಛೇರ್ಮನ್ ಹರಿವಂಶ್ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರ ಸಂದೇಶವನ್ನು ಓದಲಿದ್ದಾರೆ. ನಂತರ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಲಿಖಿತ ಸಂದೇಶವನ್ನು ಓದಲಾಗುವುದು. ನಂತರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಭಾಷಣ ಮಾಡಲಿದ್ದಾರೆ. ಮಧ್ಯಾಹ್ನ 1 ಗಂಟೆ ವೇಳೆಗೆ ಪ್ರಧಾನಮಂತ್ರಿ ನರೇಂದ್ರ ಈ ಸಮಾರಂಭದ ಐತಿಹಾಸಿಕ ಸಾಕ್ಷಿಯಾಗಿ ಅಂಚೆ ಚೀಟಿ, ನಾಣ್ಯವನ್ನು ಬಿಡುಗಡೆ ಮಾಡಲಿದ್ದಾರೆ. ನಂತರ ಅವರು ದೇಶವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ಕಟ್ಟಡ ನಿರ್ಮಾಣದಲ್ಲಿ ಭಾಗಿಯಾಗಿದ್ದವರಿಗೆ ಸನ್ಮಾನ ಮಾಡುವ ನಿರೀಕ್ಷೆಯೂ ಇದೆ. ಇದೇ ಸಂದರ್ಭದಲ್ಲಿ ಎರಡು ಸಾಕ್ಷ್ಯಚಿತ್ರಗಳ ಪ್ರದರ್ಶನ ಕೂಡ ಏರ್ಪಡಿಸಲಾಗಿದೆ.

ಸಂಸತ್ ಭವನದ ಮುಖ್ಯ ವಿನ್ಯಾಸಕ ಬಿಮಲ್ ಪಟೇಲ್, ಉದ್ಯಮಿ ರತನ್ ಟಾಟಾ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಸಿನಿರಂಗದ ತಾರೆಗಳು, ಕ್ರೀಡಾಪಟುಗಳು, ಗಣ್ಯರು ಹಾಜರಿರಲಿದ್ದಾರೆ. ಆದರೆ ಕಾರ್ಯಕ್ರಮವನ್ನು 20 ರಾಜಕೀಯ ಪಕ್ಷಗಳು ಬಹಿಷ್ಕರಿಸಿವೆ. 25 ಪಕ್ಷಗಳು ಬೆಂಬಲಿಸಿವೆ.

ಹೇಗಿದೆ ಭವನ: ಪ್ರಧಾನಿಯಿಂದ ಉದ್ಘಾಟನೆಯಾಗಲಿರುವ ಭಾರತದ ನೂತನ ಸಂಸತ್ ಭವನ ವಾಸ್ತುಶಿಲ್ಪದ ಅದ್ಭುತ ಕಲ್ಪನೆಯಾಗಿದೆ, ರಾಷ್ಟ್ರದ ಪ್ರಗತಿಯ ಹೆಮ್ಮೆಯ ಪ್ರತೀಕವಾಗಿದೆ. 65 ಸಾವಿರ ಚದರ ಮೀಟರ್‌ಗಳ ವಿಸ್ತೀರ್ಣದಲ್ಲಿ ತಲೆ ಎತ್ತಿರುವ ಬೃಹತ್ ಕಟ್ಟಡದಲ್ಲಿ ಪ್ರಾದೇಶಿಕ ಕಲೆ, ಕಲಾಕೃತಿಗಳು, ಸಾಂಸ್ಕೃತಿಕ ವೈಭವಗಳೊಂದಿಗೆ ಆಧುನಿಕ ಭಾರತವನ್ನು ವ್ಯಾಖ್ಯಾನಿಸುವ ಹಾಗೂ ವೈವಿಧ್ಯತೆಯನ್ನು ಗೌರವಿಸುವ ವಿನ್ಯಾಸವನ್ನು ಅಳವಡಿಸಲಾಗಿದೆ. ಲೋಕಸಭೆಯಲ್ಲಿ ಮೂರು ಹಂತದಲ್ಲಿ 888 ಆಸನಗಳ ಸೌಲಭ್ಯ ಕಲ್ಪಿಸಿದ್ದು, ಒಂದರಿಂದ ಮತ್ತೊಂದು ಆಸನದ ನಡುವೆ ಸಾಕಷ್ಟು ಅಂತರ ಕಲ್ಪಿಸಲಾಗಿದೆ. ಒಟ್ಟಾರೆ 1200ಕ್ಕೂ ಹೆಚ್ಚು ಆಸನ ವ್ಯವಸ್ಥೆ ಮಾಡಬಹುದಾಗಿದೆ. ರಾಷ್ಟ್ರಪಕ್ಷಿ ನವಿಲಿನಿಂದ ಸ್ಫೂರ್ತಿಪಡೆದು, ಈ ಸಭಾಂಗಣ ರೂಪಿಸಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ರಾಜ್ಯಸಭೆಯ ಸಭಾಂಗಣವಿದ್ದು, ಇದನ್ನು ಕಮಲದ ಆಕಾರದಲ್ಲಿ ವಿನ್ಯಾಸ ಮಾಡಲಾಗಿದೆ. ಈ ಸಭಾಂಗಣದಲ್ಲಿ 384 ಆಸನಗಳ ವ್ಯವಸ್ಥೆ ಮಾಡಲಾಗಿದೆ. ಸಮಿತಿ ಕೊಠಡಿಗಳಲ್ಲಿ ಧ್ವನಿ ಮತ್ತು ದೃಶ್ಯ ವ್ಯವಸ್ಥೆಗಳನ್ನು ಕಲ್ಪಿಸಿದ್ದು, ಚರ್ಚೆ ಹಾಗೂ ಸಮಾಲೋಚನೆಗಳಿಗೆ ಇದರಿಂದ ಅನುಕೂಲವಾಗಲಿದೆ. ಅತ್ಯಾಧುನಿಕ ಸೌಲಭ್ಯವುಳ್ಳ ಸಂಸತ್ ಗ್ರಂಥಾಲಯವನ್ನು ನಿರ್ಮಿಸಿದ್ದು, ಸಂಸದರು ಹಾಗೂ ಸಂಶೋಧಕರಿಗೆ ಸಾಕಷ್ಟು ಮಾಹಿತಿ ಮತ್ತು ಇತರ ಸಾಹಿತ್ಯವನ್ನು ಒದಗಿಸಲಿದೆ. ಪರಿಸರಸ್ನೇಹಿ ವಾತಾವರಣಕ್ಕೆ ಕಟ್ಟಡದಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ನರೇಂದ್ರ ಮೋದಿ ಅವರು ಡಿಸೆಂಬರ್ 2020ರಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದ್ದರು.

ರಾಷ್ಟ್ರ ರಾಜಧಾನಿಯಲ್ಲಿ ಬಿಗಿ ಭದ್ರತೆ: ಭಾನುವಾರ ನೂತನ ಸಂಸತ್ ಭವನ ಉದ್ಘಾಟನಾ ಸಮಾರಂಭದ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಪೊಲೀಸರು ಬಿಗಿ ಭದ್ರತೆ ಒದಗಿಸಿದ್ದಾರೆ. ನೂತನ ಕಟ್ಟಡದ ಸುತ್ತಲೂ ಸುಮಾರು 100ಕ್ಕೂ ಪೊಲೀಸರನ್ನು ನಿಯೋಜಿಸಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತಷ್ಟು ಪೊಲೀಸರನ್ನು ನಿಯೋಜಿಸಲಾಗುವುದು ಎಂದು ದೆಹಲಿ ಪೊಲೀಸ್ ವಿಶೇಷ ಸಿಪಿ ದೀಪೇಂದರ್ ಪಾಠಕ್ ತಿಳಿಸಿದ್ದಾರೆ. ಉದ್ಘಾಟನೆ ಕಾರ್ಯಕ್ರಮ ಮತ್ತು ಕಾನೂನು ಸುವ್ಯವಸ್ಥೆಯತ್ತ ಸಂಪೂರ್ಣ ಗಮನಹರಿಸಲಾಗಿದೆ. ಕಾರ್ಯಕ್ರಮ ದಿನದಂದು ಕೆಲವು ಕಿಡಿಗೇಡಿಗಳು ಕ್ಯಾಂಪಸ್ ಗೋಡೆಗಳ ಮೇಲೆ "ರಾಷ್ಟ್ರ ವಿರೋಧಿ ಮತ್ತು ಪ್ರಧಾನಿ ವಿರೋಧಿ" ಘೋಷಣೆ ಅಂಟಿಸಬಹುದು ಎಂಬ ಮಾಹಿತಿ ಹಿನ್ನೆಲೆಯಲ್ಲಿ ನೂತನ ಸಂಸತ್ ಭವನದ ಸುತ್ತ 24 ಗಂಟೆಯೂ ಬಿಗಿ ಭದ್ರತೆಯನ್ನು ನಿಯೋಜಿಸಲಾಗಿದೆ. ಸಹಾಯಕ ಪೊಲೀಸ್ ಕಮಿಷನರ್ ಶ್ರೇಣಿಯ ಅಧಿಕಾರಿಗಳು ಸಿಸಿಟಿವಿ ಕಣ್ಗಾವಲು ಮೂಲಕ ಇಡೀ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ದೀಪೇಂದರ್ ಪಾಠಕ್ ತಿಳಿಸಿದ್ದಾರೆ.



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಉದ್ಯಮಿ ಹಾಗೂ ಚಿತ್ರದುರ್ಗದ ನೂತನ ಶಾಸಕ ವೀರೇಂದ್ರ ಪಪ್ಪಿಯವರು ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.

ಎಸ್‌ಡಿಎಂ ಕಾಲೇಜಿನಲ್ಲಿ ಅಂತರ ಕಾಲೇಜು ಯುವಕವಿ ಗೋಷ್ಠಿ



ಮೈಸೂರು, ಮೇ 27– ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಐಕ್ಯೂಎಸಿ ಕನ್ನಡ ವಿಭಾಗ, ನುಡಿರತ್ನ ಕನ್ನಡ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಸಹಯೋಗದಲ್ಲಿ ಅಂತರ ಕಾಲೇಜು ಯುವಕವಿ ಗೋಷ್ಠಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕೆಎಸ್ ಶಿವರಾಮು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡ ಭಾಷೆಯನ್ನು ಇಂದಿನ ಯುವ ಜನತೆ ಜವಾಬ್ದಾರಿಯಿಂದ ಸಂರಕ್ಷಿಸಲು ಮುಂದಾದರೆ ಕನ್ನಡ ಭಾಷೆ ಭವಿಷ್ಯದಲ್ಲಿ ಸದೃಢ ಭಾಷೆಯಾಗಲು ಸಹಕಾರಿಯಾಗುತ್ತದೆ. ಕವಿತೆಗಳು ಕೇವಲ ಸೌಂದರ್ಯ ವರ್ಣನೆ, ಭ್ರಮಾಲೋಕವಷ್ಟೇ ಆಗಿರದೆ ರೈತರ ಸಂಕಷ್ಟಗಳು, ಜಾತಿಯತೆಯ ವಿರೋಧ ಮನಸ್ಥಿತಿ, ಮೌಢ್ಯ, ಕಂದಾಚಾರದ ವಿರುದ್ಧದ ಅರಿವನ್ನು ಮೂಡಿಸುತ್ತವೆ. ಕುವೆಂಪು, ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಜಿಎಸ್ ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗ, ಮೊದಲಾದ ಕವಿಗಳ ಕವಿತೆಗಳು ಕೇವಲ ಭಾವನೆಗಳನ್ನು ಅಭಿವ್ಯಕ್ತಿಸುವುದಲ್ಲದೆ ಇಂದಿನ ಕವಿಗಳಿಗೆ ಪ್ರೇರಣೆಯಾಗಿವೆ. ಇಂತಹ ಕವಿಗೋಷ್ಠಿ ಕಾರ್ಯಕ್ರಮದಿಂದ ಯುವ ಮನಸ್ಸುಗಳ ಭಾವನೆಗೆ ವೇದಿಕೆ ಕಲ್ಪಿಸಿದಂತಾಗುತ್ತದೆ. ಈ ಹಿನ್ನಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಾವ್ಯಶ್ರೇಷ್ಠತೆ ಎತ್ತಿ ಹಿಡಿಯಲಿದೆ ಎಂದರು.

ನೀಗು ರಮೇಶ್ ಮಾತನಾಡಿ, ಕಾವ್ಯ ಆಸ್ವಾದನೆಯ ಮನಸ್ಸು ಇಂದಿನ ಕವಿಗಳಿಗೆ ಬಹಳ ಮುಖ್ಯ. ಭೌತಿಕ ಪ್ರಗತಿ ಗಿಂತ ಬೌದ್ಧಿಕ ಪ್ರಗತಿ ಕಾಣುವುದು ಇಂದು ಅನಿವಾರ್ಯವಾಗಿದೆ. ಆದರ್ಶಗಳನ್ನು ನೀಡಿದ ಮಹನೀಯರನ್ನು ಇಂದು ಪ್ರಶ್ನೆಗೆ ಒಳಪಡಿಸುತ್ತಿರುವುದು ಆತಂಕವೇ ಸರಿ. ಈ ಮನಸ್ಥಿತಿಯನ್ನು ತೊಡೆದುಹಾಕಿ ಜೀವಪರವಾದ ಸಾಮಾಜಿಕ ಸ್ವಾಸ್ಥ್ಯವನ್ನು ಎತ್ತಿ ಹಿಡಿದು, ಬಸವ, ಕನಕ, ಗಾಂಧಿ, ಅಂಬೇಡ್ಕರ್ ಮೊದಲಾದ ಮಹನೀಯರ ಆದರ್ಶಗಳನ್ನು ಅನುಸರಿಸುವ ಮನಸನ್ನು ಇಂದು ಕವಿತೆಗಳಲ್ಲಿ ಅಭಿವ್ಯಕ್ತಿಸಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಕಾಲೇಜು ಪ್ರಿನ್ಸಿಪಾಲ್ ಸಾಯಿನಾಥ ಮಲ್ಲಿಗೆಮಾಡು, ಉಪ ಪ್ರಾಂಶುಪಾಲರಾದ ಪ್ರೊ‌ಎನ್.ಭಾರತಿ, ಐಕ್ಯುಎಸಿ ಘಟಕದ ಸಂಯೋಜಕರಾದ ಪ್ರೊ ಕೆ.ಎಸ್.ಸುಕೃತ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ವಿನೋದ ಉಪಸ್ಥಿತರಿದ್ದರು. ಕವಿಗೋಷ್ಠಿಯಲ್ಲಿ ವಿಶ್ವವಿದ್ಯಾಲಯ ವ್ಯಾಪ್ತಿಯ ವಿವಿಧ ಕಾಲೇಜುಗಳ 35 ಯುವ ಕವಿಗಳು ಕವಿತೆ ವಾಚನ ನೆರವೇರಿಸಿದರು. ಕುಮಾರಿ ಅಕ್ಷತ ಮರಿಮಲ್ಲಪ್ಪ ಮಹಿಳಾ ಕಾಲೇಜು, ಕುಮಾರಿ ಅಮೃತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಣಿಗೆರೆ ಸನತ್ ಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುವೆಂಪು ನಗರ ಮೈಸೂರು ಇವರಿಗೆ ಅತ್ಯುತ್ತಮ ಕವಿತೆ ಪುಸ್ತಕ ಬಹುಮಾನ ವಿತರಿಸಲಾಯಿತು.

ವಿದ್ಯಾರ್ಥಿಗಳು ವಿದ್ಯೆ ಜೊತೆ ವಿನಯ, ಶಿಸ್ತು ಅಳವಡಿಸಿಕೊಂಡರೆ ಸಾಧನೆ ಸಾಧ್ಯ

ಮೈಸೂರು, ಮೇ 27(ಎಂಟಿವೈ)– ವಿದ್ಯಾರ್ಥಿಗಳು ವಿದ್ಯೆಯೊಂದಿಗೆ ವಿನಯ ಹಾಗೂ ಶಿಸ್ತನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಸಲಹೆ ನೀಡಿದ್ದಾರೆ.

ಮೈಸೂರು ತಾಲೂಕಿನ ತಗಡೂರು ಬಳಿಯಿರುವ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 8ರಿಂದ 10ನೇ ತರಗತಿಯ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ವ್ಯಕ್ತಿತ್ವ ವಿಕಸನದ ಬುನಾದಿ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.



ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಶಿಬಿರ ಯಶಸ್ವಿಯಾಗಿದೆ. 33 ದಿನ ನಡೆದ ಈ ತರಬೇತಿ ಶಿಬಿರದಲ್ಲಿ ಸಾಕಷ್ಟು ಮಹತ್ತರ ವಿಷಯವನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗಿದೆ. ಈ ಶಿಬಿರದಿಂದ ತರಬೇತಿ ಪಡೆದ ವಿದ್ಯಾರ್ಥಿಗಳಲ್ಲಿ ಬದಲಾವಣೆ ಕಂಡುಬರುತ್ತಿದೆ. ಇದೊಂದು ಶಿಸ್ತಿನ ತರಬೇತಿ ಕಾರ್ಯಕ್ರಮವಾಗಿದ್ದು, ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ಸೃಷ್ಟಿಸಲು ಸಹಕಾರಿಯಾಗಿದೆ ಎಂದರು. ಯಾವುದೇ ಸಂದರ್ಭದಲ್ಲಾದರೂ ವಿದ್ಯಾರ್ಥಿಗಳು ಒಮ್ಮೆ ಮಾಡಿದ ತಪ್ಪನ್ನು ಪುನರಾವರ್ತಿಸಬಾರದು. ದೇಶದ ಭವಿಷ್ಯ ಯುವಕರ ಮೇಲೆ ನಿಂತಿದ್ದು, ನೀವೆಲ್ಲರೂ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕು. ಸರ್ಕಾರ ನೀಡುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಉತ್ತಮ ಶಿಕ್ಷಣ ಪಡೆಯಬೇಕು. ಆ ಮೂಲಕ ಸಾಧನೆ ಮಾಡಬೇಕು. ಯಾವುದೇ ಕ್ಷೇತ್ರದಲ್ಲಾದರೂ ಸರಿ ಸಾಧನೆ ಮಾಡಬೇಕಾದರೆ, ಶಿಸ್ತು, ಸಹನೆ ಹಾಗೂ ಕಠಿಣ ಪರಿಶ್ರಮ ಮುಖ್ಯ ಪಾತ್ರವಹಿಸುತ್ತದೆ. ವಿದ್ಯಾರ್ಥಿ ದಿಸೆಯಲ್ಲಿಯೇ ಶಿಸ್ತಿನೊಂದಿಗೆ ಶ್ರದ್ಧೆ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ನಂಜನಗೂಡು ತಾಲೂಕು ಕಲ್ಯಾಣಾಧಿಕಾರಿ ಸ್ವರ್ಣಲತಾ, ವಿಸ್ತರಣಾಧಿಕಾರಿ ಸುಕನ್ಯಾ, ಕಲ್ಯಾಣಾಧಿಕಾರಿಗಳಾದ ಚಂದ್ರಕಲಾ, ಮೇಘ, ಶಶಿಕಲಾ, ಹರೀಶ್, ವಸತಿ ನಿಲಯದ ಪ್ರಾಂಶುಪಾಲರಾದ ವಸಂತ, ನಿಲಯಪಾಲಕರಾದ ರಿಜ್ವಾನ್, ವೀರಬಸಪ್ಪ, ರಮ್ಯ, ಜಗದೀಶ್ ಕೋರಿ, ಶಿವಮೂರ್ತಿ, ಮಹಾದೇವ್ ಇನ್ನಿತರರು ಉಪಸ್ಥಿತರಿದ್ದರು.

ಪಿಎಚ್.ಡಿ ಪದವೀಧರರು

ಮೈಸೂರು, ಮೇ 27– ಮೈಸೂರಿನ



ಕುವೆಂಪುನಗರದ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್, ಓಂಕಾರ್ ಮಲ್ ಸೋಮಾನಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಆರ್.ವಿ. ಉಷಾ ಅವರು ಪ್ರೊ ಜಗನ್ನಾಥ್ ಕೆ. ಡಾಂಗೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಕಂಪ್ಯಾರೇಟಿವ್ ಸ್ಟಡಿ ಆಫ್ ಸ್ಟೇಟ್, ಸಿಬಿಎಸ್‌ಸಿ, ಐಸಿಎಸ್‌ಸಿ ಕರಿಕುಲ ಅಂಡ್ ಇಟ್ಸ್ ರಿಲೇಟೇಡ್ ಫ್ಯಾಕ್ಟರ್ಸ್ ಆಫ್ ಸೆಕೆಂಡರಿ ಸ್ಕೂಲ್ ಎಜುಕೇಷನ್ ಮಹಾಪ್ರಬಂಧವನ್ನು ಕುವೆಂಪು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.



ನೇಮಕ

ಮೈಸೂರು, ಮೇ 27–ಮೈಸೂರು ನಗರ (ಜಿಲ್ಲಾ) ಜನತಾದಳದ ಉಪಾಧ್ಯಕ್ಷರನ್ನಾಗಿ ಶಾರದಾದೇವಿ ನಗರದ ನಿವಾಸಿ ಸಿ.ಆರ್.ಸುಂದರರಾಜ ಅವರನ್ನು ನೇಮಕ ಮಾಡಲಾಗಿದೆ.

ಅಮೃತ ವಿಶ್ವವಿದ್ಯಾಪೀಠಂನಲ್ಲಿ ಸಂಪನ್ನಗೊಂಡ 'ಸದ್ಗಮಯ 2023' ಸ್ಪರ್ಧಾ ಉತ್ಸವ





ಮೈಸೂರು, ಮೇ 27– ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನಲ್ಲಿ ಕಳೆದ ಎರಡು ದಿನಗಳಿಂದ ನಡೆಯುತ್ತಿರುವ 'ಸದ್ಗಮಯ–2023' ರಾಜ್ಯಮಟ್ಟದ ಬಹುಮುಖಿ ಸ್ಪರ್ಧಾ ಉತ್ಸವ ಸಂಪನ್ನಗೊಂಡಿವೆ.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಎನ್. ವಿಜಯ್‌ಕುಮಾರ್, ವಿಜೇತರಿಗೆ ಪ್ರಶಸ್ತಿಗಳನ್ನು ವಿತರಿಸಿದರು. 'ಅಮೃತಂ ಸದ್ಗಮಯ' ಬ್ಯಾಂಡ್ ಖ್ಯಾತಿಯ ಅಮೃತ ಸುರೇಶ್ ಹಾಗೂ ಅಭಿರಾಮಿ ಸುರೇಶ್ ಕಾರ್ಯಕ್ರಮದಲ್ಲಿ ಗೌರವ ಅತಿಥಿಗಳಾಗಿದ್ದರು. ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಸದ್ಗಮಯ–2023ರ ಸಮಗ್ರ ಪ್ರಶಸ್ತಿಗೆ ಭಾಜನವಾಯಿತು.

ಕನ್ನಡದ ಬಿಗ್‌ಬಾಸ್ ಹಿನ್ನೆಲೆ ಧ್ವನಿ ಖ್ಯಾತಿಯ, ಕಲರ್ಸ್ ಕನ್ನಡ ವಾಹಿನಿಯ ಅಧಿಕೃತ ಧ್ವನಿಯಾಗಿರುವ ಹಿನ್ನೆಲೆ ಧ್ವನಿ ಕಲಾವಿದ, ನಿರೂಪಕ ಬಡೆಕ್ಕಿಲ ಪ್ರದೀಪ್ ಸದ್ಗಮಯ–2023 ಅನ್ನು ಉದ್ಘಾಟಿಸಿದರು. ಸದ್ಗಮಯ ಎಂದರೆ ಅಂತರ್ ಪ್ರೇರಣೆಯಿಂದ ನಮ್ಮನ್ನು ನಾವು ಬದಲಿಸಿಕೊಳ್ಳುವ ಹಾಗೂ ತನ್ಮೂಲಕ ಹೊಸ ಪ್ರಗತಿಯನ್ನು ಕಾಣುವುದಾಗಿದೆ ಎಂದರು. ಸ್ಪರ್ಧೆಯ ಕುರಿತು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಸ್ಪರ್ಧೆ ಹಾಗೂ ಅದರಲ್ಲಿ ವಿಜೇತರಾಗುವುದು ಖಂಡಿತ ನಮ್ಮ ಗುರಿಯಾಗಿರಬೇಕು. ಆದರೆ ಬೇರೆಯವರ ಸೋಲಿನಲ್ಲಿ ಅದನ್ನು ಸಂಭ್ರಮಿಸುವ ಗುರಿ ತಪ್ಪು. ನಮ್ಮ ಜೀವನದಲ್ಲಿ ನಾವು ಯಾವಾಗಲೂ ಸಹಕಾರ, ಧನಾತ್ಮಕತೆ ಹಾಗೂ ನಿರಂತರ ಉತ್ಸಾಹವನ್ನು ಹೊಂದಬೇಕು ಎಂದು ತಿಳಿಸಿದರು. ಸದ್ಗಮಯ–2023ರ ವೈವಿಧ್ಯಮಯ ಸ್ಪರ್ಧೆಗಳಲ್ಲಿ ಬೇರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಭಾಗವಹಿಸಿದ್ದರು.

ಅಮೃತ ಮೈಸೂರು ಕ್ಯಾಂಪಸ್‌ನ ವಿವಿಧ ವಿಭಾಗಗಳಿಂದ ಗೇಮಿಂಗ್, ಬ್ರೇನ್‌ಜಿ, ಕ್ಯಾಪ್ಚರ್ ದಿ ಫ್ಲ್ಯಾಗ್, ಬೆಸ್ಟ್ ಟೀಮ್ ಮ್ಯಾನೇಜ್‌ಮೆಂಟ್, ಕ್ಯಾಪಿಟಲ್ ಕಾರ್ನಿವಲ್, ಬ್ಯುಸಿನೆಸ್ ಪ್ಲ್ಯಾನ್ ಇವೆಂಟ್, ರೀಲ್ ಮೇಕಿಂಗ್, ಅಂದಾಜ್ ಅಪ್ನಾ ಅಪ್ನಾ, ಮೋಕ್ ಪ್ರೆಸ್, ಡಿಯೋ ಡಿಕ್ಷನ್, ದಿವ್ಯಪಠಣಂ, ಬಾಸ್ಕೆಟ್ ಬಾಲ್, ಕ್ವಾರ್ಕಿ ಬಿಟ್ಸ್, ರಿದಮ್ ಕದಮ್ ದ್ರುತಮ್ ನೃತ್ಯ (ಸೋಲೋ/ಗ್ರೂಪ್), ಸೈನ್ಸ್ ಸ್ಪರ್ಧೆಗಳು ಆಯೋಜನೆಗೊಂಡಿದ್ದವು. ಸುಮಾರು 35 ಕಾಲೇಜುಗಳ 400 ವಿದ್ಯಾರ್ಥಿಗಳು ಈ ಬಹುಮುಖಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಅಮೃತ ವಿಶ್ವವಿದ್ಯಾಪೀಠಂ ಮೈಸೂರು ಕ್ಯಾಂಪಸ್‌ನ ನಿರ್ದೇಶಕರಾದ ಬ್ರಹ್ಮಚಾರಿ ಅನಂತಾ ನಂದ ಚೈತನ್ಯ, ಸಂಚಾಲಕರಾದ ಬ್ರಹ್ಮಚಾರಿ ಮುಕ್ತಿಧಾಮೃತ ಚೈತನ್ಯ, ಪ್ರಾಂಶುಪಾಲರಾದ ಡಾ. ಜಿ.ರವೀಂದ್ರ ನಾಥ್, ಅಸೋಸಿಯೇಟ್ ಡೀನ್ ಪ್ರೊ. ಶೇಖರ್ ಬಾಬು, ಶೈಕ್ಷಣಿಕ ಸಂಯೋಜಕರಾದ ಡಾ.ರೇಖಾಭಟ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಾರಭವಿಷ್ಯ

28.5.2023 ರಿಂದ 3.6.2023



ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಷಭ, ಚಂದ್ರ–ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಕುಜ–ಕಟಕ, ಬುಧ–ಮೇಷ, ಗುರು–ಮೇಷ, ಶುಕ್ರ–ಮಿಥುನ, ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಈ ವಾರ ಆದಾಯದ ಜೊತೆ ಜೊತೆಗೆ ಖರ್ಚುಗಳೂ ಹೆಚ್ಚಾಗುವುದು. ಅರಸಿ ಬಂದದ್ದನ್ನು ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ನ್ಯಾಯಾಲಯದ ಕೆಲಸ ಕಾರ್ಯಗಳು ಅನುಕೂಲಕರವೆನಿಸುವುದು. ವಿವಾಹ ಸಂಬಂಧಿ ಮಾತುಗಳು ಪ್ರಗತಿಯನ್ನು ಕಾಣದು. ನಿಮ್ಮ ತೀಕ್ಷ್ಣ ಸ್ವಭಾವದಿಂದ ಸಂಬಂಧಗಳಲ್ಲಿ ಒಡಕು ಉಂಟಾಗುವುದು. ಜನ್ಮಸ್ಥ ರಾಹು ಕಾರಣ ಮಾನಸಿಕ ಅಶಾಂತಿ, ಸ್ಥಾನಚ್ಯುತಿ, ಶಿರೋವೇದನೆ ಉಂಟಾಗಲಿದೆ. ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ–1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ನಿಮ್ಮ ರಾಶ್ಯಾಧಿಪತಿ ಶುಕ್ರನ ಶುಭ ಸಂಚಾರದಿಂದ ಸ್ಥಾನ ಲಾಭ, ಧನಲಾಭ, ನೂತನ ಅಧಿಕಾರ ಪ್ರಾಪ್ತಿ. ನೀವು ಪ್ರಭಾವಶಾಲಿಗಳೆನಿಸಿ ಸಮಾಜದಲ್ಲಿ ಗೌರವಿಸಲ್ಪಡುವಿರಿ. ಶುಭ ಸಮಾಚಾರ ಬಂದು ಮನಸ್ಸಿಗೆ ಸಮಾಧಾನ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕದು. ವ್ಯಾಪಾರ ಉದ್ಯಮಗಳಲ್ಲಿ ಅಲ್ಪ ಪ್ರಗತಿ. ಸತಿ–ಸುತರು ಎದುರಾಡುವುದರಿಂದ ಮನಸ್ಸಿಗೆ ಬೇಸರ. ಅಕಾಲಿಕ ಭೋಜನ, ಗ್ಯಾಸ್ ಟ್ರಬಲ್ ಕಾಡುವುದು. ಶ್ರೀ ದೇವಿ ಆರಾಧನೆ. ಶುಭ ಸಂಖ್ಯೆ–4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರದಲ್ಲಿ ನೀವು ಬಹಳಷ್ಟನ್ನು ಸಾಧಿಸುವ ಸಾಮರ್ಥ್ಯ ಹೊಂದಿರುತ್ತೀರಾ. ಬಂದ ಅವಕಾಶಗಳು ಕೈಜಾರದಂತೆ ನೋಡಿಕೊಳ್ಳಿ. ಹೊಸ ಹುರುಪಿನಿಂದ ಸ್ವಂತ ಕೆಲಸಗಳು ಸಂಪನ್ನಗೊಳ್ಳಲಿವೆ. ಸರ್ಕಾರಿ ನೌಕರರಿಗೆ ಬಡ್ತಿ ಯೋಗವಿದೆ. ವಿಲಾಸ ಜೀವನ, ಸ್ತ್ರೀ ಸುಖ, ಸಣ್ಣ ಕೈಗಾರಿಕೆಯವರಿಗೆ ಉತ್ತಮ ಧನಲಾಭವಾಗುವುದು. ರಾಜಕಾರಣಿಗಳಿಗೆ ಅಪಪ್ರಚಾರದ ಕಿರಿಕಿರಿ. ದೀರ್ಘ ಪ್ರಯಾಣಗಳಿಂದ ದೇಹಾಯಾಸ. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–8.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಮಹತ್ವದ ಕೆಲಸ ಯಶಸ್ವಿಯಾಗಿ ಸಂಪನ್ನಗೊಳ್ಳುವುದು. ನಿಪುಣತೆಯಿಂದ ಕಾರ್ಯ ಸಾಧನೆ, ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸು. ಹತ್ತಿ, ಜವಳಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ದೊರೆಯುವುದು. ಹಿರಿಯರ ಬುದ್ಧಿವಂತಿಕೆ ಮಾತನ್ನು ನಿರ್ಲಕ್ಷಿಸಬೇಡಿ. ಅಷ್ಟಮದಲ್ಲಿ ಶನಿದೇವನ ಸಂಚಾರವಿದ್ದು ಸ್ವಯಂಕೃತಾಪರಾಧಗಳಿಂದ ಚಿಂತೆಗೀಡಾಗುವಿರಿ. ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5.

ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ಗುರುಕೃಪೆಯಿಂದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊರತೆಯೇನು ಆಗದು. ಗೃಹಬಳಕೆ ಹಾಗೂ ಐಷಾರಾಮಿ ವಸ್ತುಗಳ ಖರೀದಿ. ಸ್ಥಿರಾಸ್ತಿ, ನೂತನ ವಾಹನ ಹೊಂದುವ ಆಶಯ ಈಡೇರುವುದು. ಐಟಿ, ಬಿಟಿಯವರಿಗೆ ವರಮಾನದಲ್ಲಿ ಹೆಚ್ಚಳವಾಗುವುದು. ಶನಿದೇವ ಅಶುಭನಿದ್ದಾನೆ. ಆತುರದ ನಿರ್ಧಾರದಿಂದ ನಷ್ಟವನ್ನು ಅನುಭವಿಸಬೇಕಾದೀತು. ಆರೋಗ್ಯ ಕೆಡುವ ಸಂಭವ. ದಂಪತಿಗಳಲ್ಲಿ ಒಮ್ಮತ ಇರದು. ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಈ ಜಗದಲ್ಲಿ ನಡೆಯುವುದೆಲ್ಲ ಜಗದೀಶನಿಚ್ಛೆ. ವಾರದಾರಂಭಕ್ಕೆ ಪ್ರಿಯ ಜನರ ಮಧುರ ಬಾಂಧವ್ಯ. ಹಣಕಾಸಿನ ಪರಿಸ್ಥಿತಿಯಲ್ಲಿ ಅಲ್ಪ ಸ್ವಲ್ಪ ಮುನ್ನಡೆಯಾದರೂ ತಾತ್ಕಾಲಿಕ ಸಾಲ ಮಾಡಬೇಕಾದೀತು. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗಾವಣೆಯಿಂದ ವಾಸ್ತವ್ಯ ಬದಲಾಯಿಸಬೇಕಾದೀತು. ನೆರೆಹೊರೆಯಲ್ಲಿ 'ಜಾಣ ಕಿವುಡು ಬುದ್ಧಿವಂತರ ಲಕ್ಷಣ' ಎಂಬಂತೆ ಸುಮ್ಮನಿದ್ದು ಬಿಡಿ. ಮಹಿಳೆಯರಿಗೆ ರಕ್ತದೋಷ ಕಾಡಬಹುದು. ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–9.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಪೂರ್ವಾರ್ಧದಲ್ಲಿ ಕಾರ್ಯ ಕುಶಲತೆಯಿಂದ ಮನೆಯ ಹಾಗೂ ಸಾಮಾಜಿಕ ಕಾರ್ಯಗಳನ್ನು ನಿಭಾಯಿಸುವಿರಿ. ಪ್ರಯತ್ನ ಕಾರ್ಯಗಳು ಯಶಸ್ವಿಯಾಗಲು ಗುರು–ಚಂದ್ರ ಒಲವಿದೆ. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರ ದೊರೆಯಲಿದೆ. ಸ್ಥಿರಾಸ್ತಿ ಕ್ರಯ–ವಿಕ್ರಯಗಳಲ್ಲಿ ಧನಪ್ರಾಪ್ತಿ. ಅನಿರೀಕ್ಷಿತ ಪ್ರಯಾಣಗಳನ್ನು ತಳ್ಳಿ ಹಾಕಲಾರದು. ಉತ್ತರಾರ್ಧದಲ್ಲಿ ಸಮಾಜಘಾತುಕ ಜನರ ಸಹವಾಸದಿಂದ ದೂರವಿರಿ. ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–5.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)
ಈ ವಾರದಲ್ಲಿ ಗುರುಬಲ, ಚಂದ್ರಬಲ ಒಟ್ಟುಗೂಡಿದೆ. ತುರ್ತು ಕೆಲಸಗಳನ್ನು ತ್ವರಿತವಾಗಿ ಮಾಡಿಕೊಳ್ಳಿ. ಸ್ಥಗಿತಗೊಂಡಿದ್ದ ವೈಯಕ್ತಿಕ ಕೆಲಸಗಳು ನಿಮ್ಮ ಹಿತೈಷಿಗಳ ಸಹಕಾರದಿಂದ ಮರುಚಾಲನೆ ಹೊಂದುವುದು. ಲೇಖಕರಿಗೆ, ಪುಸ್ತಕ ಪ್ರಕಾಶಕರಿಗೆ ಉತ್ತಮ ಸಮಯವಾಗಿದೆ. ನಂಬಿಕಸ್ಥ ವ್ಯಕ್ತಿಗಳೊಂದಿಗೆ ಮಾತ್ರ ವ್ಯವಹರಿಸಿ. ದೂರ ಪ್ರಯಾಣಗಳಿಂದ ದೇಹಾಯಾಸವೂ, ಹಾನಿಯೂ ಉಂಟಾದೀತು. ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭ ಜೀವನದಲ್ಲಿ ಹರ್ಷ ಉಲ್ಲಾಸಗಳು. ಉದ್ಯೋಗಾಕಾಂಕ್ಷಿಗಳಿಗೆ ಸುವಾರ್ತೆ ಬರುವುದು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ಅಧ್ಯಾಪಕ ವೃತ್ತಿಯವರಿಗೆ ಬಡ್ತಿಯ ಸಂಭವ. ಇದರಲ್ಲಿ ಗಣ್ಯ ವ್ಯಕ್ತಿಗಳ ಸಹಕಾರ ಇರುತ್ತದೆ. ಮನೆಯಲ್ಲಿ ಶುಭ ಕಾರ್ಯ, ಸಾಧು, ಸಜ್ಜನರ ಸಮಾಗಮ. ವಯಸ್ಸಿಗೆ ಬಂದ ಮಕ್ಕಳ ಚಲನ–ವಲನದ ಮೇಲೆ ಗಮನವಿರಿಸಿ. ಪಿತ್ತ, ಜ್ವರ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.

ಮಕರ (ಬೊ.ಜ.ಜಿ.ಖಿ.ಖು.ಖೆ.ಖೊ.ಗ.ಗಿ.)
ಜೀವನದ ಸಾಧಕ–ಬಾಧಕಗಳ ಬಗ್ಗೆ ಅರಿವು ಉಂಟಾಗದಿರಲು ಗ್ರಹಗತಿಗಳೇ ಕಾರಣ. ಆದಾಯಕ್ಕಿಂತ ಖರ್ಚುಗಳು ಜಾಸ್ತಿಯಾಗಿ ಪರ್ಸ್ ಖಾಲಿ. ಕೊಡಿಟ್ಟ ದಾಸ್ತಾನು ಮಾರಾಟ ಮಾಡುವುದರಿಂದ ಲಾಭವಾಗುವುದು. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆಯ ಕೊರತೆ. ವಾರದ ಉತ್ತರಾರ್ಧಕ್ಕೆ ದೈನಂದಿನ ಕೆಲಸಗಳು ಸುಗಮವಾಗಿ ಸಾಗುವುದು. ಶುಭ ಚಂದ್ರನ ಪರಿಣಾಮ ಹೋಟೆಲ್, ಲಾಡ್ಜ್‌ನವರಿಗೆ ಹೆಚ್ಚಿನ ಆದಾಯ. ಶ್ರೀ ಆಂಜನೇಯ ದರ್ಶನ. ಶುಭ ಸಂಖ್ಯೆ–7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಆದಿಗೆ ಕಬ್ಬಿಣ, ಸಿಮೆಂಟ್ ಹಾಗೂ ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗಲಿದೆ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರ ದೊರಕುವುದು. ಪಾಲುದಾರಿಕೆ ವ್ಯವಹಾರದಲ್ಲಿ ಸಾಮರಸ್ಯದ ಕೊರತೆ. ಮನೆಯಲ್ಲಿ ಹಿರಿಯ ಚೇತನರಿಗೆ ಅನಾರೋಗ್ಯ, ಔಷಧೋಪಚಾರಕ್ಕೆ ಹೆಚ್ಚಿನ ಹಣ ವ್ಯಯ. ರಾಜಕೀಯದವರು ಜನ ವಿರೋಧವನ್ನು ಎದುರಿಸಬೇಕಾಗುವುದು. ವಿಧಿಯಂತೆ ಕಾರ್ಯನಿರ್ವಹಿಸಿ, ಭಗವಂತನನ್ನು ಸೇವಿಸಿ. ಶ್ರೀ ಶ್ರೀನಿವಾಸ ಸೇವೆ. ಶುಭ ಸಂಖ್ಯೆ–4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಮಾಜದಲ್ಲಿ ಉತ್ತಮ ಕೆಲಸಗಳಿಂದ ಜನಾದರಕ್ಕೆ ಭಾಜನರಾಗುವಿರಿ. ವ್ಯಾಪಾರ, ವ್ಯವಹಾರಗಳಲ್ಲಿ ದ್ವಿಗುಣ ಲಾಭವನ್ನು ನಿರೀಕ್ಷಿಸಬಹುದು. ನಿಮ್ಮ ಬುದ್ಧಿ ಕುಶಲತೆ ಉತ್ತಮ ಮಟ್ಟದ್ದಾಗಿ ಇರುತ್ತದೆ. ಸ್ಥಿರಾಸ್ತಿ, ನೂತನ ವಾಹನ ಹೊಂದಲು ಬೃಹಸ್ಪತಿಯ ಅನುಗ್ರಹವಿದೆ. ಪುತ್ರ–ಪುತ್ರಿಯರ ಸಾಧನೆಯಿಂದ ಮನಃ ಸಂತೋಷ. ದೀರ್ಘ ಕಾಲದ ಅನಾರೋಗ್ಯದಿಂದ ಬಿಡುಗಡೆ. ಶ್ರೀ ರಾಘವೇಂದ್ರಸ್ವಾಮಿ ಉಪಾಸನೆ. ಶುಭ ಸಂಖ್ಯೆ–6.

ಸ್ವಯಂ ಉದ್ಯೋಗ ಮಾಡಿ ದೇಶದ ಪ್ರಗತಿಗೆ ಕೊಡುಗೆ ನೀಡಿ

ಮಹಿಳಾ ಸಬಲೀಕರಣ ಕಾರ್ಯಕ್ರಮ

ಮೈಸೂರು, ಮೇ 27– ಮೈಸೂರು ನಗರದ ಕೆಸರೆಯಲ್ಲಿ ದತ್ತೋಪಂತ ಠೆಂಗಡಿ ರಾಷ್ಟ್ರೀಯ ಕಾರ್ಮಿಕ ಮತ್ತು ಶಿಕ್ಷಣ ಮಂಡಳಿ ವತಿಯಿಂದ ಆಯೋಜಿಸಿದ್ದ ಕಾರ್ಯಾಗಾರವನ್ನು ಪ್ರಾದೇಶಿಕ ನಿರ್ದೇಶಕ ಸತೀಶ್ ಕುಮಾರ್ ಉದ್ಘಾಟಿಸಿದರು. ವಕೀಲ ಕೆ.ವಿ. ವಾಸು ಕಾನೂನಿನ ಹಲವು ವಿಚಾರಗಳ ಬಗ್ಗೆ ವಿವರಣೆಯನ್ನು ನೀಡಿದರು. ಸಂಪನ್ಮೂಲ ವ್ಯಕ್ತಿ ಸ್ವರಾಜ್ ಅವರು ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕೆ ಇರುವ ವಿಫುಲವಾದ ಅವಕಾಶಗಳ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.



ಕಾರ್ಯಕ್ರಮದಲ್ಲಿ ಆಯೋಜಕರಾದ ನಾಗೇಂದ್ರ ಪ್ರಸಾದ್ ಮತ್ತು ಕೆಸರೆ ಅಂಗನವಾಡಿ ಕೇಂದ್ರದ ಕಾರ್ಯಕರ್ತರು ಉಪಸ್ಥಿತರಿದ್ದರು.

ಮನುಷ್ಯ ಸದಾ ಸಂರಕ್ಷಣಾ ಮನೋಭಾವದಿಂದ ಬದುಕಬೇಕು

ಐಜಿಬಿಸಿಯ ಡಿ.ಎಸ್.ರಾಮಕೃಷ್ಣರಾವ್ ಅಭಿಮತ



ಮೈಸೂರು, ಮೇ 27–ಮಾನವ ತನ್ನ ಜೀವನದಲ್ಲಿ ಸಂರಕ್ಷಣಾ ಮನೋಭಾವವನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಇಂಡಿಯನ್ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್ (ಐಜಿಬಿಸಿ) ಅಧ್ಯಕ್ಷ ಡಿ.ಎಸ್. ರಾಮಕೃಷ್ಣ ರಾವ್ ಅಭಿಪ್ರಾಯಪಟ್ಟರು.

ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪರಿಸರ ಅಧ್ಯಯನ, ಭೂಗೋಳ ಶಾಸ್ತ್ರ ಮತ್ತು ಭೌತಶಾಸ್ತ್ರ ವಿಭಾಗಗಳು, ಬ್ಯೂರೋ ಆಫ್ ಎನರ್ಜಿ ಎಫಿಷಿಯೆನ್ಸಿ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಸಹಭಾಗಿತ್ವದಲ್ಲಿ 'ಇಂಧನ ದಕ್ಷತೆ ಮತ್ತು ಇಂಧನ ಸಂರಕ್ಷಣೆ' ಕುರಿತು ಜಾಗೃತಿ ಕಾರ್ಯಕ್ರಮ, ಚಿತ್ರಕಲೆ/ಪೋಸ್ಟರ್ ವಿನ್ಯಾಸ ಸ್ಪರ್ಧೆ ಮತ್ತು ವಸ್ತುಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಸೂರ್ಯಕಾಂತಿ ಗಿಡವು ಸೂರ್ಯನಿದ್ದಾಗ ಸೂರ್ಯನ ಕಡೆ ಮುಖ ಮಾಡಿ ನಿಲ್ಲುತ್ತದೆ, ಸೂರ್ಯನ ಕಿರಣಗಳು ಇಲ್ಲದಿರುವಾಗ ಅವು ಒಂದನ್ನೊಂದು ಆಕರ್ಷಿಸಿ ನಿಂತು ಶಕ್ತಿ ಸಂರಕ್ಷಣೆ ಮಾಡಿಕೊಳ್ಳುತ್ತವೆ ಎಂದರು.

ಸೌರ ಶಕ್ತಿ ಮತ್ತು ಅದರ ಬಳಕೆ ಬಗ್ಗೆ ತಿಳಿಸಿ, ನೀರಿನ ತರಂಗಗಳಿಂದ, ಭೂಶಾಖದಿಂದ ಮತ್ತು ಇತರ ನೈಸರ್ಗಿಕ ಉತ್ಪಾದನೆಯ ವಿಧಿಯನ್ನು ತಿಳಿಸಿದರು. ನಂತರ ಮಣ್ಣಿನ ಮಡಿಕೆಗಳ ಉದಾಹರಣೆಯನ್ನು ನೀಡುವ ಮೂಲಕ ವೈದಿಕ ಕಾಲದ ವಿಜ್ಞಾನ ಮತ್ತು ಹಳೆಯ ಕಾಲದಲ್ಲಿ ಶಕ್ತಿ ಸಂರಕ್ಷಣೆ ಹೇಗಾಗುತ್ತಿತ್ತು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಭಾಷಣದ ಕೊನೆಯಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಸಭೆಯಲ್ಲಿ ನೆರೆದಿದ್ದ ಎಲ್ಲರೊಂದಿಗೆ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ. ಬಿ.ಆರ್.ಜಯಕುಮಾರಿ ಮಾತನಾಡಿ, ಭಾರತ ಇಡೀ ಜಗತ್ತಿಗೆ ವಿಶ್ವಗುರು. 5000 ವರ್ಷಗಳ ಪ್ರಾಚೀನ ಜ್ಞಾನವನ್ನು ಹೊಂದಿದೆ. ಭಾರತದಲ್ಲಿರುವ ಕೆಲವು ನೈಸರ್ಗಿಕ ಸಂಪನ್ಮೂಲಗಳು ವೈವಿಧ್ಯತೆಯನ್ನು ಹೊಂದಿದೆ. ಆ ಸಂಪನ್ಮೂಲಗಳನ್ನು, ಶಕ್ತಿಯನ್ನು ಸಂರಕ್ಷಿಸಬೇಕು. ಸಂರಕ್ಷಣೆ ಮಾಡುವುದು ಮತ್ತು ದಕ್ಷತೆಯಿಂದ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಇಂಧನ ಉಳಿತಾಯ ಮಾಡಿ ಪರಿಸರ ಸಂರಕ್ಷಿಸಿ. ನೈಸರ್ಗಿಕ ಸಂಪತ್ತಿನ ಸದ್ಬಳಕೆಯ ಜೊತೆಗೆ ಸಂರಕ್ಷಣೆಯ ಹೊಣೆಯೂ ನಮ್ಮದಾಗಿರುತ್ತದೆ. ಸೌರಶಕ್ತಿ, ಗಾಳಿಚಕ್ರ, ಜಲಶಕ್ತಿಗಳ ಬಳಕೆಯಿಂದ ಇದನ್ನು ಸರಿದೂಗಿಸಬಹುದು, ವಿದ್ಯುತ್ ಅಮೂಲ್ಯವಾದ ಸಂಪತ್ತು ಅಗತ್ಯತೆ ಅರಿತು ಬಳಸಬೇಕು. ಬಿಡಿ ವಾಹನಗಳ ಬಳಕೆ, ಸೈಕಲ್ ಬಳಕೆಯನ್ನು ಹೆಚ್ಚಿಸಿಕೊಳ್ಳಬೇಕು ಇದರಿಂದ ದೇಹಕ್ಕೆ ಅದ್ಭುತವಾದ ವ್ಯಾಯಾಮವಾಗುತ್ತದೆ. ಬಲ್ಬ್‌ಗಳನ್ನೂ ಉಪಯೋಗಿಸಿ ಸೌರಶಕ್ತಿ ಆಧಾರಿತ ವಾಟರ್ ಹೀಟರ್‌ಗಳ ಬಳಕೆ, ದಕ್ಷತೆ ಹೊಂದಿರುವ ವಿದ್ಯುತ್ ಉಪಕರಣಗಳ ಬಳಕೆ, ಸಾಧ್ಯ–ಅಸಾಧ್ಯಗಳು ಮನಸ್ಸಿನ ಸದೃಢತೆಯನ್ನು ಅವಲಂಬಿಸಿರುತ್ತದೆ ಎಂದು ಕಿವಿಮಾತು ಹೇಳಿದರು.

ರಚನಾ ಎನರ್ಕೆರ್ ಮುಖ್ಯಸ್ಥ ಅನಿಲ್ ಕುಮಾರ್ ನಾಡಿಗೇರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಶೈಕ್ಷಣಿಕ ಸಲಹೆಗಾರ ಡಾ. ಎಸ್. ಆರ್. ರಮೇಶ್, ಸಂಪನ್ಮೂಲ ವ್ಯಕ್ತಿ ಅರಿಣಿ ಶ್ರೀನಿವಾಸ್ ಮಾತನಾಡಿದರು.

ನಂತರ ಚಿತ್ರಕಲೆ ಮತ್ತು ಭಿತ್ತಿ ಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳ ಪ್ರತಿಭೆಯಲ್ಲಿ ಅರಳಿದ ಪರಿಸರ ಸಂರಕ್ಷಣೆಯ ಜಾಗೃತಿ ಬಹಳ ವರ್ಣರಂಜಿತವಾಗಿತ್ತು. ಸ್ಪರ್ಧೆಗಳಲ್ಲಿ 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ವಿದ್ಯುತ್ ಸ್ಪರ್ಶದಿಂದ ಸಲಗ ದುರಂತ ಸಾವು

ಪೊನ್ನಂಪೇಟೆ ಬಳಿ ಆಹಾರಕ್ಕಾಗಿ ಬಂದಾಗ ಅನಾಹುತ

ಅರಣ್ಯ, ಚೆಸ್ಕಾಂ ಇಲಾಖೆಯ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣ

ಮಡಿಕೇರಿ, ಮೇ 27– ಕಾಫಿ ತೋಟದ ಒಳಗೆ ಹಾದು ಹೋಗಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಕಾಡಾನೆಯೊಂದು ದಾರುಣವಾಗಿ ಸಾವನ್ನಪ್ಪಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಕುಟ್ಟ ಗ್ರಾಮದಲ್ಲಿ ಸಂಭವಿಸಿದೆ.

ಕುಟ್ಟ ಗ್ರಾಮದ ಕಾಳಿ ದೇವಸ್ಥಾನ ಪಕ್ಕದಲ್ಲಿರುವ ಪ್ರವರ್ಧನ್ ಪೂಜಾರಿ ಎಂಬವರ ಕಾಫಿ ತೋಟದಲ್ಲಿ ಶನಿವಾರ ಬೆಳಗ್ಗಿನ ಜಾವ ಘಟನೆ ಸಂಭವಿಸಿದ್ದು, ಮೃತಪಟ್ಟ ಗಂಡಾನೆ ಸುಮಾರು 40ರಿಂದ 45 ವರ್ಷ ಪ್ರಾಯದ್ದಾಗಿರಬಹುದು ಎಂದು ಅಂದಾಜಿಸಲಾಗಿದೆ.



ಕಾಫಿ ತೋಟದ ಕೆಳ ಭಾಗದಲ್ಲಿ 11 ಕೆ.ವಿ. ವಿದ್ಯುತ್ ಮಾರ್ಗ ಹಾದು ಹೋಗಿದ್ದು, ಆಹಾರ ಅರಸಿಕೊಂಡು ತೋಟಕ್ಕೆ ಬಂದಿದ್ದ ಸಲಗದ ಸೊಂಡಿಲು ವಿದ್ಯುತ್ ತಂತಿಗೆ ಸ್ಪರ್ಶಿಸಿದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದೆ. ಚೆಸ್ಕಾಂ ಇಲಾಖೆಯ ನಿರ್ಲಕ್ಷ್ಯವೇ ಈ ದುರ್ಘಟನೆಗೆ ಕಾರಣ ಎಂಬ ಆರೋಪ ಕೇಳಿ ಬಂದಿದೆ. ಒಂದು ವಿದ್ಯುತ್ ಕಂಬದಿಂದ ಮತ್ತೊಂದು ಕಂಬಕ್ಕೆ ಸುಮಾರು 300 ಅಡಿಗಳ ಅಂತರವಿರುವುದರಿಂದ ವಿದ್ಯುತ್ ತಂತಿ ಕೆಳಭಾಗದಲ್ಲೇ ಜೋತು ಬಿದ್ದ ರೀತಿಯಲ್ಲಿ ಹಾದು ಹೋಗಿರುವುದು ದುರ್ಘಟನೆಗೆ ಕಾರಣ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಂ ಶರಣಬಸಪ್ಪ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ದುಬಾರೆ ಸಾಕಾನೆ ಶಿಬಿರದ ಪಶು ವೈದ್ಯಾಧಿಕಾರಿ ಡಾ.ಚಿಟ್ಟಿಯಪ್ಪ ಕಾಡಾನೆಯ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಿದರು.

ಈ ಕುರಿತು ಮಾತನಾಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಂ ಶರಣಬಸಪ್ಪ, ಪೊನ್ನಂಪೇಟೆ ವಲಯ ಅರಣ್ಯಾಧಿಕಾರಿ ಶಂಕರ್ ಅವರು ನೀಡಿದ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಮೃತ ಕಾಡಾನೆಯ ಕಳೇಬರದ ಮರಣೋತ್ತರ ಪರೀಕ್ಷೆಯಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಕಾಡಾನೆ ಮೃತಪಟ್ಟಿರುವುದು ದೃಢಪಟ್ಟಿದೆ. ಕಾಡಾನೆಯ ಸೊಂಡಿಲು ವಿದ್ಯುತ್ ತಂತಿಗೆ ಸ್ಪರ್ಶಿಸಿರುವುದು ದುರಂತಕ್ಕೆ ಕಾರಣವಾಗಿದೆ. ಕೆಳಭಾಗದಲ್ಲಿ ಹಾದುಹೋಗಿರುವ 11 ಕೆ.ವಿ.ವಿದ್ಯುತ್ ಮಾರ್ಗವನ್ನು ಸರಿಪಡಿಸಬೇಕೆಂದು ಹಲವು ಬಾರಿ ಚೆಸ್ಕಾಂ ಇಲಾಖೆಯ ಗಮನಕ್ಕೆ ತಂದರೂ ಕೂಡ ಕ್ರಮವಹಿಸಲಿಲ್ಲ ಎಂದು ಹೇಳಿದರು.

ಪಶು ವೈದ್ಯಾಧಿಕಾರಿ ಡಾ.ಬಿ.ಟಿ. ಚಿಟ್ಟಿಯಪ್ಪ ಮಾತನಾಡಿ, ವಿದ್ಯುತ್ ಸ್ಪರ್ಶದಿಂದ ಕಾಡಾನೆ ಸಾವನ್ನಪ್ಪಿರುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಚೆಸ್ಕಾಂ ಇಲಾಖೆಯ ಬೇಜವಾಬ್ದಾರಿಯೇ ಸಲಗದ ದುರಂತ ಸಾವಿಗೆ ಕಾರಣವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಚೆಸ್ಕಾಂ ಇಲಾಖೆಯ ಜೂನಿಯರ್ ಇಂಜಿನಿಯರ್ ಎಸ್.ನಾಗೇಂದ್ರ ಪ್ರಸಾದ್ ಮಾತನಾಡಿ, ಘಟನೆ ಕುರಿತು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ. ಕೆಳಗೆ ಹಾದು ಹೋಗಿರುವ 11 ಕೆ.ವಿ. ವಿದ್ಯುತ್ ಮಾರ್ಗದ ದುರಸ್ತಿ ಕಾರ್ಯವನ್ನು ಅರಣ್ಯ ಇಲಾಖೆಯ ಸಹಕಾರದಿಂದ ಒಂದು ಕಡೆಯಿಂದ ಮಾಡಿಕೊಂಡು ಬರಲಾಗುತ್ತಿದೆ. ಈ ನಡುವೆಯೇ ದುರ್ಘಟನೆ ಸಂಭವಿಸಿರುವುದು ದುರದೃಷ್ಟಕರವಾಗಿದ್ದು, ಈ ಕೂಡಲೇ ಒಂದು ತಂಡವನ್ನು ಇಲ್ಲಿಗೆ ಕಳುಹಿಸಿ ವಿದ್ಯುತ್ ಮಾರ್ಗದ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭ ಕುಟ್ಟ ಪೊಲೀಸ್ ವೃತ್ತ ನಿರೀಕ್ಷಕರಾದ ರವಿಶಂಕರ್, ಉಪವಲಯ ಅರಣ್ಯಾಧಿಕಾರಿ ಗಣೇಶ್, ನಾಗರಾಜ್ ಶೇಟ್, ರಕ್ಷಿತ್, ಅಂಥೋಣಿ ಪ್ರಕಾಶ್ ಅರಣ್ಯ ಸಿಬ್ಬಂದಿ, ಆರ್‌ಆರ್‌ಟಿ ತಂಡದ ಸಿಬ್ಬಂದಿ ಹಾಜರಿದ್ದರು.

ಕೋವಿ ಕೊಡವರ ಆಯುಧ ಮಾತ್ರವಲ್ಲ, ಅದು ಅವರ ಧಾರ್ಮಿಕ ಸಂಸ್ಕಾರ

ರಾಜ್ಯಮಟ್ಟದ ಕೊಡವ ಕೌಟುಂಬಿಕ ಕಪ್–ತೆಂಗೆ ಬೊಡಿ ನಮ್ಮೆಗೆ ಚಾಲನೆ

ನಾಪೋಕ್ಲು, ಮೇ 27– ಕೋವಿ ಆಯುಧ ಮಾತ್ರವಲ್ಲ. ಇದು ಕೊಡವ ಜನಾಂಗದ ಧಾರ್ಮಿಕ ಸಂಸ್ಕಾರ. ಇದನ್ನು ಅನಾದಿಕಾಲದಿಂದಲೂ ಬಳಕೆ ಮಾಡುತ್ತಾ ಬರುತ್ತಿದ್ದು, ಕೊಡವರ ಈ ಹಕ್ಕು ಸಂವಿಧಾನಬದ್ಧವಾಗಿ ದೊರಕಬೇಕಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು. ನಾಚಪ್ಪ ಹೇಳಿದರು.

ಸಮೀಪದ ಬಲ್ಲಮಾವಟಿ ಗ್ರಾಮದ ನೇತಾಜಿ ಪ್ರೌಢಶಾಲೆಯ ಆಟದ ಮೈದಾನದಲ್ಲಿ ನೆಲಜಿ ಫಾರ್ಮರ್ಸ್ ಡೆವಲಪ್‌ಮೆಂಟ್ ಅಂಡ್ ರಿಕ್ರಿಯೇಶನ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಲಾಗಿದ್ದ ಮೂರನೇ ವರ್ಷದ ರಾಜ್ಯಮಟ್ಟದ ಕೊಡವ ಕೌಟುಂಬಿಕ ಕಪ್–ತೆಂಗೆ ಬೊಡಿ ನಮ್ಮೆ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ದೀಪ ಬೆಳಗಿಸಿ, ಕೋವಿಗಳಿಗೆ ಪೂಜೆ ಸಲ್ಲಿಸಿ ಮಾತನಾಡಿದರು.

ಯುದ್ಧ ಮತ್ತು ಬೇಟೆ ಕೊಡವರ ಪರಂಪರೆ. ಈ ಹಕ್ಕನ್ನು ಕಸಿಯುವ ಕೆಲಸ ಆಗುತ್ತಿದೆ. ಕೊಡವರ ಸಂಸ್ಕೃತಿ ವಿಶಿಷ್ಟವಾದುದು. ವೈವಿಧ್ಯಮಯ ಸಂಸ್ಕೃತಿ ಎಲ್ಲಾ ಜನಾಂಗದವರ ಧರ್ಮವನ್ನು ಸಮಾನವಾಗಿ ಕಾಣಬೇಕಿದೆ. ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರಬಾರದು. ಆದರೆ ಇಂದು ಕೊಡವ ಜನಾಂಗದ ಹಕ್ಕನ್ನು ಕಸಿಯುವ ಕೆಲಸ ಆಗುತ್ತಿದೆ. ಕೊಡವ ಜನಾಂಗ ಅನಾದಿ ಕಾಲದಿಂದ ಬಳಕೆ ಮಾಡಿಕೊಂಡು ಬಂದ ಭೂಮಿ ಮತ್ತು ಕೋವಿ ಇಲ್ಲದಂತೆ ಮಾಡುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.



ಕೊಡವ ನ್ಯಾಷನಲ್ ಕೌನ್ಸಿಲ್ ಕೊಡವರ ಆಚರಣೆಗಳಾದ ಕೈಲ್ ಮುಹೂರ್ತ ಹುತ್ತರಿ, ಕೋವಿಯ ಬಳಕೆ ಮುಂತಾದ ಸಂಸ್ಕೃತಿಯ ಭಾಗಗಳನ್ನು ಸಾರ್ವತ್ರಿಕವಾಗಿ ಪ್ರದರ್ಶಿಸುವ ಕೆಲಸವನ್ನು ಸಿಎನ್‌ಸಿ ಮಾಡುತ್ತಿದೆ ಕೋವಿಹಬ್ಬವನ್ನು ಕಳೆದ 13 ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಕೊಡವರ ದೇವನೆಲೆ, ಭಾಷೆ, ಸಂಸ್ಕೃತಿಗೆ ಧಕ್ಕೆ ತರುವಂತಹ ಕೆಲಸ ಆಗಬಾರದು ಎಂದರು.

ಕಾಫಿ ಬೆಳೆಗಾರ, ದಾನಿ ಬೊಳ್ಳಚೆಟ್ಟಿರ ಸುರೇಶ್ ಮಾತನಾಡಿ ಸಂಸ್ಕೃತಿಯನ್ನು ಯುವ ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಬೇಕಿದೆ. ಜನಾಂಗದ ಧಾರ್ಮಿಕ ಸಂಸ್ಕಾರವನ್ನು ಉಳಿಸಿ ಬೆಳೆಸಬೇಕು ಎಂದರು.

ಗ್ರಾಪಂ ಅಧ್ಯಕ್ಷ ಮುಕ್ಕಾಟಿರ ಸುತನ್ ಸುಬ್ಬಯ್ಯ ಮಾತನಾಡಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆ ನೆಲಜಿ ಫಾರ್ಮರ್ಸ್ ಡೆವಲಪ್ ಮೆಂಟ್ ಅಂಡ್ ರಿಕ್ರಿಯೇಷನ್ ಅಧ್ಯಕ್ಷ ಮಂಡೀರನಂದ ನಂಜಪ್ಪ ವಹಿಸಿದ್ದು ಈ ಸಂದರ್ಭ ಶಾಲಾ ಮುಖ್ಯ ಶಿಕ್ಷಕ ಸಿ.ಎಸ್.ಸುರೇಶ್, ಉಪಾಧ್ಯಕ್ಷ ಕೈಬುಲಿರ ಉಮೇಶ್, ಕಾರ್ಯದರ್ಶಿ ಮಾಳೆಯಿಂದ ಪ್ರದೀಪ್, ನಿರ್ದೇಶಕರಾದ ಚೇಯಕಪುಂಡ ನವೀನ್ ನಾಚಪ್ಪ, ಮಾಳೆಯಂಡ ವಿಜಯ, ಮಾಳೆಯಂಡ ವಿಜು, ಚೇಯಕಪುಂಡ ಅಪ್ಪಚ್ಚು, ಅಪ್ಪುಮಣಿಯಂಡ ಕಿಶನ್ ಮೇದಪ್ಪ ಮಣವಟ್ಟಿರ ಅರುಣ್ ಪಳಂಗಪ್ಪ, ಮಾಳೆಯಂಡ ವಿಜು ಬೊಡಿ ನಮ್ಮೆ ಸಂಚಾಲಕ ಮಾಳೆಯಂಡ ಅಪ್ಪಣ್ಣ ಇನ್ನಿತರರು ಉಪಸ್ಥಿತರಿದ್ದರು.

ಅಲ್ಲರಂಡ ಪ್ರೀತು ಕುಮಾರಿ ಸತೀಶ್ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವನ್ನು ಮುಕ್ಕಾಟಿರ ವಿನಯ್ ಸ್ವಾಗತಿಸಿ ವಂದಿಸಿದರು. ನಂತರ ಸ್ಪರ್ಧಾ ಕಾರ್ಯಕ್ರಮಗಳು ಜರುಗಿದವು. ಸ್ಪರ್ಧೆಯಲ್ಲಿ 128 ಕುಟುಂಬಗಳು ಭಾಗವಹಿಸಿದ್ದು ನಾಳೆ ಅಂತಿಮ ಸ್ಪರ್ಧೆ ಜರುಗಲಿದೆ.

ಕೊಡಗು ವಿವಿ ನೂತನ ವೆಬ್‌ಸೈಟ್ ಲೋಕಾರ್ಪಣೆ



ಕುಶಾಲನಗರ, ಮೇ 27– ಕೊಡಗು ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ, ಬೆಂಗಳೂರು ಇವರ ಸಹಯೋಗದೊಂದಿಗೆ ವಿನ್ಯಾಸಗೊಳಿಸಿ ಅಭಿವೃದ್ಧಿ ಪಡಿಸಿದ ನೂತನ ವೆಬ್‌ಸೈಟ್ (kuk.karnataka.gov.in) ಅನ್ನು ರಾಜ್ಯಪಾಲರೂ ಆದ ಕೊಡಗು ವಿಶ್ವವಿದ್ಯಾಲಯದ ಕುಲಾಧಿಪತಿ ಥಾವರ್ ಚಂದ್ ಗೆಹ್ಲೋಟ್ ಅವರು ರಾಜಭವನದಲ್ಲಿ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಅಶೋಕ ಸಂ. ಆಲೂರ ಅವರು ವಿಶ್ವವಿದ್ಯಾಲಯದ ಪರವಾಗಿ ರಾಜ್ಯಪಾಲರನ್ನು ಹೂಗುಚ್ಛ ನೀಡಿ ಗೌರವಿಸಿ ಸ್ವಾಗತಿಸಿದರು. ವಿಶ್ವವಿದ್ಯಾಲಯದ ವೆಬ್‌ಸೈಟ್ ಅನಾವರಣಗೊಳಿಸಿದ ಮಾನ್ಯ ರಾಜ್ಯಪಾಲರು ವಿಶ್ವವಿದ್ಯಾಲಯದ ಶ್ರೇಯೋಭಿವೃದ್ಧಿಗೆ ಶುಭಕೋರಿದರು.

ಇದೇ ಸಂದರ್ಭದಲ್ಲಿ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ಆಪ್ತ ಕಾರ್ಯದರ್ಶಿಗಳು, ಎಡಿಸಿ, ವಿಶೇಷ ಅಧಿಕಾರಿಗಳು, ಇ–ಆಡಳಿತ ಕೇಂದ್ರದ ಪ್ರತಿನಿಧಿಗಳು ಹಾಗೂ ರಾಜಭವನದ ವಿಶ್ವವಿದ್ಯಾಲಯ ವಿಭಾಗದ ಅಧಿಕಾರಿಗಳು ಹಾಜರಿದ್ದರು.

ಕೊಡಗು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಉಪನ್ಯಾಸಕರು, ಆಡಳಿತ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಈ ಕಾರ್ಯಕ್ರಮಕ್ಕೆ ಅಂತರ್ಜಾಲದ ಮುಖಾಂತರ ಸಾಕ್ಷಿಯಾದರು. ಕೊಡಗು ವಿಶ್ವವಿದ್ಯಾಲಯದ ಪ್ರವೇಶಾತಿ ಸಂಬಂಧ ಎಲ್ಲಾ ಮಾಹಿತಿಗಳನ್ನು ವೆಬ್‌ಸೈಟ್ (kuk.karnataka.gov.in) ಮೂಲಕ ಪಡೆಯಬಹುದಾಗಿದೆ.

ಅಕ್ರಮವಾಗಿ ಸಾಗಿಸುತ್ತಿದ್ದ 15 ಲಕ್ಷ ರೂ. ಮೌಲ್ಯದ ಬೀಟೆ ಮರದ ನಾಟಾ ವಶ

ಆರೋಪಿಗಳು ಪರಾರಿ, ಲಾರಿಯೊಂದಿಗೆ ಮರ ವಶಕ್ಕೆ

ಮಡಿಕೇರಿ, ಮೇ 27– ಅಕ್ರಮವಾಗಿ 15 ಲಕ್ಷ ರೂ. ಮೌಲ್ಯದ ಬೀಟೆ ಮರದ ನಾಟಾಗಳನ್ನು ಸಾಗಿಸುತ್ತಿದ್ದ ಪ್ರಕರಣವನ್ನು ಪತ್ತೆ ಹಚ್ಚುವಲ್ಲಿ ಮಡಿಕೇರಿ ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ.

ಪ್ರಕರಣದ ಮೂವರು ಆರೋಪಿಗಳು ದಾಳಿ ಸಂದರ್ಭದಲ್ಲಿ ಪರಾರಿಯಾಗಿದ್ದು, ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ.

ಮರಗೋಡು ಗ್ರಾಮದ ಮೂಲಕ ಹಾಕತ್ತೂರು ಕಡೆಗೆ ಲಾರಿಯಲ್ಲಿ (ಕೆಎ–12.ಬಿ. 9599) ಬೀಟೆ ಮರದ ನಾಟಾಗಳನ್ನು ಸಾಗಿಸುತ್ತಿರುವ ಬಗ್ಗೆ ಮಡಿಕೇರಿ ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಖಚಿತ ಮಾಹಿತಿ ಲಭಿಸಿತ್ತು. ಅದರಂತೆ ದಾಳಿ ನಡೆಸಿದ ಸಂದರ್ಭ ಒಂದು ಲಾರಿಯಲ್ಲಿ ಬೀಟೆ ಮರ ತುಂಬಿ ಸಾಗಿಸುತ್ತಿರುವುದು ಪತ್ತೆಯಾಯಿತು. ಈ ವೇಳೆ ಲಾರಿ ಚಾಲಕ ಸಹಿತ ಒಟ್ಟು ಮೂವರು ಪರಾರಿಯಾಗಿದ್ದಾರೆ. ಲಾರಿ ಮತ್ತು ಬೀಟೆ ಮರದ ನಾಟಾಗಳನ್ನು ವಶಕ್ಕೆ ಪಡೆಯಲಾಗಿದ್ದು, ಅರಣ್ಯ ಕಾಯಿದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ.



ಮಡಿಕೇರಿ ಉಪ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ ಪೂವಯ್ಯ, ಸಹಾಯಕ ಸಂರಕ್ಷಣಾಧಿಕಾರಿ ಮೋಹಿಸಿನ್ ಬಾಷಾ ಇವರುಗಳ ನೇತೃತ್ವದಲ್ಲಿ ಮಡಿಕೇರಿ ವಲಯದ ವಲಯ ಅರಣ್ಯ ಅಧಿಕಾರಿಗಳಾದ ಹನುಮಂತ್ ರಾಜು, ಮೂರ್ನಾಡು ಉಪವಲಯದ ಉಪ ವಲಯ ಅರಣ್ಯಾಧಿಕಾರಿ ಸಚಿನ್ ಬಿ.ಹೆಚ್., ಅರಣ್ಯ ಪಾಲಕಿ ಭವ್ಯ ಹೆಚ್.ಪಿ, ಅರಣ್ಯ ವೀಕ್ಷಕ ವಾಸುದೇವ, ವಾಹನ ಚಾಲಕರಾದ ಸಂತೋಷ್, ಮೋಹನ್ ಕುಮಾರ್ ಸಿಬ್ಬಂದಿಗಳಾದ ನಿಖಿಲ್, ವಿಕಿನ್, ಜೀವನ್, ಚಂದ್ರಶೇಖರ್, ಮಹೇಶ್, ದಿನೇಶ್, ಶರತ್, ಪ್ರವೀಣ್, ವೆಂಕಟರಮಣ, ಧನ್ಯಪ್ರಕಾಶ್, ಸಂಗೀತ, ಯಶವಂತ್ ಅವರುಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದವರು ಶಿವಕುಮಾರ ಶ್ರೀಗಳು

ಚಾಮರಾಜನಗರ ವಿರಕ್ತ ಮಠಾಧ್ಯಕ್ಷ ಶ್ರೀ ಚನ್ನಬಸವ ಸ್ವಾಮೀಜಿ

ಕೊಳ್ಳೇಗಾಲ, ಮೇ 27– ಶಿಕ್ಷಣದಿಂದ ಮಾತ್ರ ಸಂಸ್ಕಾರದ ಬದುಕು ಸಾಧ್ಯ, ಗುರು ಸ್ಮರಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದವರು ಶಿವಕುಮಾರ ಶ್ರೀಗಳು, ಶಿಕ್ಷಣ ಎಂಬುದು ಜೀವನದ ಉದ್ದಗಲ್ಲಕ್ಕೂ ಮಹತ್ತರ ಪಾತ್ರ ವಹಿಸಲಿದೆ. ಬಸವಾದಿ ಶರಣರ ತತ್ವಗಳನ್ನು ಜನ, ಮಾನಸದಲ್ಲಿ ಬಿತ್ತುವಲ್ಲಿಯೂ ಸಹಾ ಶಿವಕುಮಾರ ಶ್ರೀಗಳ ಪಾತ್ರ ಅಗಾಧವಾದುದು ಎಂದು ಚಾ.ನಗರ ವಿರಕ್ತ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ಹೇಳಿದರು.

ದೇಹವನ್ನು ದೇಗುಲ ಮಾಡಿದವರು ಬಸವಾದಿ ಶರಣರು, ಬಳಿಕ ಜನಮಾನದಲ್ಲಿ ಅಚ್ಚಳಿಯಂತೆ ಸಾರ್ಥಕ ಸೇವೆ ಮಾಡಿದವರು ಶಿವಕುಮಾರ ಶ್ರೀಗಳು. ವಚನಗಳ ಮೂಲಕ ನಾವೆಲ್ಲರೂ ಬದುಕು ಸಾರ್ಥಕ ಗೊಳಿಸಿಕೊಳ್ಳೋಣ. ಬಸವಾದಿ ಶರಣರ ತತ್ವಗಳು ನಮ್ಮೆಲ್ಲರ ಜೀವನಕ್ಕೂ ಅಡಿಪಾಯವಾಗಬೇಕು ಎಂದರು.



ಅವರು ಪಟ್ಟಣದ ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ಬಸವ ಮಹಾಮನೆಯಲ್ಲಿ ವೀರಶೈವ ಲಿಂಗಾಯತ ನೌಕರರ ಬಸವ ಸೇವಾ ಸಮಿತಿ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮಿಗಳ 116ನೇ ಜನ್ಮ ದಿನೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿ, ಲಿಂಗಾಯತರ ಧರ್ಮದವರು ಲಿಂಗ ಪೂಜೆಗೆ ಆದ್ಯತೆ ನೀಡಬೇಕು. ಮುಂಜಾನೆ ಎದ್ದು ಶುಚಿಯಾಗಿ ಭಸ್ಮ ಧಾರಣೆ ಮಾಡಿ ಲಿಂಗ ಪೂಜೆ ಮಾಡಿದ ಬಳಿಕವೇ ಪ್ರಸಾದ ಸ್ವೀಕರಿಸಬೇಕು. ನಂತರ ತಮ್ಮ ಕಾಯಕದಲ್ಲಿ ಶ್ರದ್ಧಾ–ಭಕ್ತಿಯಿಂದ ತೊಡಗಿಸಿಕೊಳ್ಳಬೇಕು ಎಂದರು.

ಕನಕಪುರದ ದೇಗುಲ ಮಠದ ಕಿರಿಯ ಸ್ವಾಮೀಜಿಗಳಾದ ಚನ್ನ ಬಸವಸ್ವಾಮೀಜಿ ಮಾತನಾಡಿ, ನಾವು ಮಾಡುವ ಸಾಧನೆ ನಮ್ಮ ಜೀವನದ ನಂತರವೂ ಇರುತ್ತೆ ಎನ್ನುವುದಕ್ಕೆ ಶಿವಕುಮಾರ ಶ್ರೀಗಳು ತಾಜಾ ನಿದರ್ಶನವಾಗಿದ್ದಾರೆ.

ನಾಳೆ ಕಾಯಕ ಮಾಡೋಣ ಎಂಬುದರ ಬದಲು ಇಂದೇ ಮಾಡೋಣ ಎಂಬ ಪರಿಕಲ್ಪನೆಯನ್ನು ನಾವೆಲ್ಲವೂ ಮಾಡೋಣ ಎಂದರು. ಸಮಾರಂಭದಲ್ಲಿ ಗುಂಡೇಗಾಲ ಮಠಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಹೊಸಳ್ಳಿ ಶ್ರೀ ಸಿದ್ದಮಲ್ಲೇಶ್ವರ ಪಠಮಠದ ಶ್ರೀ ಓಂಕಾರೇಶ್ವರ ಸ್ವಾಮೀಜಿ, ಭಿಕ್ಷದ ಮಠದ ಶ್ರೀ ಶಿವಪ್ಪ ಸ್ವಾಮಿಜೀ, ವೀರಶೈವ ಮುಖಂಡರು. ಬಸವ ಸೇವಾ ಸಮಿತಿಯ ಬಸವ ರಾಜಪ್ಪ, ಲೋಕೇಶ್, ಮಹದೇವಸ್ವಾಮಿ ಅಚ್ಗಾಲ್, ಮಲ್ಲೇಶಪ್ಪ ವೀರಶೈವ ನೌಕರರ ಸಂಘದ ಅಧ್ಯಕ್ಷರು ನಂದೀಶ್, ವೀರಭದ್ರ ಸ್ವಾಮಿ, ಪ್ರಸಾದಸ್ವಾಮಿ, ಮಹದೇವಸ್ವಾಮಿ, ಸೋಮಶೇಖರಪ್ಪ, ಶಿವಕುಮಾರಸ್ವಾಮಿ, ಶಾಂತಮೂರ್ತಿ, ವೀರಮಾಧು ಇದ್ದರು

ನಾಳೆಯಿಂದ ಶಾಲೆಗಳು ಆರಂಭ

ಮೊದಲ ದಿನವೇ ತಳಿರು–ತೋರಣಕಟ್ಟೆ ಸ್ವಾಗತ, ಮಕ್ಕಳಿಗೆ ಸಿಹಿ ಹಂಚಿಕೆಗೆ ಸಿದ್ಧತೆ

ಮೊದಲ ದಿನವೇ ಪಠ್ಯ ಪುಸ್ತಕ ವಿತರಣೆ

ಈ ಬಾರಿ ಶೈಕ್ಷಣಿಕ ವರ್ಷ ಆರಂಭಕ್ಕೂ ಮೊದಲು ಜಿಲ್ಲೆಗೆ ಅಗತ್ಯವಾದ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ಸರಬರಾಜಾಗಿದ್ದು, ಮಕ್ಕಳಿಗೆ ಶಾಲೆ ಆರಂಭದ ಮೊದಲ ದಿನವೇ ಪಠ್ಯಪುಸ್ತಕ ಹಾಗೂ ಸಮವಸ್ತ್ರ ನೀಡಲು ಶಿಕ್ಷಣ ಇಲಾಖೆ ಸಿದ್ಧತೆ ಮಾಡಿಕೊಂಡಿದೆ.

ಚಾಮರಾಜನಗರ, ಮೇ 27– ಜಿಲ್ಲಾದ್ಯಂತ ಮೇ 29 ರಿಂದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಆರಂಭವಾಗಲಿದ್ದು, ಇದಕ್ಕಾಗಿ ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಶಾಲೆಗಳಿಗೆ ತಳಿರು ತೋರಣಗಳನ್ನು ಕಟ್ಟುವುದು, ಶಾಲೆಯ ಆವರಣ ಪ್ರವೇಶಿಸುವ ಮಕ್ಕಳಿಗೆ ಸಿಹಿ ತಿನಿಸುಗಳನ್ನು ನೀಡುವುದು, ಹೂ ಕೊಡುವ ಮೂಲಕ ಅವರನ್ನು ಆತ್ಮೀಯವಾಗಿ ಶಾಲೆಗೆ ಸ್ವಾಗತಿಸಲು ಸಜ್ಜಾಗಿದ್ದಾರೆ.

ಶಾಲೆ, ತರಗತಿ ಕೊಠಡಿ, ಶಾಲಾ ಆವರಣ ಶುಚಿತ್ವಕ್ಕಾಗಿ ಶಾಲಾ ಪ್ರಾರಂಭದ ಹಿಂದಿನ ದಿನವೇ ಶಿಕ್ಷಕರು ಶಾಲೆಗೆ ಹಾಜರಾಗಿ ಅಗತ್ಯ ಕ್ರಮ ವಹಿಸುತ್ತಿದ್ದಾರೆ. ಶಾಲೆಯನ್ನು ಹಸಿರು ತೋರಣಗಳಿಂದ ಸಿಂಗರಿಸಿ ಮಕ್ಕಳನ್ನು ವಿಶೇಷವಾಗಿ ಮುಖ್ಯಶಿಕ್ಷಕರು, ಸಹಶಿಕ್ಷಕರು ಆಹ್ವಾನಿಸಲಿದ್ದಾರೆ.

ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳಿಗೆ ಡಿಡಿಪಿಐ ಮಂಜುನಾಥ್ ಸೂಚನೆಗಳನ್ನು ನೀಡಿದ್ದು, ಶಾಲೆಯ ಪ್ರಾರಂಭೋತ್ಸವದಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸುವಂತೆ ನಿರ್ದೇಶಿಸಿದ್ದಾರೆ.

ಮೊದಲ ದಿನವೇ ತರಗತಿವಾರು ಮಕ್ಕಳ ನೋಂದಣಿ ಮಾಡಿಕೊಳ್ಳಬೇಕು. ಮಕ್ಕಳಿಗೆ ಬೇಸರವಾಗದ ಹಾಗೆ ಮೊದಲ ಎಲ್ಲರೂ ಕಾರ್ಯನಿರ್ವಹಿಸಬೇಕು. ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರಗಳನ್ನು ನೀಡಬೇಕು ಎಂದು ಹೇಳಿದ್ದಾರೆ.

ಮುಖ್ಯಶಿಕ್ಷಕರು, ಸಹಶಿಕ್ಷಕರು ವಿಶೇಷ ಆಹ್ವಾನಿತರಾಗಿ ಎಸ್‌ಡಿಎಂಸಿ ಹಾಗೂ ಪೋಷಕರನ್ನು ಶಾಲೆಗೆ ಕರೆಸಿ ಇಲಾಖೆ ತೆಗೆದುಕೊಂಡಿರುವ ಕಾರ್ಯಕ್ರಮಗಳನ್ನು ಮನವರಿಕೆ ಮಾಡಿಕೊಡಲಾಗುವುದು. ಈಗಾಗಲೇ ಇಲಾಖೆಯಿಂದ 2023–24ನೇ ಸಾಲಿನ ಶೈಕ್ಷಣಿಕ ಮಾರ್ಗಸೂಚಿ ಯನ್ನು ಬಿಡುಗಡೆಗೊಳಿಸಿದ್ದು ಅದರಂತೆ ಶಾಲೆಯಲ್ಲಿ ಅನುಪಾಲನೆ ಮಾಡಲು ಕ್ರಮವಹಿಸಲಾಗಿದೆ.

ಅನುದಾನ ರಹಿತ ಶಾಲೆಗಳಲ್ಲಿ ಪಡೆಯುವ ಶುಲ್ಕವನ್ನು ಶಾಲಾ ಪ್ರಕಟಣಾ ಫಲಕದಲ್ಲಿ ವೆಬ್‌ಸೈಟ್‌ನಲ್ಲಿ ಮತ್ತು ಎಸ್‌ಎಟಿಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಪ್ರಕಟಿಸಿ ಪೋಷಕರು ವೀಕ್ಷಿಸಲು ಸಹಕಾರಿಯಾಗುವಂತೆ ಸೂಚಿಸಲಾಗಿದೆ.

ಮಂತ್ರಿ ಸ್ಥಾನ ನೀಡದಿದ್ದರೆ ಚಾ.ನಗರ ಬಂದ್

ಚಾ.ನಗರದಲ್ಲಿ ಅಭಿಮಾನಿಗಳ ಪ್ರತಿಭಟನೆ, ಸಚಿವ ಸ್ಥಾನಕ್ಕೆ ಆಗ್ರಹ



ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿ ಅಭಿಮಾನಿಗಳು ಚಾಮರಾಜನಗರ ಪಟ್ಟಣದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಮೇ 27– ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಒತ್ತಾಯಿಸಿ ಅಭಿಮಾನಿಗಳು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ನಗರದ ಶ್ರೀ ಚಾಮರಾಜೇಶ್ವರಿ ದೇವಸ್ಥಾನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ ಕೆಲಕಾಲ ರಸ್ತೆತಡೆ ನಡೆಸಿ, ಸಚಿವ ಸ್ಥಾನಕ್ಕೆ ಆಗ್ರಹಿಸಿದರು. ಸೋಲಿಲ್ಲದ ಸರದಾರರು, ಶಾಸಕ ಸಿ.ಪುಟ್ಟರಂಗಶೆಟ್ಟರಿಗೆ ಕಾಂಗ್ರೆಸ್ ವರಿಷ್ಠರು ಸಚಿವ ಸ್ಥಾನ ನೀಡಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರ ಒಂದು ಹೈವೋಲ್ಟೇಜ್ ಕ್ಷೇತ್ರವಾಗಿದ್ದು ರಾಜ್ಯದ ಗಮನ ಸೆಳೆದಿತ್ತು. ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿದ್ದ ರಾಜ್ಯ ಮಟ್ಟದ ನಾಯಕ, ಮುಖ್ಯಮಂತ್ರಿ ಅಭ್ಯರ್ಥಿಯಾದ ವಿ.ಸೋಮಣ್ಣ ಅವರ ವಿರುದ್ಧ ನಾಲ್ಕನೆಯ ಬಾರಿಯೂ ಪ್ರಚಂಡ ಗೆಲುವು ಸಾಧಿಸಿರುವ ಬಡವರ ಬಂಧು ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ನೀಡಬೇಕು.ಇಲ್ಲದಿದ್ದರೆ. ಮುಂದಿನ ದಿನಗಳಲ್ಲಿ ಚಾಮರಾಜನಗರ ಬಂದ್ ಕರೆ ನೀಡಲಾಗುವುದು ಎಂದು ಪ್ರತಿಭಟನಾನಿತರು ಎಚ್ಚರಿಸಿದರು

ಶಾಸಕ ಸಿ.ಪುಟ್ಟರಂಗಶೆಟ್ಟರು ಈ ಬಾರಿ ಉಪಮುಖ್ಯಮಂತ್ರಿಯಾಗುತ್ತಾರೆ ಎಂದು ರಾಜ್ಯದಲ್ಲೇ ಉಪ್ಪಾರ ಸಮುದಾಯ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಮತ ನೀಡುವ ಮೂಲಕ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಬರಲು ಕಾರಣವಾಗಿದೆ. ಇದನ್ನು ಕಾಂಗ್ರೆಸ್ ವರಿಷ್ಠರು ಮನಗಂಡು ಪುಟ್ಟರಂಗಶೆಟ್ಟರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕಿತ್ತು. ಆದರೆ ಸಮುದಾಯದ ಏಕೈಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಮಂತ್ರಿ ಸ್ಥಾನ ನೀಡದೆ ಡೆಪ್ಯೂಟಿ ಸ್ಪೀಕರ್ ಸ್ಥಾನ ನೀಡಿರುವುದು ಸರಿಯಲ್ಲ. ಅವರಿಗೆ ಸಚಿವ ಸ್ಥಾನ ನೀಡಬೇಕು ಇಲ್ಲದಿದ್ದರೆ ಮುಂಬರುವ ಜಿ.ಪಂ, ತಾಪಂ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕಾಗುತ್ತದೆ ಪ್ರತಿಭಟನಾನಿರತರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯರಾದ ಕಾವೇರಿ ಶಿವಕುಮಾರ್, ರಮೇಶ್, ನಗರಸಭಾ ಸದಸ್ಯ ಬಸವಣ್ಣ, ಮಾಜಿ ಸದಸ್ಯ ಕೆಂಪರಾಜು, ಮುಖಂಡರಾದ ಮಂಗಲ ಶಿವಣ್ಣ, ಕೆ.ಟಿ.ನಾಗಶೆಟ್ಟಿ, ಕೋಡಿಮೋಳೆ ಗೋವಿಂದಶೆಟ್ಟಿ, ಪೈನಾಪಲ್ ಮಂಜು, ಮಹದೇವಸ್ವಾಮಿ, ಜಿಲ್ಲಾ ಉಪ್ಪಾರ ಯುವಕ ಸಂಘದ ಅಧ್ಯಕ್ಷ ಜಯಕುಮಾರ್, ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಬೂದಿತಿಟ್ಟು ಲಿಂಗರಾಜು, ಸ್ವಾಮಿ, ಭಾಗವಹಿಸಿದ್ದರು. ಮಹೇಶ್ ಕುದೇರು, ಕಾಗಲವಾಡಿ ಚಂದ್ರು, ಮಹದೇವಶೆಟ್ಟಿ, ಸುರೇಶ್ ವಾಜಪೇಯಿ, ನಂಜುಂಡಸ್ವಾಮಿ, ರಮೇಶ್, ಉಪ್ಪಾರ ಸಮುದಾಯದ ಯಜಮಾನರುಗಳು ಹಾಗೂ ಪುಟ್ಟರಂಗಶೆಟ್ಟರ ಅಭಿಮಾನಿಗಳು ಭಾಗವಹಿಸಿದ್ದರು.

ಪುಟ್ಟರಂಗಶೆಟ್ಟರು ವಿಧಾನಸಭಾ ಉಪಾಧ್ಯಕ್ಷ

ಹುದ್ದೆಯ ಬಗ್ಗೆ ಶಾಸಕರಿಗೆ ಹಿಂಜರಿಕೆ, ಗೊಂದಲ

ಚಾಮರಾಜನಗರ, ಮೇ 27– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಸತತವಾಗಿ ನಾಲ್ಕು ಬಾರಿ ಗೆಲುವು ಸಾಧಿಸಿ ಜಿಲ್ಲೆಯ ರಾಜಕೀಯ ಕ್ಷೇತ್ರದಲ್ಲಿ ದಾಖಲೆ ಸೃಷ್ಟಿಸಿದ್ದ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ರಾಜ್ಯ ಸರ್ಕಾರ ಉಪಸಭಾಪತಿ ಹುದ್ದೆ ನೀಡಿದೆ. ಆದರೆ, ಈ ಹುದ್ದೆಯ ಬಗ್ಗೆ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಗೊಂದಲ ಉಂಟಾಗಿದೆ.



ಎರಡನೇ ಪಟ್ಟಿಯಲ್ಲೂ ಜಿಲ್ಲೆಗೆ ನಿರಾಶೆ

ಚಾಮರಾಜನಗರ: ರಾಜ್ಯದ ನೂತನ ಕಾಂಗ್ರೆಸ್ ಸರ್ಕಾರದ ಸಚಿವ ಸಂಪುಟ ವಿಸ್ತರಣೆ ಸಂಬಂಧ ಸರ್ಕಾರ ನೂತನ ಸಚಿವರ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಈ ಪಟ್ಟಿಯಲ್ಲಿಯೂ ಜಿಲ್ಲೆಯ ಶಾಸಕರಿಗೆ ಅವಕಾಶವಿಲ್ಲದೆ ನಿರಾಶೆ ಮೂಡಿಸಿದೆ.

ಜಿಲ್ಲೆಯ ಹಿರಿಯ ಹಾಗೂ ಪ್ರಭಾವಿ ನಾಯಕರಾಗಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಸಿಕ್ಕೆ ಸಿಗ್ತುತ್ತದೆ ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ, ಕಾಂಗ್ರೆಸ್ ಹೈಕಮಾಂಡ್ ಕೊನೆ ಕ್ಷಣದಲ್ಲಿ ಅವರ ಹೆಸರನ್ನು ಕೈ ಬಿಡುವ ಮೂಲಕ ಸ್ಥಳೀಯರಿಗೆ ಜಿಲ್ಲೆಯ ಸಚಿವ ಸ್ಥಾನ ದೊರೆಯುವ ಅವಕಾಶವಿಲ್ಲದಂತಾಗಿದೆ.

ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ದೊರೆಯದ ಹಿನ್ನೆಲೆಯಲ್ಲಿ ಅವರ ಬೆಂಬಲಿಗರು, ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರಿಗೆ ನಿರಾಸೆ ಮೂಡಿಸಿದೆ.

> ನನ್ನನ್ನು ಸಂಪುಟದಿಂದ ದೂರು ಇಡಲು ಕಾರಣವೇನು ಎಂದು ತಿಳಿದುಕೊಂಡು, ಉಪಾಧ್ಯಕ್ಷರಾಗಿ ಕೆಲಸ ಮಾಡಬೇಕೋ ಬೇಡವೋ ಎಂದು ತೀರ್ಮಾನ ಮಾಡುತ್ತೇನೆ. ವರಿಷ್ಠರು ಹಾಗೂ ರಾಜ್ಯ ನಾಯಕರ ಜೊತೆ ಚರ್ಚೆ ಮಾಡುತ್ತೇನೆ. ನನಗೆ ನನ್ನ ಕ್ಷೇತ್ರ ಮುಖ್ಯ
> –ಸಿ.ಪುಟ್ಟರಂಗಶೆಟ್ಟಿ, ಶಾಸಕರು.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಹಿರಿಯ ನಾಯಕ ವಿ.ಸೋಮಣ್ಣ ಎದುರು ತೀವ್ರ ಹಣಾಹಣಿ ನಡೆದು ನಾಲ್ಕನೇ ಬಾರಿ ಗೆಲುವು ದಾಖಲಿಸುವಲ್ಲಿ ಪುಟ್ಟರಂಗಶೆಟ್ಟಿ ಯಶಸ್ವಿಯಾಗಿದ್ದರು. ಅಲ್ಲದೇ ಜಿಲ್ಲೆಯ ಹಿರಿಯ ಹಾಗೂ ಪ್ರಭಾವಿ ನಾಯಕರಾಗಿದ್ದರು. ಹೀಗಾಗಿ, ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಇವರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ನಿರೀಕ್ಷೆ ಮಾಡಲಾಗಿತ್ತು.

ರಾಜಕೀಯ ವಲಯದಲ್ಲಿ ಉಂಟಾದ ಕೆಲವೊಂದು ಬದಲಾದ ಸನ್ನಿವೇಶದಿಂದ ಪುಟ್ಟರಂಗಶೆಟ್ಟರಿಗೆ ಸಚಿವ ಸ್ಥಾನ ಕೊನೆಯ ಕ್ಷಣದಲ್ಲಿ ಕೈ ತಪ್ಪಿ, ಉಪಸಭಾಪತಿ ಹುದ್ದೆ ನೀಡಲಾಗಿದೆ. ಈ ಹುದ್ದೆಯ ಬಗ್ಗೆ ಪುಟ್ಟರಂಗಶೆಟ್ಟರು ಹಿಂಜರಿಕೆ ಹೊಂದಿದ್ದಾರೆ ಎನ್ನಲಾಗಿದೆ. ಸಚಿವ ಸ್ಥಾನ ಬೇಕು ಎನ್ನುವುದು ಅವರ ನಿಲುವಾಗಿತ್ತು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳದೆ ಮೂರ್‍ನಾಲ್ಕು ದಿನಗಳ ಕಾಲಾವಕಾಶ ಪಡೆದುಕೊಂಡು ನಂತರ ಉಪಸಭಾಪತಿ ಹುದ್ದೆಯಲ್ಲಿ ಮುಂದುವರಿಯ ಬೇಕೊ ಅಥವಾ ಬೇಡವೂ ಎಂಬ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಶಾಸಕರ ಆಪ್ತ ವಲಯದಿಂದ ಕೇಳಿ ಬರುತ್ತಿದೆ.

ಮನವೊಲಿಕೆಗೆ ಸಿಎಂ ಯತ್ನ: ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಪುಟ್ಟರಂಗಶೆಟ್ಟಿ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಉಪಸಭಾಪತಿ ಹುದ್ದೆ ನೀಡಿದೆ. ಆದರೆ, ಈ ಬಗ್ಗೆ ಅವರಿಗೆ ಹೆಚ್ಚಿನ ಒಲವು ಇಲ್ಲದ ಕಾರಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವೊಲಿಕೆ ಮಾಡುತ್ತಿದ್ದಾರೆ ಎನ್ನಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಉಪ ಸಭಾಪತಿ ಸ್ಥಾನದಲ್ಲಿ ಮುಂದುವರಿಯುವಂತೆ ಹಾಗೂ ಮುಂದಿನ ದಿನಗಳಲ್ಲಿ ಉತ್ತಮ ಅವಕಾಶ ನೀಡುವುದಾಗಿಯೂ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ ಎನ್ನಲಾಗಿದೆ.

ಅಭಿಮಾನಿಗಳ ಬೇಸರ: ಪುಟ್ಟರಂಗಶೆಟ್ಟಿ ಅವರಿಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ ಎನ್ನುವ ಭರವಸೆ ಇತ್ತು. ಸೂಕ್ಷ್ಮಾತಿ ಸೂಕ್ಷ್ಮ ಸಮಾಜಕ್ಕೆ ಸೇರಿರುವ ಇವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಖಾತೆಯೇ ಸಿಗುತ್ತದೆ ಎಂದು ಹೇಳಲಾಗುತ್ತಿತ್ತು. ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದರು. ಈ ಸಲವೂ ಮಂತ್ರಿಗಿರಿ ದೊರೆಯುತ್ತದೆ ಎಂದು ಅಭಿಮಾನಿಗಳು ಪ್ರಮಾಣವಚನಕ್ಕೂ ಮುನ್ನವೇ ಅಭಿನಂದನೆ, ಸಂಭ್ರಮಾಚರಣೆಯ ಸಂದೇಶಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಶೇರ್ ಮಾಡಿದ್ದರು. ಆದರೆ, ಈಗ ಚಾಮರಾಜನಗರ ಜಿಲ್ಲೆಗೆ ಸಚಿವ ಸ್ಥಾನ ಸಿಗುತ್ತಿಲ್ಲ. ಸಾಮಾಜಿಕ ನ್ಯಾಯದ ಪ್ರಕಾರ ಸಿ.ಪುಟ್ಟರಂಗಶೆಟ್ಟಿಗೆ ಮಂತ್ರಿ ಮಂಡಲದಲ್ಲಿ ಸ್ಥಾನ ಸಿಗಬೇಕಿತ್ತು ಎಂದು ಅವರ ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಚಾಮರಾಜನಗರ ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಮೇ 27– ಚಾಮರಾಜನಗರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2023ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳು ವೆಬ್‌ಸೈಟ್ www.cite.karnataka.gov.in ಅಥವಾ ಸಂಸ್ಥೆಯ ಹೆಲ್ಪ್‌ಡೆಸ್ಕ್ ಮೂಲಕ ಜೂನ್ 7ರವರೆಗೆ ಅರ್ಜಿ ಸಲ್ಲಿಸಬಹುದು. 2 ವರ್ಷಗಳ ಅವಧಿಯ ಫಿಟ್ಟರ್, ಎಲೆಕ್ಟ್ರೀಷಿಯನ್ (ಇ.ಎನ್), ಮೆಕಾನಿಕ್ ಎಲೆಕ್ಟ್ರಿಕ್ ವೆಹಿಕಲ್ ಎಂ.ಇ.ವಿ ಮತ್ತು ಅಡ್ವಾನ್ಸ್‌ಡ್ ಸಿ.ಎನ್.ಸಿ ಕೋರ್ಸ್‌ಗಳಿಗೆ ಅವಕಾಶವಿದೆ. ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ಮೊ.ಸಂಖ್ಯೆ: 9964706148 ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರಾದ ಹೆಚ್.ಪಿ ಶ್ರೀಕಂಠಾರಾಧ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರನ್ನು ದಡದ ಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಹೇಶ್, ಉಮೇಶ್, ನಂಜುಂಡ ಅಭಿನಂದಿಸಿದರು.

ರಾಜಕಾಲುವೆ, ದೊಡ್ಡ ಮೋರಿ ಸ್ವಚ್ಛತಾ ಕಾರ್ಯ ಆರಂಭ

●ಸಣ್ಣ ಮೋರಿ, ಚರಂಡಿ ಸ್ವಚ್ಛತೆಗಾಗಿ ಪ್ರತಿ ವಾರ್ಡ್‌ಗೆ ಲಕ್ಷ ರೂ. ಬಿಡುಗಡೆ ●ಅಪಾಯಕಾರಿ ಮರ, ರೆಂಬೆ ತೆರವು ಕಾರ್ಯಾಚರಣೆ ಆರಂಭ ●ಮಳೆ, ಗಾಳಿಯಿಂದ ಹಾನಿ ತಡೆಗೆ ಮೈಸೂರು ನಗರಪಾಲಿಕೆ ಕ್ಷಿಪ್ರ ಕಾರ್ಯ





ಮೈಸೂರು, ಮೇ 27(ಆರ್‌ಕೆ)–ಬೆಂಗಳೂರಿನಂತೆ ಮೈಸೂರಲ್ಲಿ ಮಳೆ–ಗಾಳಿಯಿಂದ ಅನಾಹುತವಾಗುವುದನ್ನು ತಡೆಯಲು ಮೈಸೂರು ಮಹಾನಗರ ಪಾಲಿಕೆ ಮುಂಜಾಗ್ರತಾ ಕ್ರಮ ವಹಿಸುತ್ತಿದೆ.

ನಗರದಾದ್ಯಂತ ಹಾದು ಹೋಗಿರುವ ರಾಜಕಾಲುವೆ, ದೊಡ್ಡ ಮೋರಿಗಳಲ್ಲಿ ಹೂಳು ತುಂಬಿರುವುದಲ್ಲದೆ, ಗಿಡ–ಗಂಟಿ ಬೆಳೆದು ನೀರು ಹರಿದು ಹೋಗಲು ಅಡ್ಡಿಯಾಗುತ್ತಿರುವ ಬಗ್ಗೆ ಇಂದು ಮೇಯರ್ ಶಿವಕುಮಾರ್ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಮೇಟಗಳ್ಳಿಯ ಕರಕುಶಲನಗರ ರಿಂಗ್ ರಸ್ತೆ, ದಟ್ಟಗಳ್ಳಿ ಭಾಗದ ಹಲವೆಡೆಗೆ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಳೆ ನೀರು ಹರಿದು ಹೋಗಲು ಅಡ್ಡಿಯಾಗಿರುವ ಹೂಳು, ಗಿಡ–ಗಂಟಿ ತೆರವುಗೊಳಿಸಿ ಸ್ವಚ್ಛ ಮಾಡುವ ಕಾರ್ಯವನ್ನು ಇಂದಿನಿಂದಲೇ ಆರಂಭಿಸಬೇಕೆಂದು ಆಯಾ ಪಾಲಿಕೆ ವಲಯ ಕಚೇರಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು, ಮಳೆಯಿಂದ ನೀರು ಚರಂಡಿಯಲ್ಲಿ ಉಕ್ಕಿ ಹರಿಯದಂತೆ ಎಚ್ಚರ ವಹಿಸಬೇಕೆಂದು ತಾಕೀತು ಮಾಡಿದರು.

ಅದೇ ರೀತಿ ಸಣ್ಣ ಮೋರಿ, ಚರಂಡಿಗಳನ್ನು ಸ್ವಚ್ಛಗೊಳಿಸಲು ವಾರ್ಡ್‌ಗೆ ಒಂದು ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿದ್ದು, ಮೈಸೂರು ನಗರದ ಎಲ್ಲಾ 65 ವಾರ್ಡ್‌ಗಳಲ್ಲೂ ಪಾಲಿಕೆ ಅಧಿಕಾರಿಗಳು ಚರಂಡಿ ಸ್ವಚ್ಛತೆ ಕೆಲಸವನ್ನು ಆರಂಭಿಸಿದ್ದಾರೆ. ಆಯಾ ಕಾರ್ಪೊರೇಟರ್‌ಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ತ್ವರಿತಗತಿಯಲ್ಲಿ ಕಾಮಗಾರಿ ಮಾಡುವಂತೆ ಮೇಯರ್ ಶಿವಕುಮಾರ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೇರು ಸಮೇತ ಬೀಳುವ ಮರಗಳು, ಒಣಗಿದ ರೆಂಬೆಗಳು, ಅಪಾಯ ತಂದೊಡ್ಡುವ ವಿದ್ಯುತ್ ಕಂಬಗಳನ್ನು ಗುರ್ತಿಸಿ ತೆರವುಗೊಳಿಸಬೇಕು. ಅರಣ್ಯ ಇಲಾಖೆಗೆ ಮಾಹಿತಿ ನೀಡಿ ಅವರ ಅನುಮತಿಗೆ ಕಾಯದೇ ಪಾಲಿಕೆ ಅಧಿಕಾರಿಗಳೇ ಖಾಸಗಿ ಕೆಲಸಗಾರರಿಂದಲೇ ಕೆಲಸ ಮಾಡಿಸಿ ಬಿಲ್ ಪಾವತಿಸಬೇಕು. ಕೇವಲ ನಗರಪಾಲಿಕೆ ಅಭಯ ತಂಡಗಳನ್ನು ಅವಲಂಬಿಸಬಾರದು ಎಂದು ಅವರು ತಿಳಿಸಿದ್ದಾರೆ.

> ಇನ್ನು ಮುಂದೆ ಮಳೆ, ಗಾಳಿಯಿಂದ ಪ್ರಾಣ ಹಾನಿ, ಆಸ್ತಿ–ಪಾಸ್ತಿ ನಷ್ಟ ಉಂಟಾದರೆ ಆಯಾ ವ್ಯಾಪ್ತಿಯ ಪಾಲಿಕೆ ವಲಯ ಕಚೇರಿ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ಕ್ಷಿಪ್ರ ಕಾರ್ಯಾಚರಣೆಗೆ ಹೆಚ್ಚುವರಿ ಅನುದಾನವನ್ನು ಬೇಡಿಕೆ ಸಲ್ಲಿಸಿ ಪಡೆಯಬೇಕೇ ಹೊರತು, ಹಣಕಾಸು ನೆಪ ಹೇಳಿ ಕಾಮಗಾರಿ ನಿಲ್ಲಿಸುವಂತಿಲ್ಲ.
> –ಶಿವಕುಮಾರ್, ಮೇಯರ್

ಕುಪ್ಪಣ್ಣ ಪಾರ್ಕ್‌ನಲ್ಲಿ ಮಾವು ಮೇಳ: ಖರೀದಿ ಜೋರಣ್ಣಾ

ಮಾವಿನ ಹಣ್ಣಿನೊಂದಿಗೆ ಮೇಳದಲ್ಲಿ ಹಲಸಿನ ಘಮಲು





ಮೈಸೂರು, ಮೇ 27(ಎಂಟಿವೈ)–ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ತೋಟಗಾರಿಕಾ ಇಲಾಖೆ ಆಯೋಜಿಸಿರುವ ಮಾವು ಮೇಳಕ್ಕೆ 2ನೇ ದಿನವಾದ ಶನಿವಾರ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ, ಗ್ರಾಹಕರು ಮಾವಿನ ಹಣ್ಣಿನೊಂದಿಗೆ ಹಲಸಿನ ಹಣ್ಣಿನ ರುಚಿ ಸವಿದು ಆನಂದಿಸಿದರು.

ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಪ್ರವಾಸಕ್ಕೆಂದು ಮೈಸೂರಿಗೆ ವಿವಿಧೆಡೆಯಿಂದ ಆಗಮಿಸಿದ್ದ ಪ್ರವಾಸಿಗರು ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೆ ಲಗ್ಗೆ ಇಟ್ಟರು. ಇದರಿಂದ ಮಾವು ಮೇಳದಲ್ಲಿ ಬೆಳಗ್ಗಿನಿಂದ ರಾತ್ರಿವರೆಗೂ ಜನಜಂಗುಳಿ ಹೆಚ್ಚಾಗಿತ್ತು.

ಮೇಳದಲ್ಲಿ ತೆರೆಯಲಾಗಿರುವ 28 ಮಳಿಗೆಗಳಲ್ಲೂ ಗ್ರಾಹಕರು ಮಾವು ಖರೀದಿಸಿದರು. ಗ್ರಾಹಕರ ಸಂಖ್ಯೆ ಹೆಚ್ಚಾಗಿದ್ದರಿಂದ ಭರ್ಜರಿ ವ್ಯಾಪಾರ ನಡೆಯಿತು.

ಹಲಸಿನ ಹಣ್ಣನ್ನು ತಂದಿದ್ದ ರೈತರೊಬ್ಬರು ಅಲ್ಲಿಯೇ ಹಲಸಿನ ಹಣ್ಣನ್ನು ಕೊಯ್ದು ಹಲಸಿನ ತೊಳೆಯನ್ನು ಮಾರಾಟ ಮಾಡಿದರು. ಹಲಸಿನ ಘಮಲಿನೊಂದಿಗೆ ಎಲ್ಲರೂ ರುಚಿಯನ್ನು ಸವಿಯುವಂತೆ ಮಾಡಿದರು. ಇದರಿಂದ ಒಂದು ಕಡೆ ಹಲಸಿನ ಹಣ್ಣು, ಇನ್ನೊಂದು ಕಡೆ ಮಾವಿನ ಹಣ್ಣಿನ ಕಂಪು ಮಾವು ಮೇಳದ ತುಂಬ ಹರಡಿತ್ತು. ಬೆಳಗ್ಗಿನಿಂದ ಸಂಜೆವರೆಗೂ ವಿವಿಧ ತಳಿಯ ಹಣ್ಣುಗಳ ಖರೀದಿ ಜೋರಾಗಿತ್ತು.



ಮೈಸೂರಿನ ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರೂ ಆದ ಬಿಜೆಪಿ ಮೈಸೂರು ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಅವರನ್ನು ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ಬಿ.ಎಂ.ರಘು ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಮುಖಂಡರಾದ ಎಸ್.ಡಿ ಮಹೇಂದ್ರ, ಶ್ರೀಮತಿ ಹೆಚ್.ಜಿ.ರಾಜಮಣಿ, ಈರೇಗೌಡ, ರಾಕೇಶ್‌ಭಟ್, ಶಶಿಕಾಂತ್, ವಿಜಯ ಮಂಜುನಾಥ್, ಪ್ರತಾಪ್, ಗಿರೀಶ್, ಗೀತಾ ಮಹೇಶ್, ಶಿವಕುಮಾರ್, ಲಲಿತ, ರಾಮಬಾಯಿ, ಪದ್ಮಾವತಿ, ರವಿ ಅರಸ್, ರೇಖಾ ನಾಗರಾಜ್, ಹೇಮಲತಾ ಇನ್ನಿತರರಿದ್ದರು.

ಅಸಮಾಧಾನ ಮಾಡಿಕೊಂಡರೆ ನಾನೇನು ಮಾಡಲಿ



ಬೆಂಗಳೂರು, ಮೇ 27– ಸಚಿವ ಸ್ಥಾನ ಕೈ ತಪ್ಪಿದ ಹಿನ್ನೆಲೆಯಲ್ಲಿ ಕೆಲವರು ಅಸಮಾಧಾನಗೊಂಡಿದ್ದಾರೆ. ಆದರೆ, ಇದಕ್ಕೆ ನಾನೇನು ಮಾಡಲು ಸಾಧ್ಯ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನೂ ಕೂಡ ಸಾಕಷ್ಟು ಬಾರಿ ಅವಕಾಶದಿಂದ ವಂಚಿತನಾಗಿದ್ದೆ. ಧರಂಸಿಂಗ್, ಸಿದ್ದರಾಮಯ್ಯ ಅವರ ಸಂಪುಟದಲ್ಲಿ ನನಗೂ ಅವಕಾಶ ಸಿಕ್ಕಿರಲಿಲ್ಲ. ಆದರೆ, ನಾನು ತಾಳ್ಮೆಯಿಂದ ಕಾದಿದ್ದೆ ಎಂದು ಹೇಳಿದರು. ಸಚಿವ ಸ್ಥಾನ ಸಿಗದ್ದಕ್ಕೆ ಅಸಮಾಧಾನ ಮಾಡಿಕೊಂಡರೆ ನಾನು ಏನು ಮಾಡಲು ಆಗುತ್ತೆ. ಮಾತನಾಡುವವರು ಮಾತನಾಡಲಿ. ನಾನೇನು ಮಾತನಾಡುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕರ್ನಾಟಕ ಸಂಗೀತ ತರಗತಿಗಳ ಪ್ರವೇಶಾತಿ ಪ್ರಾರಂಭ

ಮೈಸೂರು, ಮೇ 27– ಮೈಸೂರಿನ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜೂ.1ರಿಂದ ಬುಧವಾರ ಮತ್ತು ಶುಕ್ರವಾರ ಸಂಜೆ 5.30ರಿಂದ 6.30ರವರೆಗೆ ಕರ್ನಾಟಕ ಸಂಗೀತ ತರಗತಿಗಳು ನಡೆಯಲಿವೆ. ಸೋಮವಾರ ಮತ್ತು ಶನಿವಾರ ಸಂಜೆ 6ರಿಂದ 7ರವರೆಗೆ ತಬಲಾ ತರಗತಿಗಳು ನಡೆಯಲಿವೆ. 1ರಿಂದ 7ನೇ ತರಗತಿವರೆಗೆ ವಾರದಲ್ಲಿ 6 ದಿನಗಳು ಬೋಧನಾ ತರಗತಿಗಳು ಪ್ರಾರಂಭವಾಗಲಿವೆ. ಮಾಹಿತಿಗೆ ಸಂಜೆ 4ರಿಂದ 6ರವರೆಗೆ ದೂ. 8861427629, 8971144897 ಸಂಪರ್ಕಿಸಲು ಕೋರಲಾಗಿದೆ.

ನನಗೆ ಚೈತನ್ಯವಿದೆ; 200 ಯೂನಿಟ್ ಉಚಿತ ವಿದ್ಯುತ್ ಪಡೆಯಲು ಮನಸ್ಸಿಲ್ಲ...

●ನಿವೃತ್ತ ಐಎಎಸ್ ಅಧಿಕಾರಿ ಕೆ.ಅಮರನಾರಾಯಣ ನಿರ್ಧಾರ

●ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪತ್ರ



ಬೆಂಗಳೂರು, ಮೇ 27– ಸರ್ಕಾರ ಘೋಷಿಸಿರುವ 200 ಯೂನಿಟ್ ಉಚಿತ ವಿದ್ಯುತ್ ಯೋಜನೆಗೆ ರಾಜ್ಯದ ಲಕ್ಷಾಂತರ ಬಡಜನರು ಅರ್ಹರಾಗಿದ್ದು, ತನ್ನಂತಹ ತೆರಿಗೆ ಪಾವತಿ ಮಾಡುವ ಮತ್ತು ಅನುಕೂಲವಾಗಿರುವವರಿಗೆ ಈ ಸೌಲಭ್ಯದ ಅವಶ್ಯಕತೆ ಕಂಡುಬರುವುದಿಲ್ಲ ಎಂದು ನಿವೃತ್ತ ಐಎಎಸ್ ಅಧಿಕಾರಿಯೂ ಆದ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಮಾಜಿ ಸದಸ್ಯ ಕೆ.ಅಮರನಾರಾಯಣ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಪ್ರತಿಯೊಬ್ಬರಿಗೂ 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡುವುದಾಗಿ ಘೋಷಣೆ ಮಾಡಿರುವುದು ಬಡವರ ಪಾಲಿಗೆ ಆಶಾಕಿರಣವಾಗಿದೆ ಹಾಗೂ ಇದೊಂದು ಸ್ವಾಗತಾರ್ಹ ಯೋಜನೆಯಾಗಿದೆ. ಈ ಯೋಜನೆಯ ಪ್ರಯೋಜನವನ್ನು ನಿಜವಾಗಿ ಅರ್ಹರಾದವರಿಗೆ ಕೊಡುವುದು ಉಚಿತ ಎಂದು ತಾವು ವೈಯಕ್ತಿಕವಾಗಿ ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುವ ಅವರು, ಸರ್ಕಾರ ಕೈಗೊಳ್ಳುವ ನಿರ್ಧಾರಗಳು ಬಡವರ ಮತ್ತು ಅಶಕ್ತರ ಪರವಾಗಿರಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ತಾವು ಆದಾಯ ತೆರಿಗೆ ಪಾವತಿದಾರರಾಗಿ ಚೈತನ್ಯವಿದೆ. ಉಚಿತವಾಗಿ ನೀಡುವ 200 ಯೂನಿಟ್ ವಿದ್ಯುತ್ ಅನ್ನು ಪಡೆದುಕೊಳ್ಳಲು ತಮಗೆ ಮನಸ್ಸಿಲ್ಲವಾಗಿದೆ. ತಾವೊಬ್ಬ ಪರಿಸರ ಪ್ರೇಮಿಯಾಗಿದ್ದು, ತಮ್ಮ ಮನೆಯ ಮೇಲ್ಛಾವಣಿಯಲ್ಲಿ 6.5 ಕೆವಿಎ ಸೌರ ವಿದ್ಯುತ್ ಸೌಕರ್ಯವನ್ನು ಮಾಡಿಕೊಂಡಿದ್ದೇನೆ. ನಾನು ಬಳಸಿ ಹೆಚ್ಚುವರಿ ವಿದ್ಯುತ್ ಅನ್ನು ಬೆಸ್ಕಾಂಗೆ ಪೂರೈಸುತ್ತಿದ್ದು, ಇದರಿಂದ ಕೊಂಚ ಆದಾಯವೂ ಬರುತ್ತಿದೆ. ಹೀಗಾಗಿ ನಾನು ಉಚಿತವಾಗಿ 200 ಯೂನಿಟ್ ವಿದ್ಯುತ್ ಅನ್ನು ಬಳಸಿಕೊಳ್ಳಲು ಇಚ್ಛಿಸುವುದಿಲ್ಲ. ದಯಮಾಡಿ ಬೆಸ್ಕಾಂನವರು ನನಗೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡುವ ಬದಲು ಈ ಸೌಲಭ್ಯವನ್ನು ಒಂದು ಬಡ ಕುಟುಂಬಕ್ಕೆ ನೀಡಬೇಕೆಂದು ಮನವಿ ಮಾಡಿದ್ದಾರೆ.

ಅದೇ ರೀತಿ ಸರ್ಕಾರಿ ಸೇವೆಯಲ್ಲಿರುವ ಮತ್ತು ಚೈತನ್ಯವಿರುವ ಇತರೆ ಸಿ ವರ್ಗದ ನೌಕರರು ಕೂಡ ಇಚ್ಛಾನುಸಾರ ಉಚಿತ ವಿದ್ಯುತ್ ಬಳಸಿಕೊಳ್ಳದಿರುವ ಬಗ್ಗೆ ಸಂಘದ ಮೂಲಕ ಚರ್ಚಿಸಿ ನಿರ್ಧಾರ ಕೈಗೊಳ್ಳಬಹುದಾಗಿದೆ. ಐಟಿ–ಬಿಟಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಮಂದಿ ಕೂಡ ಇದೇ ಮಾರ್ಗವನ್ನು ಅನುಸರಿಸಿ ಮಾದರಿ ಪ್ರಜೆಗಳಾಗಬೇಕು ಎಂದು ಅಮರನಾರಾಯಣ ಅವರು ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

> “ರಾಜ್ಯದ ಎಲ್ಲಾ ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ಮತ್ತು ಇತರ 1ನೇ ಹಾಗೂ 1ನೇ ಶ್ರೇಣಿ ಅಧಿಕಾರಿಗಳು ಈ ಉಚಿತ ಸೌಲಭ್ಯವನ್ನು ಅರ್ಹ ಫಲಾನುಭವಿಗಳಿಗೆ ಬಿಟ್ಟುಕೊಡುವ ಮೂಲಕ ಪ್ರಬುದ್ಧತೆ ಮೆರೆಯಬೇಕು. ನಾವೆಲ್ಲರೂ ಸ್ವಲ್ಪ ತ್ಯಾಗ ಮಾಡುವುದರಿಂದ ನಿಸ್ವಾರ್ಥ ಸೇವೆ ಮಾಡಿದಂತಾಗಿ ನೈಜ ಮತ್ತು ಅರ್ಹ ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯುವಂತಾಗುತ್ತದೆ. ಆದಾಯ ತೆರಿಗೆ ಪಾವತಿ ಮಾಡುವ ಎಲ್ಲಾ ನಿಷ್ಠಾವಂತ ನಾಗರಿಕರು ಇಂತಹ ಉಚಿತ ಸೌಲಭ್ಯವನ್ನು ಸ್ವಇಚ್ಛೆಯಿಂದ ಪಡೆಯದೆ ಬಿಟ್ಟುಕೊಡಬೇಕು. ಆದಾಯ ತೆರಿಗೆ ಪಾವತಿದಾರರಿಗೆ 200 ಯೂನಿಟ್ ವಿದ್ಯುತ್ ದರವನ್ನು ಪಾವತಿಸುವ ಶಕ್ತಿ ಇರುತ್ತದೆ. ಅನುಕೂಲಸ್ಥರು ಹೆಚ್ಚಿನ ಹೊರೆಯನ್ನು ಹೊರಬೇಕು ಎಂಬ ಮಾತು ಅರ್ಥಶಾಸ್ತ್ರದಲ್ಲಿದೆ. ಅದರಂತೆ ನಾವು ನಡೆಯೋಣ. **–ಕೆ.ಅಮರನಾರಾಯಣ**



ಮೈಸೂರು ಮಹಾ ನಗರಪಾಲಿಕೆ ಸಾರ್ವಜನಿಕ ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ಕಾರ್ಪೊರೇಟರ್ ಸವಿತಾ ಸುರೇಶ್ ಅವರನ್ನು ಹೇಮಂತ್‌ಗೌಡ, ಸುರೇಶ್, ಮಂಜು, ಸುಧೀರ್, ನಾರಾಯಣ್, ಮಂಜು ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.



ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಡಾ.ಹೆಚ್.ಸಿ.ಮಹಾದೇವಪ್ಪ ಅವರನ್ನು ಕೆಪಿಸಿಸಿ ಕಾರ್ಯದರ್ಶಿಯೂ ಆದ ವೀರಶೈವ ಲಿಂಗಾಯತ ಹಿರಿಯ ಮುಖಂಡ ಗುರುಪಾದಸ್ವಾಮಿ ಬೆಂಗಳೂರಿನಲ್ಲಿ ಅಭಿನಂದಿಸಿದರು. ಈ ವೇಳೆ ಕೆಪಿಸಿಸಿ ಸಂಯೋಜಕರಾದ ಎನ್.ಎಸ್.ರಾಜೇಂದ್ರ, ಅಕ್ಬರ್ ಇನ್ನಿತರರಿದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಗೆ ನೇಮಕ


ಗೋಪಾಲಕೃಷ್ಣ


ರಮೇಶ್


ಸತ್ಯನಾರಾಯಣ


ಯೋಗನರಸಿಂಹನ್


ರವಿಕುಮಾರ್


ಶಂಕರನಾರಾಯಣ

ಮೈಸೂರು, ಮೇ 27– ಬ್ರಾಹ್ಮಣ ಸಮುದಾಯಕ್ಕೆ ನಿಸ್ಪೃಹತೆಯಿಂದ ನಿರಂತರವಾಗಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಅವರು 2023–24ನೇ ಸಾಲಿನ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಶಂಕರನಾರಾಯಣ–ಮೈಸೂರು, ಕೆ.ಆರ್.ಸತ್ಯನಾರಾಯಣ–ಮೈಸೂರು, ಕೆ.ಆರ್.ಯೋಗಾನರಸಿಂಹನ್–ಮೈಸೂರು, ಎಸ್.ರವಿಕುಮಾರ್–ಮೈಸೂರು, ಸೌಭಾಗ್ಯ ಮೂರ್ತಿ–ಮೈಸೂರು, ಹೆಚ್.ಎಸ್.ರಮೇಶ್ –ಗುಂಡ್ಲುಪೇಟೆ, ಎ.ಗೋಪಾಲಕೃಷ್ಣ–ಮಡಿಕೇರಿ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಉಪಾಧ್ಯಕ್ಷ ನಂ. ಶ್ರೀಕಂಠಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಸೌಭಾಗ್ಯ

ಸಚಿವ ಸಂಪುಟದಲ್ಲಿ ಏಳು ಲಿಂಗಾಯತರಿಗೆ ಸ್ಥಾನ

ಯೋಜನಾ ಆಯೋಗದ ಮುಖ್ಯಸ್ಥರಾಗಿ ಶೆಟ್ಟರ್?

ಬೆಂಗಳೂರು: ಸಚಿವ ಸಂಪುಟ ರಚನೆಗೂ ಮುನ್ನ ತಮ್ಮ ಸಮುದಾಯಕ್ಕೆ 5–6 ಸಚಿವ ಸ್ಥಾನ ಸಿಗುತ್ತದೆ ಎಂದು ವೀರಶೈವ ಲಿಂಗಾಯತರು ನಿರೀಕ್ಷೆಯಲ್ಲಿದ್ದರು. ಈಗ ಸಮುದಾಯಕ್ಕೆ ಏಳು ಸಚಿವ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ನಾಯಕತ್ವವು ಲಿಂಗಾಯತ ಸಮುದಾಯದ ಮಹತ್ವವನ್ನು ಅರ್ಥಮಾಡಿಕೊಂಡಿದೆ ಎಂದು ತೋರುತ್ತದೆ.

ಶಾಮನೂರು ಮಲ್ಲಿಕಾರ್ಜುನ್ (ದಾವಣಗೆರೆ ಉತ್ತರ), ಈಶ್ವರ ಖಂಡ್ರೆ (ಬಾಲ್ಕಿ–ಬೀದರ್), ಲಕ್ಷ್ಮೀ ಹೆಬ್ಬಾಳ್ಕರ್ (ಬೆಳಗಾವಿ ಗ್ರಾಮಾಂತರ), ಶರಣ ಪ್ರಕಾಶ ಪಾಟೀಲ್ (ಸೇಡಂ–ಗುಲ್ಬರ್ಗ), ಶರಣಬಸಪ್ಪ ದರ್ಶನಾಪುರ (ಶಹಾಪುರ–ಯಾದಗಿರಿ) ಮತ್ತು ಶಿವಾನಂದ್ ಪಾಟೀಲ (ಬಸವನಾಬ್ ಪಾಟೀಲ್) 24 ಸಚಿವರ ಪಟ್ಟಿಯಲ್ಲಿದ್ದಾರೆ. ಈಗಾಗಲೇ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುವ ಬಬಲೇಶ್ವರದ ಎಂ.ಬಿ. ಪಾಟೀಲ್ ಸಹ ಲಿಂಗಾಯತ ಸಮುದಾಯಕ್ಕೆ ಸೇರಿದ್ದಾರೆ. ಗದಗದ ಎಚ್.ಕೆ. ಪಾಟೀಲ್ ಸ್ಥಳೀಯವಾಗಿ ಲಿಂಗಾಯತರೇ ಎಂದು ಪರಿಗಣಿತರಾಗಿದ್ದಾರೆ.

2024ರ ಲೋಕಸಭಾ ಚುನಾವಣೆಯಲ್ಲಿ ಹಲವು ಕ್ಷೇತ್ರಗಳಲ್ಲಿ ಚುನಾವಣಾ ಫಲಿತಾಂಶದ ಮೇಲೆ ಸುಲಭವಾಗಿ ಪ್ರಭಾವ ಬೀರುವ ಕಾರಣ, ಕ್ಯಾಬಿನೆಟ್ ಸ್ಥಾನಮಾನದೊಂದಿಗೆ ಯೋಜನಾ ಆಯೋಗದ ಮುಖ್ಯಸ್ಥರಾಗಿ ಜಗದೀಶ್ ಶೆಟ್ಟರ್ ಅವರನ್ನು ಪ್ರಮುಖ ಹುದ್ದೆಯಲ್ಲಿ ಇರಿಸುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ.

ಎಂ.ಬಿ.ಪಾಟೀಲ್, ಎಸ್.ಎಸ್. ಮಲ್ಲಿಕಾರ್ಜುನ್, ಈಶ್ವರ್ ಖಂಡ್ರೆ ಅವರಿಗೆ ಪ್ರಮುಖ ಖಾತೆಗಳು ಸಿಗುವ ನಿರೀಕ್ಷೆ ಇದೆ.

ಸಂಖ್ಯೆಗಳ ಪ್ರಕಾರ, ಇದು ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರದಲ್ಲಿ ಲಿಂಗಾಯತರ ಅತಿ ದೊಡ್ಡ ಪ್ರಾತಿನಿಧ್ಯವಾಗಿದೆ. ಕಾಂಗ್ರೆಸ್ ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಆರು ಲಿಂಗಾಯತ ಸಚಿವರಿದ್ದರು, 2013–18ರ ಕಾಂಗ್ರೆಸ್ ಸರ್ಕಾರ ಏಳು ಲಿಂಗಾಯತ ಸಚಿವರನ್ನು ಹೊಂದಿತ್ತು.

ಆಗಿನ ಸಿಎಂ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಎಂಟು ಲಿಂಗಾಯತರನ್ನು ಹೊಂದಿದ್ದ ಬಿಜೆಪಿಗೆ ಇದು ಸರಿಸಾಟಿಯಲ್ಲ. ಆದರೆ ಈ ಬಾರಿ ಕರ್ನಾಟಕದಲ್ಲಿ ಲಿಂಗಾಯತ ಸಮುದಾಯವು ಸಂಖ್ಯಾತ್ಮಕವಾಗಿ ಅತ್ಯಂತ ಪ್ರಬಲವಾಗಿದೆ ಮತ್ತು ಜನಸಂಖ್ಯೆ ಆಧಾರದ ಮೇಲೆ ಅದು ಶೇ.17–20ರಷ್ಟಿದೆ. ಲಿಂಗಾಯತ ಸಮುದಾಯದ 7 ಸಚಿವರಲ್ಲಿ ಎಲ್ಲಾ ಉಪಜಾತಿಗಳು ಮತ್ತು ಪ್ರದೇಶಗಳಿಗೆ ಅವಕಾಶ ಕಲ್ಪಿಸಲು ಪ್ರಯತ್ನಿಸಲಾಗಿದೆ. ಜಗದೀಶ್ ಶೆಟ್ಟರ್ ಅವರಿಗೆ ಅವಕಾಶ ನೀಡಿದರೆ ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಅನುಕೂಲವಾಗಬಹುದು ಎಂಬ ಲೆಕ್ಕಾಚಾರವಿದೆ. ಲಿಂಗಾಯತರು ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ ಮತ್ತು ಲಿಂಗಾಯತರು ಕಾಂಗ್ರೆಸ್ ಪಕ್ಷವನ್ನು ಅಗಾಧವಾಗಿ ಬೆಂಬಲಿಸಿದ್ದಾರೆ. ಹೀಗಾಗಿ 1989 ರ ಸಮೀಕರಣವನ್ನು ಪುನಃಸ್ಥಾಪಿಸಲು ಪಕ್ಷವು ಶ್ರಮಿಸುತ್ತಿದೆ ಎಂದು ಚುನಾವಣಾ ಫಲಿತಾಂಶಗಳ ವಿಶ್ಲೇಷಣೆಯಿಂದ ತಿಳಿದು ಬಂದಿದೆ ಎಂದು ರಾಜಕೀಯ ವಿಶ್ಲೇಷಕ ಬಿ.ಎಸ್ ಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ.

ಚುನಾವಣೆಯಲ್ಲಿ 34 ಸಮುದಾಯದ ಮುಖಂಡರು ಗೆದ್ದಿದ್ದಾರೆ. ಪಕ್ಷವನ್ನು ಮುನ್ನಡೆಸಲು ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡುತ್ತೇವೆ ಎಂದು ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಖಂಡ್ರೆ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ

ಮೇ 31, ತಂಬಾಕು ದುಷ್ಪರಿಣಾಮ ಜಾಗೃತಿಗಾಗಿ ವಾಕಥಾನ್

ಆಸ್ಪತ್ರೆ ನಿರ್ದೇಶಕಿ ಅಂಜಲಿ ಅಜಯ್‌ಕುಮಾರ್ ಮಾಹಿತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೇ 31ರ ವಾಕಥಾನ್‌ನ ಪೋಸ್ಟರ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು. (ಎಡದಿಂದ) ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿರ್ಮಲ ಕೆ.ಮೂರ್ತಿ, ಮೆಡಿಕಲ್ ಆಂಕೋಲಾಜಿಸ್ಟ್ ಡಾ.ಜಿ.ಹೆಚ್.ಅಭಿಲಾಷ್, ನಿರ್ದೇಶಕಿ ಅಂಜಲಿ ಅಜಯ್ ಕುಮಾರ್, ವಿಕಿರಣ ಆಂಕೋಲಾಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ.ವೈ.ಎಸ್.ಮಾಧವಿ, ವಿಕಿರಣ ಆಂಕೊಲಾಜಿಸ್ಟ್ ಡಾ.ವಿನಯ್ ಮುತ್ತಗಿ, ಸರ್ಜಿಕಲ್ ಆಂಕೊಲಾಜಿಸ್ಟ್ ಡಾ.ರಕ್ಷಿತ್ ಶೃಂಗೇರಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮೇ 27(ಪಿಎಂ)–ತಂಬಾಕು ಸೇವನೆ ಕ್ಯಾನ್ಸರ್‌ಕಾರಕವಾಗಿದ್ದು, ಇದರಿಂದ ಉಂಟಾಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸಲು ಭಾರತ್ ಕ್ಯಾನ್ಸರ್ ಆಸ್ಪತ್ರೆ ವತಿಯಿಂದ ಮೇ 31ರಂದು ವಾಕಥಾನ್ (ನಡಿಗೆ) ಆಯೋಜಿಸಲಾಗಿದೆ ಎಂದು ಆಸ್ಪತ್ರೆ ನಿರ್ದೇಶಕಿ ಅಂಜಲಿ ಅಜಯ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವ ಆರೋಗ್ಯ ಸಂಸ್ಥೆ ಮೇ 31 ಅನ್ನು 'ವಿಶ್ವ ತಂಬಾಕು ರಹಿತ ದಿನ' ಎಂದು ಘೋಷಣೆ ಮಾಡಿದ್ದು, ಪ್ರತಿ ವರ್ಷ ಈ ದಿನವನ್ನು ವಿಶ್ವಾದ್ಯಂತ ಆಚರಿಸಲಾಗುತ್ತಿದೆ. ಅಂತೆಯೇ ಈ ವರ್ಷ 'ನಮಗೆ ಆಹಾರ ಬೇಕು, ತಂಬಾಕು ಅಲ್ಲ' ಎಂಬ ಶೀರ್ಷಿಕೆಯಡಿ ಆಚರಣೆಗೆ ಕರೆ ನೀಡಿದೆ ಎಂದು ಹೇಳಿದರು.

'ವಿಶ್ವ ತಂಬಾಕು ರಹಿತ ದಿನ'ದ ಪ್ರಯುಕ್ತ ಹಮ್ಮಿಕೊಂಡಿರುವ ವಾಕಥಾನ್‌ಗೆ ಅಂದು ಬೆಳಗ್ಗೆ 6.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಚಾಲನೆ ದೊರೆಯಲಿದೆ. ಬಳಿಕ ಚಾಮರಾಜ ಒಡೆಯರ್ ವೃತ್ತ, ಜಯಚಾಮರಾಜ ಒಡೆಯರ್ ವೃತ್ತ, ಬಸವೇಶ್ವರ ವೃತ್ತ, ಸಂಸ್ಕೃತ ಪಾಠಶಾಲಾ ವೃತ್ತ ಸೇರಿದಂತೆ ಮೊದಲಾದ ರಸ್ತೆಗಳಲ್ಲಿ ಸಂಚರಿಸಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಎದುರಿನ ಆವರಣಕ್ಕೆ ಹಿಂತಿರುಗಿ ವಾಕಥಾನ್ ಮುಕ್ತಾಯ ಗೊಳ್ಳಲಿದೆ ಎಂದು ವಿವರಿಸಿದರು.

ನಮ್ಮ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದಿಂದ ಇಡೀ ಮೇನಲ್ಲಿ ಮೈಸೂರಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ತಂಬಾಕು ದುಷ್ಪರಿಣಾಮ ಕುರಿತು ಅರಿವು ಕಾರ್ಯಕ್ರಮಗಳನ್ನು ನಡೆಸಿದೆ. ಇದರ ಮುಂದುವರೆದ ಭಾಗವಾಗಿ ವಾಕಥಾನ್ ಹಮ್ಮಿಕೊಂಡಿದ್ದು, ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕಾಗಿ ನಮ್ಮ ಆಸ್ಪತ್ರೆಯು ಈ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ ಎಂದು ಹೇಳಿದರು.

ಆಸ್ಪತ್ರೆಯ ವಿಕಿರಣ ಆಂಕೋಲಾಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ.ವೈ.ಎಸ್.ಮಾಧವಿ ಮಾತನಾಡಿ, ಜಾಗತಿಕ ವಯಸ್ಕ ತಂಬಾಕು ಸಮೀಕ್ಷೆ 2019ರ ಪ್ರಕಾರ ಸುಮಾರು 267 ಮಿಲಿಯನ್ ಭಾರತೀಯರು ತಂಬಾಕು ಸೇವನೆ ಮಾಡುತ್ತಿದ್ದಾರೆ. ಇವರಲ್ಲಿ 100 ಮಿಲಿಯನಷ್ಟು ಭಾರತೀಯರು, ಬೀಡಿ–ಸಿಗರೇಟ್‌ನಂತಹ ತಂಬಾಕು ಸೇವಿಸುತ್ತಿದ್ದು, ಉಳಿದಂತೆ ಗುಟ್ಕಾ, ಜರ್ದಾ ತಿನ್ನುತ್ತಿದ್ದಾರೆ. ತಂಬಾಕಿನಲ್ಲಿನ ನಿಕೋಟಿನ್ ಎಂಬ ಅಂಶವು ಉತ್ತೇಜಕದಂತೆ ಕೆಲಸ ಮಾಡುತ್ತದೆ. ಹಾಗಾಗಿ ಇದು ವ್ಯಸನಕಾರಿಯಾಗಿ ಪರಿಣಮಿಸಲಿದೆ ಎಂದು ತಿಳಿಸಿದರು.

ತಂಬಾಕಿನಲ್ಲಿ ಸುಮಾರು 7 ಸಾವಿರ ರಾಸಾಯನಿಕ ಅಂಶಗಳಿದ್ದು, ಅದರಲ್ಲಿನ ಶೇ.70ರಷ್ಟು ಅಂಶಗಳು ಕ್ಯಾನ್ಸರ್‌ಕಾರಗಳಾಗಿವೆ. ತಂಬಾಕು ಸೇವನೆಯಿಂದ ಬಾಯಿ, ಗಂಟಲು, ಅನ್ನನಾಳ, ಶ್ವಾಸಕೋಶ, ಜಠರ, ಮೂತ್ರಕೋಶದ ಕ್ಯಾನ್ಸರ್ ಸೇರಿದಂತೆ ಅನೇಕ ರೀತಿಯ ಕ್ಯಾನ್ಸರ್‌ಗೆ ತುತ್ತಾಗಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಆಸ್ಪತ್ರೆಯ ವಿಕಿರಣ ಆಂಕೊಲಾಜಿಸ್ಟ್ ಡಾ.ವಿನಯ್ ಮುತ್ತಗಿ ಮಾತನಾಡಿ, ರಕ್ತದ ಒತ್ತಡ, ಹೃದಯಾಘಾತ, ಪಾರ್ಶ್ವವಾಯು, ಬಂಜೆತನ ಸೇರಿದಂತೆ ಹತ್ತು ಹಲವು ವ್ಯತಿರಿಕ್ತ ಪರಿಣಾಮಗಳನ್ನು ತಂಬಾಕು ಸೇವನೆ ಉಂಟು ಮಾಡಲಿದೆ. ಈ ಎಲ್ಲಾ ಅನಾರೋಗ್ಯ ಸಮಸ್ಯೆಗಳು ವ್ಯಕ್ತಿಗತ ಆರ್ಥಿಕ ಸ್ಥಿತಿಯಲ್ಲಿಯ ದುಷ್ಪರಿಣಾಮಕ್ಕೂ ಕಾರಣವಾಗುವುದಲ್ಲದೆ, ದೇಶದ ಆರ್ಥಿಕತೆ ಸಹ ಕುಂಠಿತಗೊಳಿಸುತ್ತದೆ. 2011ರ ಅಂಕಿ–ಅಂಶಗಳ ಪ್ರಕಾರ ದೇಶದಲ್ಲಿ 35–69 ವರ್ಷ ವಯಸ್ಸಿನವರಲ್ಲಿನ ತಂಬಾಕು ಕಾರಣದ ಅನಾರೋಗ್ಯ ನಿವಾರಣೆಗಾಗಿ 983 ಕೋಟಿಯಷ್ಟು ಆರ್ಥಿಕ ವ್ಯಯವಾಗಿದೆ ಎಂದು ವಿಷಾದಿಸಿದರು.

ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿರ್ಮಲ ಕೆ.ಮೂರ್ತಿ ಮಾತನಾಡಿ, ತಂಬಾಕು ದುಷ್ಪರಿಣಾಮ ಕುರಿತು ಕಿರುಚಿತ್ರ ಮತ್ತು ಕಿರುನಾಟಕ ನಿರ್ಮಾಣದ ಸ್ಪರ್ಧೆ ಕೂಡ ಆಯೋಜಿಸಲಾಗಿದೆ. ಸ್ಪರ್ಧೆ ಮತ್ತು ವಾಕಥಾನ್ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 95388 86601 ಹಾಗೂ 99454 33300 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಆಸ್ಪತ್ರೆಯ ಸರ್ಜಿಕಲ್ ಆಂಕೊಲಾಜಿಸ್ಟ್ ಡಾ.ರಕ್ಷಿತ್ ಶೃಂಗೇರಿ ಸುದ್ದಿಗೋಷ್ಠಿಯಲ್ಲಿದ್ದರು.

ಸೆಕೆಂಡ್ ಹ್ಯಾಂಡ್ ಸ್ಮೋಕಿಂಗ್

ಧೂಮಪಾನ ಸೇವನೆ ಮಾಡುವವರಷ್ಟೇ ಕಾಯಿಲೆಗಳಿಗೆ ತುತ್ತಾಗುವುದಲ್ಲದೆ ಅವರ ಸುತ್ತಮುತ್ತಲಿನ ಜನರೂ ಗಂಭೀರ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಇದನ್ನು 'ಸೆಕೆಂಡ್ ಹ್ಯಾಂಡ್ ಸ್ಮೋಕಿಂಗ್' ಎಂದು ಕರೆಯಲಾಗುತ್ತದೆ. ಇತ್ತೀಚಿನ ಅಂದಾಜಿನ ಪ್ರಕಾರ ಶೇ.38.7ರಷ್ಟು ಭಾರತೀಯರು ಸೆಕೆಂಡ್ ಹ್ಯಾಂಡ್ ಸ್ಮೋಕಿಂಗ್‌ನ ದುಷ್ಪರಿಣಾಮಕ್ಕೆ ಒಳಗಾಗುತ್ತಿದ್ದಾರೆ. ಶಾಲಾ, ಕಾಲೇಜು ವಿದ್ಯಾರ್ಥಿಗಳು ಮಾತ್ರವಲ್ಲದೆ, ವಿದ್ಯಾರ್ಥಿನಿಯರಲ್ಲಿಯೂ ತಂಬಾಕು ಸೇವಿಸುವ ಪ್ರಮಾಣದಲ್ಲಿ ಏರಿಕೆ ಕಂಡಿದ್ದು, ಇದು ಚಿಂತಾಜನಕವಾಗಿದೆ. – **ಡಾ.ಜಿ.ಹೆಚ್. ಅಭಿಲಾಷ್, ಮೆಡಿಕಲ್ ಆಂಕೋಲಾಜಿಸ್ಟ್**

ಗೌರ್ನಮೆಂಟ್ ಸ್ಕೂಲ್‌ಗೇ ಸೇರ್ತಿನಮ್ಮ...!

ಮೈಸೂರು ಮಿತ್ರ
ಸ್ಥಾಪನೆ : 1980
44
ಅತ್ಯುತ್ತಮ ಪತ್ರಿಕೋದ್ಯಮ

ದ್ವಿತೀಯ ಬಹುಮಾನ



ಜಿ.ಎನ್.ಕೃಷ್ಣಮೂರ್ತಿ
ಗಾಗೇನಹಳ್ಳಿ ಗ್ರಾಮ
ಕಸಬಾ ಹೋಬಳಿ,
ಹುಣಸೂರು ತಾಲೂಕು
ಮೈಸೂರು ಜಿಲ್ಲೆ-571103

ಇವರು ಗಾಗೇನಹಳ್ಳಿ ಗ್ರಾಮದ ಶ್ರೀಯುತ ಕೆ.ಸಿ.ನಾಗರಾಜು ಮತ್ತು ಶ್ರೀಮತಿ ಬಿ.ಲಕ್ಷ್ಮಮ್ಮನವರ ಮಗ. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದಿದ್ದಾರೆ. ಇವರ ವೃತ್ತಿ ವ್ಯವಸಾಯ. ಪ್ರವೃತ್ತಿ-ಕಥೆ-ಕವಿತೆ-ಲೇಖನ-ನಾಟಕ ರಚನೆ, ಪುಸ್ತಕ ಬರಹಗಾರರು.

ಜನತಾನಗರ ಕಾಲೋನಿಯೊಂದರ ರಸ್ತೆಯಲ್ಲಿ ಸೈಕಲ್ ಮೀಟುತ್ತಾ ಹೋಗುತ್ತಿರುವ ಸುಮಾರು 10 ವರ್ಷದ ಹುಡುಗ ಸೂರ್ಯ. ಇವನ ಮುಖದಲ್ಲಿ ಸಂತಸ ಅರಳಿರುತ್ತದೆ. ಆ ಕಾಲೋನಿಯಲ್ಲಿ ಮಧ್ಯಮ ವರ್ಗದ ಹಳ್ಳಿಯ ಜನರು ವಾಸಿಸುತ್ತಿರುವ ಸೀಟು ಮನೆಗಳ ಸಾಲು. ಸೂರ್ಯ ಸೈಕಲ್‌ನಲ್ಲಿ ಬಂದು ಅವರ ಮನೆಯ ಮುಂದೆ ನಿಲ್ಲುತ್ತಾನೆ. ಆ ಮನೆ ಬಾಗಿಲಿಗೆ ಬೀಗ ಹಾಕಿರುತ್ತದೆ. ಇವನು ಮತ್ತೆ ಸೈಕಲ್‌ನಲ್ಲಿ ಅಲ್ಲಿಂದ ಹೊರಡುತ್ತಾನೆ. ಅಲ್ಲಿಂದ ಶ್ರೀಮಂತರ ಮನೆಯೊಂದರ ಮುಂದಕ್ಕೆ ಬಂದು ನಿಲ್ಲುತ್ತಾನೆ. ಕಾಂಪೌಂಡ್ ಹತ್ತಿರ ಗಿಡಗಳಿಗೆ ನೀರು ಹಾಕುತ್ತಿರುವ ಆ ಮನೆಯ ಒಡತಿಯನ್ನು ನೋಡಿ ಸೂರ್ಯ "ಆಂಟಿ ನಮ್ಮಮ್ಮ ಇದ್ದಾರಾ?" ಎಂದು ಕೇಳಿದ. ಆಕೆ "ಇಲ್ಲಪ್ಪ, ಅವಾಗ್ಲೆ ಕೆಲ್ಸ ಮುಗಿಸ್ಕೊಂಡು ಹೋದ್ಲು" ಎನ್ನುತ್ತಾಳೆ. ಸೂರ್ಯ ಮತ್ತೊಂದು ಶ್ರೀಮಂತರ ಮನೆ ಮುಂದೆ ಬರುತ್ತಾನೆ. ಆ ಮನೆ ಮಾಲೀಕನ ನೋಡಿ ಸೂರ್ಯ "ಅಂಕಲ್ ನಮ್ಮಮ್ಮ ಇದ್ದಾರಾ?" ಎಂದ. ಆತ "ಈಗ್ತಾನೆ ಹೋದ್ಲು, ಆ ಕಾರ್ಪೊರೇಟರ್ ನಾಗಪ್ಪನ ಮನೇಲಿರಬೇಕು ನೋಡು" ಅಂತಾನೆ.

ಕಾರ್ಪೊರೇಟರ್ ನಾಗಪ್ಪನ ಬಂಗ್ಲೆ ಮುಂದೆ ಬಂದ ಸೂರ್ಯ, ಸೈಕಲ್ ನಿಲ್ಲಿಸಿ, ಒಳಗೆ ಹೋಗುತ್ತಾನೆ. ಸೂರ್ಯನ ತಾಯಿ ಪವಿತ್ರ (30 ವರ್ಷದ ಸೌಂದರ್ಯವತಿ) ಮನೆಯ ಹಾಲ್‌ನಲ್ಲಿ ನೆಲ ಒರೆಸುತ್ತಿರುತ್ತಾಳೆ. ಏದುಸಿರು ಬಿಡುತ್ತಾ "ಅಮ್ಮಾ ನನ್ಗೆ ರಾಯಲ್ ಕಾನ್ವೆಂಟ್‌ನಲ್ಲಿ ಸೀಟ್ ಸಿಕ್ತು" ಎಂದ ಕೂಡಲೇ ಪವಿತ್ರಳಿಗೆ ಸಂತಸ "ಎಲ್ಲಾ ನಿನ್ನ ಕೃಪೆ ಅಪ್ಪಾ" ಎಂದು ಅಲ್ಲಿರುವ ದೇವರ ಮನೆ ಕಡೆಗೆ ಕೈ ಮುಗಿಯುತ್ತಾಳೆ. ಕಾರ್ಪೊರೇಟರ್ ನಾಗಪ್ಪ ಮಹಡಿಯಿಂದ ಕೆಳಗಿಳಿಯುತ್ತಾ ಈ ಅಮ್ಮ ಮಗನ ಸಂತಸ ನೋಡಿ "ಏನ್ ಪವಿತ್ರ ಅಮ್ಮ-ಮಗ ಇಷ್ಟೊಂದು ಖುಷಿಯಾಗಿದ್ದೀರಾ" ಎಂದಾಗ ಪವಿತ್ರ ಸೀರೆ ಸೆರಗು ಸರಿ ಮಾಡಿಕೊಂಡು "ರಾಯಲ್ ಕಾನ್ವೆಂಟ್‌ನಲ್ಲಿ ಇವ್ನಿಗೆ 5ನೇ ಕ್ಲಾಸ್‌ಗೆ ಸೀಟ್ ಸಿಕ್ತಂತೆ ಸಾಹೇಬ್ರೆ" ಎನ್ನುತ್ತಾಳೆ. ನಾಗಪ್ಪ ಬಂದು ಸೋಫಾ ಮೇಲೆ ಕುಳಿತು ದಿನ ಪತ್ರಿಕೆ ನೋಡುತ್ತಾ ಪವಿತ್ರ ಕಡೆಗೆ ನೋಡಿ ಕುಹಕದಿಂದ "ದೊಡ್ಡ ದೊಡ್ಡ ಶ್ರೀಮಂತ್ರ ಮಕ್ಳು ಓದೋ ರಾಯಲ್ ಕಾನ್ವೆಂಟ್‌ನಲ್ಲಿ ಮೂರ್ ಮನೆ ಮುಸ್ರೆ ತಿಕ್ಕೋ ನಿನ್ನ ಮಗನ್ಗೆ ಸೀಟ್ ಸಿಕ್ತು ಅಂತ ಖುಷಿಪಡ್ತಾಯಿದ್ಯಾ?" ಎಂದಾಗ ಇವನ ಹೆಂಡತಿ ರಂಭಾ ಇವನಿಗೆ ಕಾಫಿ ಕೊಟ್ಟು ಪವಿತ್ರಳ ಕಡೆ ನೋಡಿ ವ್ಯಂಗ್ಯವಾಗಿ "ಎಲ್‌ಕೆಜಿಯಿಂದ ನಾಲ್ಕನೇ ಕ್ಲಾಸ್‌ಗಂಟ ಕಡಿಮೆ ಫೀಜಿರೋ ಕಾಂಜಿ ಪೀಂಜಿ ಕಾನ್ವೆಂಟ್‌ನಲ್ಲಿ ಓದುಸ್ದಂಗೆ ಈ ರಾಯಲ್ ಕಾನ್ವೆಂಟ್‌ನಲ್ಲಿ 5ನೇ ಕ್ಲಾಸ್‌ನಿಂದ 10ನೇ ಕ್ಲಾಸ್ ತನಕ ಓದುಸ್ತೀನಿ ಅಂತ ಕನಸ್ ಕಾಣ್ತಾಯಿದ್ಯಾ?" ಎನ್ನುತ್ತಾಳೆ. ಮೌನವಾಗಿ ನಿಂತಿರುವ ಪವಿತ್ರಳನ್ನು ನೋಡಿ ನಾಗಪ್ಪ "ರಾಯಲ್ ಕಾನ್ವೆಂಟ್‌ನಲ್ಲಿ ಸೀಟೇನೋ ಸಿಕ್ತು, ಆದ್ರೆ ಡೊನೇಷನ್ ಎಷ್ಟು ಕಟ್‌ಬೇಕು ಅಂತ ಗೊತ್ತಾ?" ಎನ್ನುತ್ತಾನೆ. ಪವಿತ್ರ "ಗೊತ್ತಿಲ್ಲ ಸಾಹೇಬ್ರೆ" ಎಂದಾಗ ನಾಗಪ್ಪ ಬಲಗೈ ಹಸ್ತ ತೋರಿ "ಐದ್ ಲಕ್ಷ" ಎಂದಾಗ ಪವಿತ್ರ ಮುಖ ಬಾಡಿದಂತಾಗುತ್ತದೆ. ರಂಭಾ ಪವಿತ್ರಳನ್ನು ಮೇಲೆ ಕೆಳಗೆ ನೋಡುತ್ತಾ ಕುಹಕವಾಗಿ "ಕೋಟಿ ಕೋಟಿ ಹಣ ಇರೋ ನಾವೇ ನಮ್ಮ ಮಗನ್ನ ರಾಯಲ್ ಕಾನ್ವೆಂಟಿಗೆ ಸೇರ್ಸಿಲ್ಲ. ಅಂತದ್ರಲ್ಲಿ ಲಕ್ಷಕ್ಕೆ ಎಷ್ಟು ಸೊನ್ನೆ ಸೇರುಸ್‌ಬೇಕು ಅಂತ ಗೊತ್ತಿಲ್ದಿರೋ ನೀನು ಆ ಕಾನ್ವೆಂಟ್ ಕನಸ್ ಕಾಣ್ತಾಯಿದ್ಯಾ?" ಎಂದಾಗ, ನಾಗಪ್ಪ "ಐದು ಲಕ್ಷ ರೂಪಾಯಿ ಎಲ್‌ತರ್ತಿಯಾ? ಯಾರ್ ಕೊಡ್ತಾರೆ?" ಎನ್ನುತ್ತಾನೆ. ಮಾತು ಮುಂದುವರೆಸಿ ರಂಭಾ "ನೀನು ನಿನ್ನ ಮಗ ಜೀವನ ಪೂರ್ತಿ ದುಡುದ್ರು ಅಷ್ಟ್ ಹಣ ಸೇರುಸಕ್ಕಾಗಲ್ಲ, ತಿರುಕ ಅರಮನೆ ಕನಸ್ ಕಂಡಂಗಾಯ್ತು" ಎನ್ನುತ್ತಾ "ಸರಿ ಟೈಂ ಆಯ್ತು ಹೋಗು ನಾಳೆ ತುಂಬಾ ಕೆಲ್ಸ ಇದೆ ಬೇಗ ಬಾ" ಎಂದು ಎದ್ದು ಹೋಗುತ್ತಾಳೆ. ಪವಿತ್ರ ಕಂಬನಿ ತುಂಬಿಕೊಂಡು ಭಾರವಾದ ಹೆಜ್ಜೆ ಹಾಕುತ್ತಾ ಮಗನ ಜೊತೆ ಹೊರಗೆ ಹೋಗುತ್ತಾಳೆ.

* * * *

ಪವಿತ್ರ ಮನೆ ಪಕ್ಕದ ಮನೆಯ ಮುಂದೆ ಅಕ್ಕಪಕ್ಕದ ಮನೆಯ ಹೆಂಗಸರು ಕುಳಿತು ಹರಟೆಯಲ್ಲಿ ತೊಡಗಿರ್ತಾರೆ. ಒಬ್ಬಳು ಪವಿತ್ರ ಮನೆ ಬಾಗಿಲು ಬೀಗ ನೋಡಿ "ಇನ್ನು ಪವಿತ್ರ ಬಂದೇ ಇಲ್ಲ. ಕಾರ್ಪೊರೇಟರ್ ಮನೆ ಇನ್ನು ಬಿಟ್ಟಿಲ್ವೇನೋ," ಎಂದಾಗ ಮತ್ತೊಬ್ಬು "ಕಾರ್ಪೊರೇಟರ್ ಮನೆ ಬಿಟ್ಟಿಲ್ವೋ, ಇಲ್ಲ ಮಂಚನೇ ಬಿಟ್ಟಿಲ್ವೋ" ಎಂದಾಗ ಇನ್ನೊಬ್ಬಳು "ಏಯ್ ಸುಮ್ಕಿರಮಿ ಕಾನ್ವೆಂಟ್‌ನಲ್ಲಿ ಸೀಟ್ ಸಿಕ್ಕಿರೋ ಖುಷಿಗೆ ದೇವಸ್ಥಾನ-ಗೀವಸ್ಥಾನಕ್ಕೆ ಹೋಗಿರ್ಬೇಕು" ಎಂದಾಗ ಮತ್ತೊಬ್ಬಳು ವ್ಯಂಗ್ಯವಾಗಿ "ಸೀಟು-ಸೀಟು ಅದೇನ್ ಸೀಟೋ, ಎಂಎಲ್‌ಎ ಟಿಕೆಟ್ ಸಿಕ್ಕಿದ್ ಮಾತ್ರಕ್ಕೆ ಎಲ್ಲಾ ಗೆದ್ದು ವಿಧಾನಸೌಧಕ್ಕೆ ಹೋಗಕ್ಕಾಗುತ್ತಾ? ಅಂಗೆ ಇವುಳ್ ಮಗನ್ಗೆ ಸೀಟ್ ಸಿಕ್ಕಿದ್ ಮಾತ್ರಕ್ಕೆ ಆ ದೊಡ್ಡ ಕಾನ್ವೆಂಟ್‌ಗೆ ಸೇರ್ಸಕ್ಕಾಗುತ್ತಾ? ಡೊನೇಷನ್ 5 ಲಕ್ಷ ಅಂತೆ ಎಲ್ಲಿಂದ ತಂದಾಳು" ಎಂದಾಗ, ಇನ್ನೊಬ್ಬು "ಮಗನ್ನ ಕಾನ್ವೆಂಟ್‌ನಲ್ಲಿ ಓದುಸ್ತೀನಿ ಅಂತ ತೋರುಸ್ಕಳೋಕೆ ಇವುಳ್ ಗಂಡ ಊರ್ ತುಂಬಾ ಸಾಲ ಮಾಡಿ ನಾಲಕ್ ವರ್ಷದಿಂದ ನಾಪತ್ತೆ ಆಗೌನೆ, ಇನ್ನು ಇವ್ಳು ನಮ್ಮ ಮಹಿಳಾ ಸಂಘದಲ್ಲಿ ಚೀಟಿ ಸಾಲ ಮಾಡಿ ಸಾಲ ಕಟ್ಟದೆ ಉಗಿಸ್ಕತ್ತಾಳ್ಳೆ, 3 ಸಾವಿರಕ್ಕೆ 3 ಮನೆ ಮುಸ್ರೆ ತಿಕ್ತಾಳ್ಳೆ, ಈ ಬಾಡಿಗೆ ಮನೇಲಿದ್ಕೊಂಡು ಮಗ್ನ ಕಾನ್ವೆಂಟಿಗೆ ಸೇರ್ಸಿ ಅದೆಂಗೆ ಕಿಸ್ತು ದಬಾಕ್ತಳೋ ನಾನು ನೋಡ್ತಿನಿ" ಎಂದು ಅಲ್ಲಿಂದ ಎದ್ದೋಗುತ್ತಾಳೆ.

* * * *

ಜನತಾನಗರ ಕಾಲೋನಿಯಲ್ಲಿರುವ ದೇವಸ್ಥಾನಕ್ಕೆ ಹೋಗಿ ದೇವರ ಮೂರ್ತಿಗೆ ಪವಿತ್ರ-ಸೂರ್ಯ ಕೈ ಮುಗಿಯುತ್ತಿರುತ್ತಾರೆ. ಇವರಿಗೆ ಮಂಗಳಾರತಿ ಕೊಡಲು ಬಂದ ಪೂಜಾರಿ ಇವರನ್ನು ನೋಡಿ "ಏನಮ್ಮಾ ಪವಿತ್ರ ನಮ್ಮ ಬೀದೀಲಿ ನಿನ್ನ ಮಗ ಸೂರ್ಯನ್‌ದೇ ಸುದ್ದಿ, ರಾಯಲ್ ಕಾನ್ವೆಂಟ್‌ನಲ್ಲಿ ಇವುನ್ಗೆ ಸೀಟ್ ಸಿಕ್ತಂತೆ" ಎಂದಾಗ ಪವಿತ್ರ "ಹೌದು ಪೂಜಾರ್‍ರೆ, ಎಲ್ಲಾ ಈ ದೇವರ ದಯೆ" ಎನ್ನುತ್ತಾಳೆ. ಆಗ ಪೂಜಾರಿ "ಕಷ್ಟನೋ ನಷ್ಟನೋ ಆ ಕಾನ್ವೆಂಟ್‌ಗೆ ಸೇರ್ಸು, ಬಿಡಬೇಡ, ಅಲ್ಲಿ ಸೀಟ್ ಸಿಕ್ಕಿರೋದೆ ನಿನ್ನ ಮಗನ ಪುಣ್ಯ. ನಿನ್ನ ಭಾಗ್ಯ. ಅಲ್ಲಿ ಓದಿದೌರೆಲ್ಲಾ ದೊಡ್ಡ ದೊಡ್ಡ ಆಫೀಸರ್ ಆಗೌರಂತೆ, ಕೆಲವರು ಫಾರಿನ್‌ನಲ್ಲೇ ಸೆಟ್ಲ್ ಆಗೌರಂತೆ. ನಿನ್ನ ಮಗನೂ ದೊಡ್ಡ ಅಧಿಕಾರಿಯಾಗಬಹುದು. ನಿನ್ನ ಮಗನ ಭವಿಷ್ಯ ನಿನ್ನ ಕೈಲೇ ಇದೆ. ಇವುನ್ ಬಾಳನ್ನ ಬಂಗಾರ ಮಾಡೋದು ನಿನ್ನ ಕೈಲೇ ಇದೆ. ಬೂದಿ ಮಾಡೋದು ನಿನ್ನ ಕೈಲೇ ಇದೆ. ಹೋಗಿದ್ ಬನ್ನಿ ದೇವ್ರು ಒಳ್ಳೇದ್ ಮಾಡ್ಲಿ" ಎನ್ನುತ್ತಾನೆ.

ಮನೇಲಿ ಅಡಿಗೆ ಮಾಡುತ್ತಾ ಪವಿತ್ರ ಮಗನನ್ನು ನೋಡಿ "ಮಗ್ನೆ ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ಕೊ" ಎಂದಾಗ ಸೂರ್ಯ "ನನ್ನ ಫ್ರೆಂಡ್ಸ್ ಎಲ್ಲಾ ರಾಯಲ್ ಕಾನ್ವೆಂಟ್‌ಗೆ ಸೇರ್ತಿದ್ದಾರೆ, ನಾನು ಅಲ್ಗೆ ಸೇರ್‌ಬೇಕು" ಎಂದಾಗ "ನಿನ್ನ ಫ್ರೆಂಡ್ಸ್ ಎಲ್ಲಾ ಶ್ರೀಮಂತ್ರು ಮಕ್ಳು, ಆದ್ರೆ ನಾವು ಬಡವರಪ್ಪ! ಅಕ್ಕಪಕ್ಕದ ಮನೆ ಮಕ್ಕಳೆಲ್ಲಾ ಗೌರ್ನಮೆಂಟ್ ಸ್ಕೂಲಲ್ಲೇ ಓದುತ್ತಾ ಅವರ ಅಪ್ಪ ಅಮ್ಮನ ಜೊತೆ ಎಷ್ಟು ಸಂತೋಷದಿಂದ ಇದ್ದಾರೆ, ಆದ್ರೆ ನೀನೋದೋ ಕಾನ್ವೆಂಟ್ ನಮ್ಮ ಸಂತೋಷವನ್ನೇ ಕಿತ್ಕೊಬಿಡ್ತು, ನಿನ್ನ ಕಾನ್ವೆಂಟಿಗೆ ಸೇರ್ಸೋಕೆ ನಿಮ್ಮಪ್ಪ ಲಕ್ಷಾಂತರ ರೂಪಾಯಿ ಸಾಲ ಮಾಡಿ, ನಮ್ಮನ್ನ ಬೇವರ್ಸಿ ಮಾಡಿ ಊರ್ನ ಬಿಟ್ಟು ಹೋಗ್‌ಬಿಟ್ರು. ಒಂಟಿ ಹೆಂಗ್ಸು ನಾನು ಈಗ ಈ ರಾಯಲ್ ಕಾನ್ವೆಂಟ್‌ಗೆ ಸೇರ್ಸೋಕೆ ಅಷ್ಟೊಂದ್ ದುಡ್ಡು ಎಲ್ಲಿಂದ ತರ್ಲಿ, ಅದ್ಕೆ ಮಗ್ನೆ ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ಕೋ" ಎಂದಾಗ ಸೂರ್ಯ ಕಣ್ಣಲ್ಲಿ ಕಂಬನಿ ತುಂಬಿಕೊಂಡು "ನಂಗೆ ಅದೆಲ್ಲಾ ಗೊತ್ತಿಲ್ಲ, ಅಮ್ಮ ನಾನು ರಾಯಲ್ ಕಾನ್ವೆಂಟ್‌ಗೆ ಸೇರಬೇಕು" ಎಂದು ಹಠಮಾಡುತ್ತಾನೆ. ಪವಿತ್ರಳಿಗೆ ಪೂಜಾರಿ ಮಾತು ನೆನಪಾಗುತ್ತದೆ "ಆ ಕಾನ್ವೆಂಟ್‌ನಲ್ಲಿ ಓದುದ್ರೆ ನಿನ್ನ ಮಗನು ದೊಡ್ಡ ಅಧಿಕಾರಿಯಾಗಬಹುದು ನಿನ್ನ ಮಗನ ಬಾಳನ್ನ ಬಂಗಾರ ಮಾಡೋದು ನಿನ್ನ ಕೈಲೇ ಇದೆ, ಬೂದಿ ಮಾಡೋದು ನಿನ್ನ ಕೈಲೇ ಇದೆ" ಎಂದು ಹೇಳಿದ ಮಾತು ಪವಿತ್ರ ಮನಸ್ಸಿಗೆ ನಾಟಿರುತ್ತದೆ.

* * * *

ಪವಿತ್ರ ಮಗನನ್ನು ಕರೆದುಕೊಂಡು ತಾನು ಕೆಲಸ ಮಾಡುವ ಒಂದು ಮನೆಗೆ ಬಂದು ಆ ಮನೆ ಮಾಲೀಕನನ್ನು ಸಾಲ ಕೇಳುತ್ತಾಳೆ. ಆತ ಕಠೋರವಾಗಿ "ಇಷ್ಟ್ ಕಷ್ಟದಿಂದ ಕಾನ್ವೆಂಟ್‌ನಲ್ಲಿ ಓದುಸ್ಬೇಕಾ? ಹೋಗಿ ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ಸು, ಇಲ್ಲ ಅಂದ್ರೆ ಸಾಲ ಮಾಡಿ ನಿನ್ನ ಗಂಡ ಓಡೋದಂಗೆ ನೀನು ಓಡೋಗ್‌ಬೇಕಾಗುತ್ತೆ" ಎನ್ನುತ್ತಾನೆ. ಪವಿತ್ರ ಕಂಬನಿ ತುಂಬಿಕೊಂಡು ಸೂರ್ಯನನ್ನು ಕರೆದುಕೊಂಡು ಹೋಗುತ್ತಾಳೆ. ತಾನು ಕೆಲಸ ಮಾಡುವ ಮತ್ತೊಂದು ಮನೆಗೆ ಹೋಗಿ ಸಾಲ ಕೇಳಿದಾಗ ಆ ಮನೆಯ ಮಾಲೀಕ "ಯಾವ ಆಧಾರದ ಮೇಲೆ ನಿನ್ಗೆ ಅಷ್ಟೊಂದ್ ಹಣ ಸಾಲ ಕೊಡ್ಲಮ್ಮ ಇಲ್ಲ ಹೋಗು ನಿಮ್ಮಂತವರಿಗೆ ಅಂತ್ಲೆ ಗೌರ್ನಮೆಂಟ್ ಸ್ಕೂಲ್ ಇದ್ಯಲ್ಲ ಹೋಗಿ ಸೇರ್ಸು" ಎನ್ನುತ್ತಾನೆ. ಕಂಬನಿ ತುಂಬಿಕೊಂಡು ಪವಿತ್ರ ಕೊನೆಗೆ ಕಾರ್ಪೊರೇಟರ್ ನಾಗಪ್ಪನ ಮನೆಗೆ ಮಗನ ಜೊತೆ ಬರುತ್ತಾಳೆ. ನಾಗಪ್ಪನ ಹೆಂಡತಿ ರಂಭಾ ಹತ್ತಿರ ಸಾಲ ಕೇಳಿದಾಗ ಆಕೆ "5 ರೂಪಾಯಿ ಭಿಕ್ಷೆ ಕೊಡದ ಜಿಪುಣ ನನ್ನ ಗಂಡ ಅಂತದ್ರಲ್ಲಿ 5 ಲಕ್ಷ ಕೇಳ್ತಿದ್ಯಾ!" ಎಂದಾಗ ಅಲ್ಲಿಗೆ ಬಂದ ನಾಗಪ್ಪ ಪವಿತ್ರಳನ್ನು ನೋಡಿ "ಏನಮ್ಮಾ ನಿನ್ನ ಗೋಳು! ಸಾಲ ಕೇಳೋದಾದ್ರೆ ನಾಳೆ ಯಿಂದ ಕೆಲ್ಸಕ್ಕೆ ಬರಬೇಡ, ನಿಮ್ಮಂತ ದರಿದ್ರದೋರ್‍ಗೆ ಅಂತ್ಲೆ ಸರ್ಕಾರಿ ಶಾಲೆ ಇರೋದು, ಕಾನ್ವೆಂಟ್‌ನಲ್ಲೇ ಓದುಸ್ತೀನಿ ಅಂದ್ರೆ ಹಳ್ಳಿಲಿ ನಿನ್ನ ಗಂಡನ ಆಸ್ತಿ ಇದ್ಯಲ್ಲಾ ಮಾರ್ ಬುಟ್ಟು ಬಾ" ಎಂದೇಳಿ ಹೋಗುತ್ತಾನೆ. ರಂಭಾ ಮಾತು ಮುಂದು ವರೆಸಿ "ಪವಿತ್ರ ನಿನ್ನ ಗಂಡಂಗೂ ಹೊಲ ಮನೆ ಇದೆ ಅಂತಿದ್ಯಲ್ಲ, ಗಂಡನೇ ಹೋದ್ಮೇಕೆ ಆ ಆಸ್ತಿ ಇಟ್ಕೊಂಡು ಏನ್ಮಾಡ್ತಿಯಾ ಹೋಗಿ ಮಾರು, ಅಂಗೈಲಿ ಬೆಣ್ಣೆ ಇಟ್ಕೊಂಡು ತುಪ್ಪಕ್ಯಾಕೆ ಅಲಿತಾಯಿದ್ಯಾ" ಎಂದಾಗ ಪವಿತ್ರ ಕಂಬನಿ ಒರೆಸಿಕೊಂಡು ಗಂಡನ ಊರಿಗೆ ಹೋಗಲು ನಿರ್ಧರಿಸುತ್ತಾಳೆ.

ಪವಿತ್ರ ಮಗನನ್ನು ಕರೆದುಕೊಂಡು ಬಸ್‌ನಲ್ಲಿ ಹಳ್ಳಿಯಲ್ಲಿರುವ ಗಂಡನ ಊರಿಗೆ ಬರುತ್ತಾಳೆ. ಗಂಡನ ಮನೆಗೆ ಹೋಗಿ ಭಾವ-ಮೈದುನ-ವಾರಗಿತ್ತಿಯರನ್ನು ಸೇರಿಸಿ "ನನ್ನ ಗಂಡನ ಆಸ್ತಿ ಬೇಕು, ಪಾಲು ಕೊಡಿ ಅದನ್ನು ಮಾರಿ ನನ್ನ ಮಗನನ್ನು ಕಾನ್ವೆಂಟಿನಲ್ಲಿ ಓದಿಸಬೇಕು ಎಂದಾಗ ಎಲ್ಲರೂ ಇವಳಿಗೆ ತಾರಾಮಾರ ಬಯ್ಯುತ್ತಾರೆ. ಭಾವ ಬಯ್ಯುತ್ತಾ "ಈ ಹಳ್ಳೀಲಿ ಹೊಲ ಮನೆ ಕೆಲ್ಸ ಮಾಡ್ಕೊಂಡು ಬಿದ್ದಿರು. ನಮ್ಮ ಮಕ್ಕಳೆಲ್ಲಾ ಗೌರ್ನಮೆಂಟ್ ಸ್ಕೂಲ್‌ನಲ್ಲೇ ಓದುತ್ತಿಲ್ವ, ಶೋಕಿ ಮಾಡೋಕೆ ನಿನ್ಗೆ ಸಿಟಿನೇ ಬೇಕು. ನಿನ್ನ ಮಗನ್ಗೆ ಕಾನ್ವೆಂಟೇ ಬೇಕು" ಎನ್ನುತ್ತಾನೆ. ಮೈದುನ ಬೈಯ್ಯುತ್ತಾ : "ನಿನ್ ಗಂಡ ಬಂದು ಕೇಳಲಿ ಆಸ್ತಿ ಕೊಡ್ತಿವಿ, ಗಂಡನ ಬಿಟ್ಟಿರೋ ನಿನ್ಗೆ ಆಸ್ತಿ ಕೊಟ್ರೆ ಅದ್ಯಾವ್ ಮಿಂಡನ್ ಪಾಲ್ ಮಾಡ್ತಿಯೋ" ಎಂದೆಲ್ಲಾ ನಿಂದಿಸ್ತಾನೆ.

ಪವಿತ್ರ ವೇದನೆಯಿಂದ, ವಾಪಸಾಗುತ್ತಾಳೆ. ಕಾರ್ಪೊರೇಟರ್ ನಾಗಪ್ಪನ ಮನೆಯಲ್ಲಿ ಒಂದು ಕಡೆ ಕುಳಿತು ಪವಿತ್ರ ಹೂ ಕಟ್ಟುತ್ತಿರುತ್ತಾಳೆ. ಅವಳ ಮೊಬೈಲ್‌ಗೆ ರಾಯಲ್ ಕಾನ್ವೆಂಟ್ ಹತ್ತಿರ ನಿಂತು ಫ್ರೆಂಡ್ ಮೊಬೈಲ್‌ನಿಂದ ಸೂರ್ಯ ಕರೆ ಮಾಡಿ "ಅಮ್ಮಾ ನನ್ನ ಫ್ರೆಂಡ್ಸ್ ಎಲ್ಲಾ ರಾಯಲ್ ಕಾನ್ವೆಂಟಿಗೆ ಅಡ್ಮಿಷನ್ ಆಗೌರೆ, ಇನ್ನು ಮೂರು ದಿನದಲ್ಲಿ ನಾನು ಅಡ್ಮಿಷನ್ ಆಗಲಿಲ್ಲ ಅಂದ್ರೆ ಸೀಟ್ ಕ್ಯಾನ್ಸಲ್ ಆಗುತ್ತಂತೆ" ಎಂದಾಗ ಪವಿತ್ರ ಚಿಂತಾಕ್ರಾಂತಳಾಗುತ್ತಾಳೆ.

* * * *

ಪಿಡಬ್ಲ್ಯೂಡಿ ಮಂತ್ರಿ ಕಾರು ಕಾರ್ಪೊರೇಟರ್ ನಾಗಪ್ಪನ ಮನೆ ಮುಂದೆ ಬಂದು ನಿಲ್ಲುತ್ತದೆ. ನಾಗಪ್ಪ ಮಂತ್ರಿಯನ್ನು ಮನೆಯೊಳಗೆ ಬರಮಾಡಿಕೊಳ್ಳುತ್ತಾನೆ. ಮಂತ್ರಿಯನ್ನು ನೋಡಿ ನಾಗಪ್ಪ "ಸಾಹೇಬ್ರೆ ದಿಢೀರ್ ಭೇಟಿ" ಎಂದಾಗ ಮಂತ್ರಿ " ಈ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಆಗಾಗ್ಗೆ ಭೇಟಿ ಕೊಡ್ಲೇಬೇಕಲ್ಲಾ, ಜಿಲ್ಲಾ ಪ್ರವಾಸ ಇದೆ, ಮೂರು ದಿನ ಗೆಸ್ಟ್ ಹೌಸ್‌ನಲ್ಲೇ ಇರ್ತೀನಿ" ಎನ್ನುತ್ತಾನೆ. ನಾಗಪ್ಪನ ಹೆಂಡತಿ ರಂಭಾ ಮಾಡ್ರನ್ ಡ್ರೆಸ್‌ನಲ್ಲಿ ಮೋಹಕ ನಗೆ ಬೀರುತ್ತಾ ಜ್ಯೂಸ್ ತಂದು ಮಂತ್ರಿಗೆ ಕೊಟ್ಟು "ಮಂತ್ರಿಗಳಿಗೆ ನಮಸ್ಕಾರ" ಎಂದಾಗ ಮಂತ್ರಿ, ತನ್ನ ಕೆಳ ತುಟಿ ಕಚ್ಚಿಕೊಳ್ಳುತ್ತಾ ಕಾಮುಕ ಭಾವನೆಯಿಂದ "ಏನ್ ರಂಭಾ ಚೆನ್ನಾಗಿದ್ಯಾ" ಎಂದಾಗ ಈಕೆ, "ನಿಮ್ಮ ಆಶೀರ್ವಾದದಿಂದ ಚೆನ್ನಾಗಿದ್ದೀನಿ" ಎನ್ನುತ್ತಾಳೆ. ಮಂತ್ರಿ ಅವಳಿಗೆ ಕಣ್ ಸನ್ನೆ ಮಾಡಿ "ರಾತ್ರಿ ಹೊತ್ತು ನನ್ನ ಆಶೀರ್ವಾದ ಇದ್ದೇ ಇರುತ್ತೆ" ಎನ್ನುತ್ತಾನೆ. ನಂತರ ಮಂತ್ರಿ ಜ್ಯೂಸ್ ಕುಡಿಯುತ್ತಾ ಹೂ ಕಟ್ಟುತ್ತಿರುವ ಪವಿತ್ರಳನ್ನು ಕಾಮುಕ ದೃಷ್ಟಿಯಿಂದ ನೋಡಿ ನಂತರ ನಾಗಪ್ಪನ ಕಿವಿಯಲ್ಲಿ ಪಿಸುಗುಡುತ್ತಾ "ಬರೀ ಜ್ಯೂಸೇ ಕುಡಿಸ್ತೀಯೋ ಅಥವಾ ಏನಾದ್ರು ಕುಡಿಸ್ತೀಯೋ" ಎಂದು ರಾಗ ಎಳೆದಾಗ ನಾಗಪ್ಪ "ಮೂರು ದಿವಸ ಇರ್ತೀರಲ್ಲಾ ರಮ್-ರಂಭಾ ಸೇವಾರ್ಥ ಮಾಡ್ಸೋಣ" ಎಂದಾಗ ಮಂತ್ರಿ ಮತ್ತೆ ಪವಿತ್ರ ಕಡೆ ಆಸೆಯಿಂದ ನೋಡುತ್ತಾ "ರಂಭಾ ಬೇಡ ರಂಬೆ ಬೇಕು" ಎಂದಾಗ ನಾಗಪ್ಪ ಮತ್ತು ಅವನ ಹೆಂಡತಿ ಪವಿತ್ರ ಕಡೆಗೆ ನೋಡುತ್ತಾರೆ. ನಾಗಪ್ಪ ತಡವರಿಸುತ್ತಾ ಮಂತ್ರಿ ಕಡೆ ನೋಡಿ "ಸಾಹೇಬ್ರೆ ಈ ಸಲ ಎಂಎಲ್‌ಎ ಎಲೆಕ್ಷನ್‌ಗೆ ನನ್ಗೆ ನಿಮ್ಮ ಪಾರ್ಟಿಯಿಂದ ಟಿಕೆಟ್ ಬೇಕು" ಎಂದಾಗ ಮಂತ್ರಿ ಎದ್ದುನಿಂತು "ಮೊದ್ಲು ಸರಿಯಾಗಿ ಬಕೆಟ್ ಹಿಡಿ, ಆ ಮೇಲೆ ಟಿಕೆಟ್ ವಿಷ್ಯ" ಎಂದು ಹೊರಹೋಗುತ್ತಾನೆ. ಕಾರು ಹತ್ತಿರ ನಿಂತು ನಾಗಪ್ಪ ಮತ್ತು ರಂಭಾಳನ್ನು ನೋಡಿ ಮಂತ್ರಿ "ಅಲ್ಲಿ ಹೂ ಕಟ್ತಾಯಿರೋಳು ನನ್ನ ಬೆಡ್‌ರೂಂನಲ್ಲಿ ಹೂ ಕಟ್‌ಬೇಕು ಅಷ್ಟೇ" ಎಂದೇಳಿ ಕಾರು ಹತ್ತಿ ಹೋಗುತ್ತಾನೆ.

* * * *

ರಾತ್ರಿ 8 ಗಂಟೆ ಸಮಯ, ಜೋರು ಮಳೆ ಸುರಿಯುತ್ತಿರುತ್ತದೆ. ಮನೆಯಲ್ಲಿ ಪವಿತ್ರ ಒಂದು ಕಡೆ ಗೋಡೆಯೊರಗಿ ಕುಳಿತು ಚಿಂತಿಸುತ್ತಿರುತ್ತಾಳೆ. ಸೂರ್ಯ ಮತ್ತೊಂದು ಕಡೆ ಕುಳಿತು ಟಿ.ವಿ. ನೋಡುತ್ತಿರುತ್ತಾನೆ. ಸೂರ್ಯ ಅಮ್ಮನ ಕಡೆ ನೋಡಿ ನೊಂದ ಧ್ವನಿಯಲ್ಲಿ "ಅಮ್ಮಾ ಅಡ್ಮೀಷನ್‌ಗೆ ನಾಳೇನೇ ಲಾಸ್ಟ್ ಡೇಟ್" ಎನ್ನುತ್ತಾನೆ. ಪವಿತ್ರ ಮೌನವಾಗಿ ಕುಳಿತು ಚಿಂತಿಸುತ್ತಾ ನಾಗಪ್ಪನ ಹೆಂಡತಿ ರಂಭಾ ಹೇಳಿದ ಮಾತನ್ನು ನೆನಪು ಮಾಡಿಕೊಳ್ಳುತ್ತಾಳೆ.

* * * *

ನಾಗಪ್ಪನ ಮನೆಗೆ ಮಂತ್ರಿ ಬಂದಿದ್ದ ಸಮಯ. ಹೂ ಕಟ್ಟುತ್ತಿರುವ ಪವಿತ್ರ ಹತ್ತಿರ ರಂಭಾ ಮಳ್ಳಿ ಹೆಜ್ಜೆ ಹಾಕುತ್ತಾ ಬಂದು ಪವಿತ್ರಳನ್ನು ಪುಸಲಾಯಿಸುತ್ತಾ "ಪವಿತ್ರ ಈ ಹೂವು ಎಲ್ಲೋ ಹುಟ್ಟುತ್ತೆ, ಯಾರ್ ಮುಡಿಲೋ ಸಾಯುತ್ತೆ, ಅಲ್ಲಿ ತನಕ ಈ ಹೂವನ್ನ ಅದೆಷ್ಟ್ ಜನ ಮುಟ್ಟಿರ್ತಾರೆ, ಮೂಸಿರ್ತಾರೆ ಅಲ್ವಾ? ಈ ಹೂವಿನ ರೀತಿನೇ ಈ ಹೆಣ್ಣಿನ ಬದುಕು ಕೂಡ" ಎನ್ನುತ್ತಾಳೆ. ಪವಿತ್ರಳ ಮುಖವನ್ನೇ ನೋಡುತ್ತಾ "ಪವಿತ್ರ ನಿನ್ಗೆ ಇದೊಂದು ಸುವರ್ಣಾವಕಾಶ, ನನ್ನ ಮಾತನ್ನ ಗಂಭೀರವಾಗಿ ಕೇಳು. ತ್ಯಾಗ ಇಲ್ಲದೇನೆ ಪ್ರತಿಫಲ ಸಿಗೋದು ಕಷ್ಟ, ನಿನ್ನ ಮಗನಿಗೆ ಡೊನೇಷನ್ ಕಟ್ಟೋಕೆ 5 ಲಕ್ಷ ಬೇಕು ಅಂದ್ರೆ ನೀನೊಂದು ತ್ಯಾಗ ಮಾಡಬೇಕು" ಎಂದಾಗ ಪವಿತ್ರ ತ್ಯಾಗಕ್ಕೆ ಸಿದ್ಧಳಾದಂತೆ ತನ್ನ ಮುಖದಲ್ಲಿ ತ್ಯಾಗದ ಭಾವನೆ ತೋರುತ್ತಾ "ಅದೇನ್ ಹೇಳಿ ಅಮ್ಮೋರೆ, ನನ್ನ ಮಗನಿಗೋಸ್ಕರ ಅದೇನ್ ಬೇಕಾದ್ರು ತ್ಯಾಗ ಮಾಡ್ತೀನಿ. ನನ್ನ ಕಣ್ಣು, ಕಿಡ್ನಿ, ಈ ಜೀವ ಬೇಕಾದ್ರು ಕೊಡ್ತೀನಿ" ಎಂದಾಗ ಅತ್ತಿತ್ತ ನಡೆದಾಡುತ್ತಾ ರಂಭಾ "ನಮ್ಮಂತ ಹೈ-ಫೈ-ಫ್ಯಾಮಿಲಿಯವರಿಗೆ ಇದೆಲ್ಲಾ ಕಾಮನ್, ನಿನ್ನಂತ ಮಿಡ್ಲ್ ಕ್ಲಾಸ್ ಫ್ಯಾಮಿಲಿಯವರಿಗೆ ಇದು ಕಷ್ಟದ ಕೆಲಸ, ಆ ಕಷ್ಟಾನಾ ಇಷ್ಟ ಪಟ್ಟು ಮಾಡುದ್ರೆ ಹೂ ಕಟ್ಟಿದ್ದಷ್ಟೇ ಸುಲಭ. ಹೆಚ್ಚು ಲಾಭ. ಅದೃಷ್ಟನಾ ಅಂಗೈನಗಲ ಜಾಗದಲ್ಲಿ ಇಟ್ಕೋಬಹುದು" ಎಂದಾಗ ಪವಿತ್ರ ಏನೂ ಅರ್ಥವಾಗದೆ ಪೇಚಾಡುತ್ತಾಳೆ. ಮಾತು ಮುಂದುವರೆಸಿ ರಂಭಾ "ನಮ್ಮ ದೇಶದಲ್ಲಿ ರಾಮಾಯಣವೂ ಇದೆ, ಮಹಾಭಾರತವೂ ಇದೆ. ಸೀತೆ ಕತೆನೂ ಇದೆ, ದ್ರೌಪದಿ ವ್ಯಥೆನೂ ಇದೆ. ಇಲ್ಲಿ ಗರತಿ ಗೃಹಿಣಿಯರು ಇದ್ದಾರೆ, ಸುರತಿ ಜಾರಿಣಿಯರು ಇದ್ದಾರೆ" ಎಂದಾಗ ಪವಿತ್ರ "ಈ ದಡ್ಡಿಗೆ ನಿಮ್ಮ ದೊಡ್ಡ ಮಾತುಗಳೆಲ್ಲಾ ಅರ್ಥ ಆಗಲ್ಲ, ಅದೇನು ಅಂತ ನೇರವಾಗಿ ಹೇಳಿ ಅಮ್ಮೋರೆ" ಎನ್ನುತ್ತಾಳೆ. ರಂಭಾ ತಡವರಿಸುತ್ತಾ "ಏನಿಲ್ಲ, ನಮ್ಮ ಮಿನಿಷ್ಟ್ರು ಬಂದಿದ್ರಲ್ಲಾ ಅವ್ರು ನಿನ್ನ ಇಷ್ಟಪಟ್ಟಿದ್ದಾರೆ. ಒಂದ್ ರಾತ್ರಿ ನೀನು ಅವರ ಜೊತೆ ಮಲಗ್‌ಬೇಕು" ಎಂದ ತಕ್ಷಣ ಪವಿತ್ರಳ ತಲೆ ಸಿಡಿದಂತಾಗುತ್ತದೆ. ಕಂಬನಿ ತುಂಬಿಕೊಂಡು ನೋವಿನಿಂದ ಬಳಲುತ್ತಾ ನೊಂದ ಧ್ವನಿಯಲ್ಲಿ "ನಮ್ಮಂತ ಬಡವರಿಗೆ ಶೀಲನೇ ಸೌಭಾಗ್ಯ, ಸಂಪತ್ತು, ಸರ್ವಸ್ವ ಎಲ್ಲಾ ! ಈ ಸೌಭಾಗ್ಯನೇ ಕಳ್ಕೊಂಡ್ರೆ, ಈ ಸಮಾಜಕ್ಕೆ ತೋರ್ಸೋಕೆ, ತಲೆ ಎತ್ತಿ ನಡೆಯೋಕೆ ನಮ್ದು ಅಂತ ಏನೂ ಇರಲ್ಲ. ಎಲ್ಲಾ ಸೊನ್ನೆ" ಎಂದು ಅಳುತ್ತಾಳೆ. ಆಗ ರಂಭಾ ಪವಿತ್ರಳನ್ನು ಉದ್ರೇಕಗೊಳಿಸುತ್ತಾ, "ಆ ಸೊನ್ನೆಯಿಂದ್ಲೆ ಶ್ರೀಮಂತೆಯಾಗಬಹುದು. ಯೋಚ್ನೆ ಮಾಡು, ಬೆಂಕೀಲಿ ಬೆಂದು ಬೂದಿಯಾಗೋ ನಿನ್ನ ಮೈಗಿಂತ ನಿನ್ನ ಮಗನ ಭವಿಷ್ಯ ದೊಡ್ದು. ಹೆಣ್ಣಿನ ಚಿಂತೆಗೂ-ಚಿತೆಗೂ ಸೊನ್ನೆ ಯೊಂದೆ ವ್ಯತ್ಯಾಸ. ಆ ಸೊನ್ನೆನಾ ಮೈನಸ್ ಮಾಡುದ್ರೆ ಲೈಫ್‌ನಲ್ಲಿ ಎಲ್ಲಾ ಪ್ಲಸ್ ಆಗುತ್ತೆ. ನನ್ನ ಈ ಮಾತು ನಿನ್ಗೆ ಅರ್ಥ ಆಗಿದೆ ಅನ್ಕೋತೀನಿ. ನಿನ್ನ ಮೈನಾ? ನಿನ್ನ ಮಗನ ಭವಿಷ್ಯನಾ? ಯಾವ್‌ದು ದೊಡ್ಡು ಯೋಚ್ನೆ ಮಾಡು" ಎನ್ನುತ್ತಾಳೆ. ಈ ಮಾತುಗಳನ್ನು ನೆನೆದು ಪವಿತ್ರ ಮನೆಯಲ್ಲಿ ಗೋಡೆಯೊರಗಿ ಮೌನ ವಾಗಿ ಕುಳಿತು ಅಳುತ್ತಿರುತ್ತಾಳೆ.

ಕಂಬನಿಯನ್ನು ಒರೆಸಿಕೊಂಡು ದೃಢ ನಿರ್ಧಾರ ಮಾಡುತ್ತಾಳೆ. ಅವಳ ಮನಸ್ಸು ಮಾತಾಡುತ್ತದೆ. "ಹೌದು ನನ್ನ ಮಗನ ಭವಿಷ್ಯಕ್ಕಿಂತ ನನ್ನ ಶೀಲ ದೊಡ್ಡದೇ ನಲ್ಲ. ಈ ರೀತಿಯ ಅಗ್ನಿ ಪರೀಕ್ಷೆನಾ ನಾನ್ ಒಬ್ಳೆ ಎದುರುಸ್ತಾಯಿಲ್ಲ. ನನ್ನಂತ ನತದೃಷ್ಟೆಯರು ಈ ದೇಶದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ, ಅವರ ಭವಿಷ್ಯಕ್ಕೋಸ್ಕರ ಪ್ರತಿ ದಿನ, ಪ್ರತಿ ಗಂಟೆ, ಪ್ರತಿ ನಿಮಿಷಕ್ಕೂ ಎದುರುಸ್ತಾಯಿದ್ದಾರೆ. ಅಂತದ್ರಲ್ಲಿ ನಾನೇನ್ ಮಹಾ ಎಂದುಕೊಂಡು ಹೃದಯಗಟ್ಟಿ ಮಾಡಿಕೊಳ್ಳುತ್ತಾಳೆ. ರಂಭಾ ಹೇಳಿದ ಮಾತು ಮತ್ತೆ ನೆನಪಿಗೆ ಬರುತ್ತದೆ. "ನಿನ್ನ ಮೈನಾ? ನಿನ್ನ ಮಗನ ಭವಿಷ್ಯನಾ?" ಅದೇ ರೀತಿ ಪೂಜಾರಿ ಹೇಳಿದ ಮಾತು ಕೂಡ ನೆನಪಾಗುತ್ತದೆ. "ನಿನ್ನ ಮಗನ ಬಾಳನ್ನ ಬಂಗಾರ ಮಾಡೋದು, ಬೂದಿ ಮಾಡೋದು ನಿನ್ನ ಕೈಲೇ ಇದೆ" ಈ ಮಾತುಗಳು ಪವಿತ್ರಳ ಮನಸ್ಸನ್ನು ಚುಚ್ಚಿ ಕಚ್ಚಿ ಕಾಡುತ್ತವೆ.

* * * *

ಪವಿತ್ರಳ ಆತ್ಮಸಾಕ್ಷಿ "ಪವಿತ್ರ ಅಂತ ಹೆಸರಿಟ್ಕೊಂಡು ಅಪವಿತ್ರ ಆಗಬೇಡ. ಈ ದೇಶದ ಸಂಸ್ಕೃತಿಗೆ ಶ್ರೀಮಂತವಾಗಿರುವ ಶೀಲನೇ ದೊಡ್ಡು" ಎಂದಾಗ ಪವಿತ್ರಳ ಮನಸ್ಸು "ಈ ದೇಶದ ಸಂಸ್ಕೃತಿಗಿಂತ ನನ್ನ ಮಗನ ಭವಿಷ್ಯನೇ ನನ್ಗೆ ದೊಡ್ಡದಾಗಿ ಕಾಣ್ತಿದೆ, ನನ್ಗೆ ನನ್ನ ಮೈಗಿಂತ ನನ್ನ ಮಗನೇ ಮುಖ್ಯ" ಎಂದುಕೊಂಡು ಪವಿತ್ರ ಶೀಲ ತ್ಯಾಗಕ್ಕೆ ತಯಾರಾಗಿ ಎದ್ದು ನಿಲ್ಲುತ್ತಾಳೆ. ಮಲಗಿಕೊಂಡು ಟಿ.ವಿ. ನೋಡುತ್ತಿರುವ ಸೂರ್ಯನ ಕಡೆ ನೋಡಿ "ಮಗ್ನೆ ರಂಭಾ ಮೇಡಂ ನಿನ್ಗೆ ಡೊನೇಷನ್ ಕಟ್ಟೋಕೆ ಬೆಂಗಳೂರ್ನಲ್ಲಿರುವ ಅವರ ಫ್ರೆಂಡ್ ಹತ್ತಿರ ದುಡ್ ಈಸ್ಕೊಡ್ತಾರೆ, ಅದ್ಕೆ ಈ ರಾತ್ರಿನೆ ಅವರ ಜೊತೆ ನಾನು ಬೆಂಗಳೂರಿಗೆ ಹೋಗಬೇಕು. ಬೆಳಿಗ್ಗೆ ಬೇಗ ಬಂದ್‌ಬುಡ್ತೀನಿ, ಹುಷಾರಾಗಿ ಮಲ್ಕೊ" ಎಂದಾಗ ಸೂರ್ಯ ಖುಷಿಯಿಂದ ಕಾನ್ವೆಂಟ್‌ಗೆ ಸೇರುತ್ತೇನೆ ಎಂಬ ಆಸೆಯಿಂದ ಅಮ್ಮ ಹೇಳಿದಂತೆ ಕೇಳುತ್ತಾನೆ.


ಪವಿತ್ರ ಡ್ರೆಸ್ಸಿಂಗ್ ರೂಂಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾಳೆ. ಸೂರ್ಯ ಟಿ.ವಿ. ನೋಡುತ್ತಿರುತ್ತಾನೆ. ಟಿ.ವಿಯಲ್ಲಿ "ಸರ್ಕಾರಿ ಶಾಲೆ ಉಳಿಸಿ ಅಭಿಯಾನ" ಕಾರ್ಯಕ್ರಮ ಪ್ರಸಾರವಾಗುತ್ತಿರುತ್ತದೆ. ಹಿರಿಯ ಶಿಕ್ಷಕ ಸಭೆಯಲ್ಲಿರುವ ಶಾಲಾ ಮಕ್ಕಳು ಮತ್ತು ಪೋಷಕರ ಮುಂದೆ ಮಾತನಾಡುತ್ತಾನೆ. ಪವಿತ್ರ ಅಲಂಕಾರ ಮಾಡಿಕೊಳ್ಳುತ್ತಾ ಆ ಶಿಕ್ಷಕನ ಮಾತನ್ನು ಕೇಳುತ್ತಿರುತ್ತಾಳೆ. ಶಿಕ್ಷಕನ ಮಾತು "ಆ ಕಾಲದಲ್ಲಿ ಶಿಕ್ಷಣ ಜ್ಞಾನಾರ್ಜನೆಯ ಸಂಕೇತವಾಗಿತ್ತು, ಈ ಕಾಲದಲ್ಲಿ ಅದೇ ಶಿಕ್ಷಣ ಧನಾರ್ಜನೆಯ ಸಂಕೇತವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಕಪಿಮುಷ್ಠಿಯಲ್ಲಿ ಸಿಲುಕಿ ಸರಸ್ವತಿ ವಿಲವಿಲ ಅಂತ ಹೊದ್ದಾಡ್ತಾಯಿದ್ದಾಳೆ. ಈ ಸಮಾಜ ಎಂಬ ಸಮುದ್ರ ಶಿಕ್ಷಣ ವ್ಯಾಪಾರ ಎಂಬ ಕಾರ್ಕೋಟಕ ವಿಷದಿಂದ ಕಲ್ಮಷವಾಗಿದೆ. ಈ ದೇಶದ ಶಿಕ್ಷಣ ಸಂಪತ್ತು ಪರದೇಶದ ಅಭಿವೃದ್ಧಿಗೆ ದಾರಿ ದೀಪ ಆಗುವುದರ ಬದಲು ಮೊದಲು ಅದು ಈ ಭವ್ಯ ಭಾರತಕ್ಕೆ ಹೊಸ ಹೊಂಬೆಳಕಾಗಿ ಪ್ರಜ್ವಲಿಸಬೇಕು. ಶಿಕ್ಷಣದಿಂದ ವಂಚಿತರಾದವರು ಈ ದೇಶದಲ್ಲಿ ನಾನು ಹುಟ್ಟೋಕೆ ಅದೇನ್ ಪಾಪ ಮಾಡಿದ್ದೆ ಅನ್ನೋ ಬದ್ಲು, ಈ ದೇಶದಲ್ಲಿ ನಾನು ಜನಿಸೋಕೆ ಅದೆಷ್ಟು ಪುಣ್ಯ ಮಾಡಿದ್ದೆ, ಅನ್ನೋಬೇಕು, ಇದೆಲ್ಲಾ ಸಾಧ್ಯ ಆಗೋದು ಸರ್ಕಾರಿ ಶಾಲೆಯಿಂದ ಮಾತ್ರ" ಎನ್ನುತ್ತಾನೆ. ಪವಿತ್ರ ಸೀರೆ ಉಟ್ಟುಕೊಳ್ಳುತ್ತಿರುತ್ತಾಳೆ. ಸೂರ್ಯ ಟಿ.ವಿ. ನೋಡುತ್ತಿರುತ್ತಾನೆ. ಶಿಕ್ಷಕ ಮಾತು ಮುಂದುವರೆಸಿ "ಬನ್ನಿ ಮಕ್ಳಾ ಸರ್ಕಾರಿ ಶಾಲೆಗೆ ಸೇರಿ, ನಿಮ್ಮ ತಂದೆತಾಯಿನ ಸಾಲದ ಹೊರೆಯಿಂದ ಕಾಪಾಡಿ. ಕಾನ್ವೆಂಟು, ಖಾಸಗಿ ಶಾಲೆಗಳ ವ್ಯಾಮೋಹಕ್ಕೆ ಬಲಿಯಾಗಬೇಡಿ. ದುಡ್ಡಿರೋ ಶ್ರೀಮಂತ್ರು ಕಾರಲ್ಲಿ ಓಡಾಡ್ತಾರೆ. ಬಡವರು ಸರ್ಕಾರಿ ಬಸ್ಸಲ್ಲಿ ಓಡಾಡ್ತಾರೆ, ಅದೇ ರೀತಿ ಶ್ರೀಮಂತರಿಗೆ ಕಾನ್ವೆಂಟು, ಪ್ರೈವೇಟ್ ಸ್ಕೂಲು, ಬಡವರಿಗೆ ಗೌರ್ನಮೆಂಟ್ ಸ್ಕೂಲು. ಬಡವರ ಪಾಲಿಗೆ ಕಾನ್ವೆಂಟು ಕರೆಂಟ್ ಇದ್ದಂಗೆ ಅದನ್ನ ಮುಟ್ಟಬೇಡಿ ಅಂತ ಸರ್ಕಾರ ನಂದಾದೀಪದಂತಿರುವ ಸರ್ಕಾರಿ ಶಾಲೆಗಳನ್ನ ಕೊಟ್ಟಿದೆ. ದುಡ್ಡಿಲ್ದೆ ಹೋದ್ರು, ಕೈಲಾಗದಿದ್ರು, ಪ್ರೆಸ್ಟೀಜ್‌ಗೋಸ್ಕರ ಈ ಕಾನ್ವೆಂಟು, ಪ್ರೈವೇಟ್ ಸ್ಕೂಲ್‌ಗಾಗಿ ಲಕ್ಷ ಲಕ್ಷ ಸಾಲ ಮಾಡಿ ಬಡವರು ತಮ್ಮ ಬದುಕನ್ನೇ ಬಲಿಕೊಡ್ತಾಯಿದ್ದಾರೆ. ಎಷ್ಟೋಜನ ಬಡವರು ಇವತ್ತು ಆ ಸಾಲ ತೀರಿಸೋಕಾಗದೆ ಊರನ್ನೇ ಬಿಟ್ಟು ಹೋಗಿದ್ದಾರೆ. ಇದರಿಂದ ಅವರ ಮಕ್ಳು ತಬ್ಬಲಿಗಳಾಗಿ, ಅನಾಥರಾಗಿ, ಅಲೆಮಾರಿಗಳಾಗಿದ್ದಾರೆ. ಬೀದಿ ಬಿಕಾರಿಗಳಾಗಿದ್ದಾರೆ. ಬೀದಿ ಹೆಣವಾಗಿ ಹೋಗಿದ್ದಾರೆ. ಬೇಡ ಮಕ್ಳೇ ದುಡ್ಡಿಲ್ದಿರೋ ನಿಮ್ಮ ತಂದೆ ತಾಯಿಗೆ ಕಷ್ಟ ಕೊಡಬೇಡಿ. ಅಪ್ಪ ಅಮ್ಮನಿಂದ ದೂರ ಆಗಬೇಡಿ. ಸಾಲ ಮಾಡಿ ಮೊದ್ಲು ಅಪ್ಪ ಊರ್ ಬಿಡ್ತಾನೆ, ಆ ಮೇಲೆ ಅಮ್ಮ ಊರ್ ಬಿಡ್ತಾಳೆ ಇಲ್ಲ ಪ್ರಾಣ ಬಿಡ್ತಾಳೆ. ಗೌರ್ನಮೆಂಟ್ ಸ್ಕೂಲಲ್ಲಿ ಓದುದ್ರೆ ಅಪ್ಪ ಅಮ್ಮ ಸಾಲ ಮಾಡಲ್ಲ. ನಿಮ್ಮ ಜೊತೆಲೆ ಇರ್ತಾರೆ. ಅಪ್ಪ ಅಮ್ಮನ ಪ್ರೀತಿನಾ ಅವರ ಜೊತೆ ಬಾಳೋ ರೀತಿನಾ ಕಿತ್ಕಳೋ ಕಾನ್ವೆಂಟ್ ಯಾಕ್ ಬೇಕು, ಗೌರ್ನಮೆಂಟ್ ಸ್ಕೂಲಲ್ಲಿ ಓದುದ್ರು ದೊಡ್ಡ ದೊಡ್ಡ ಆಫೀಸರ್ ಆಗಬಹುದು. ವಿದ್ಯೆ ಕೊಟ್ಟು ಲಕ್ಷಾಂತರ ರೂಪಾಯಿ ಸುಲಿಗೆ ಮಾಡೋ ಪ್ರೈವೇಟ್ ಸ್ಕೂಲ್ ಬೇಕೋ? ವಿದ್ಯೆನೂ ಕೊಟ್ಟು, ಸ್ಕಾಲರ್ ಶಿಪ್ ರೂಪದಲ್ಲಿ ದುಡ್ಡು ಕೊಡೋ ಗೌರ್ನಮೆಂಟ್ ಸ್ಕೂಲ್ ಬೇಕೋ? ಯಾವ್‌ದು ಬೆಸ್ಟು ಎಂದಾಗ ಮಕ್ಕಳು ಒಕ್ಕೊರಲಿನಿಂದ "ಗೌರ್ನಮೆಂಟ್ ಸ್ಕೂಲ್ ಬೆಸ್ಟು" ಎನ್ನುತ್ತಾರೆ.

* * * *

ಈ ಕಾರ್ಯಕ್ರಮ ನೋಡಿದ ಸೂರ್ಯನ ಮನಸು ಪರಿ ವರ್ತನೆಯಾಗುತ್ತದೆ. ಅಮ್ಮ ಅಲ್ಲಿ ಇಲ್ಲಿ ಸಾಲ ಕೇಳಿ ಅವಮಾನಿತಳಾದ ಘಟನೆಯನ್ನು ನೆನೆಯುತ್ತಾನೆ. ಅವನ ಅಪ್ಪ ಸಾಲ ಮಾಡಿ ಊರು ಬಿಟ್ಟು ಹೋದ ಸಂಗತಿಯನ್ನು ನೆನೆದು ಮೌನವಾಗಿ ಅಳುತ್ತಾನೆ. ಶಿಕ್ಷಕ ಹೇಳಿದ ಮಾತು ಮತ್ತೆ ನೆನಪಾಗುತ್ತದೆ. "ಸಾಲ ಮಾಡಿ ಮೊದ್ಲು ಅಪ್ಪ ಊರ್ ಬಿಡ್ತಾನೆ, ಆ ಮೇಲೆ ಅಮ್ಮ ಊರ್ ಬಿಡ್ತಾಳೆ ಇಲ್ಲ, ಪ್ರಾಣ ಬಿಡ್ತಾಳೆ, ಗೌರ್ನಮೆಂಟ್ ಸ್ಕೂಲಲ್ಲಿ ಓದುದ್ರೆ ಅಪ್ಪ ಅಮ್ಮ ಸಾಲ ಮಾಡಲ್ಲ, ಓಡೋಗಲ್ಲ, ನಿಮ್ಮ ಜೊತೆಗೆ ಸಂತೋಷವಾಗಿರ್ತಾರೆ" ಈ ಮಾತುಗಳು ಸೂರ್ಯನ ಮನಸಿಗೆ ನಾಟಿದಾಗ ಸೂರ್ಯ ರಾಯಲ್ ಕಾನ್ವೆಂಟ್ ಅರ್ಜಿಯನ್ನು ಹರಿದು ಎಸೆಯುತ್ತಾನೆ.

ಪವಿತ್ರ ಕೈಬಳೆ, ಕಾಲ್ಗೆಜ್ಜೆ ಹಾಕ್ಕೊಂಡು, ರೇಷ್ಮೆ ಸೀರೆ ಧರಿಸಿ, ಮಲ್ಲಿಗೆ ಹೂ ಮುಡಿದು ಮೊದಲ ರಾತ್ರಿಗೆ ಸಿಂಗಾರಗೊಂಡ ವಧುವಿನಂತೆ ಅಲಂಕಾರ ಭೂಷಿತಳಾಗಿ ಕಂಬನಿ ತುಂಬಿಕೊಂಡು ಭಾರವಾದ ಮನಸಿನಿಂದ ರೂಂ ಬಾಗಿಲು ತೆರೆದು ಹೊರಬಂದಾಗ ಸೂರ್ಯ ಅವಳನ್ನು ಗಟ್ಟಿಯಾಗಿ ತಬ್ಬಿಕೊಂಡು ಅಳುತ್ತಾ "ಅಮ್ಮ ನಾನು ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ತಿನಿ" ಆ ಸ್ಕೂಲಲ್ಲೇ ಚೆನ್ನಾಗಿ ಓದಿ ದೊಡ್ಡ ಆಫೀಸರ್ ಆಗ್ತೀನಿ, ನೀನು ಸಾಲ ಮಾಡಬೇಡ, ಅಪ್ಪನ ತರ ಊರು ಬಿಟ್ಟು ಹೋಗಬೇಡ" ಎಂದಾಗ ಪವಿತ್ರ ಜೋರಾಗಿ ಅಳುತ್ತಾ ಸೂರ್ಯನನ್ನು ಗಟ್ಟಿಯಾಗಿ ತಬ್ಬಿಕೊಂಡು ಅವನ ಕಂಬನಿ ಒರೆಸುತ್ತಾಳೆ. ಅವನು ಕೂಡ ಇವಳ ಕಂಬನಿ ಒರೆಸುತ್ತಾನೆ. ಇಬ್ಬರ ಮುಖದಲ್ಲಿ ಹೂ ನಗು ಅರಳುತ್ತದೆ.

* * * *



> "ನಿನ್ನ ಫ್ರೆಂಡ್ಸ್ ಎಲ್ಲಾ ಶ್ರೀಮಂತ್ರು ಮಕ್ಳು, ಆದ್ರೆ ನಾವು ಬಡವರಪ್ಪ! ಅಕ್ಕಪಕ್ಕದ ಮನೆ ಮಕ್ಕಳೆಲ್ಲಾ ಗೌರ್ನಮೆಂಟ್ ಸ್ಕೂಲಲ್ಲೇ ಓದುತ್ತಾ ಅವರ ಅಪ್ಪ ಅಮ್ಮನ ಜೊತೆ ಎಷ್ಟು ಸಂತೋಷದಿಂದ ಇದ್ದಾರೆ, ಆದ್ರೆ ನೀನೋದೋ ಕಾನ್ವೆಂಟ್ ನಮ್ಮ ಸಂತೋಷವನ್ನೇ ಕಿತ್ಕೊಬಿಡ್ತು, ನಿನ್ನ ಕಾನ್ವೆಂಟಿಗೆ ಸೇರ್ಸೋಕೆ ನಿಮ್ಮಪ್ಪ ಲಕ್ಷಾಂತರ ರೂಪಾಯಿ ಸಾಲ ಮಾಡಿ, ನಮ್ಮನ್ನ ಬೇವರ್ಸಿ ಮಾಡಿ ಊರ್ನ ಬಿಟ್ಟು ಹೋಗ್‌ಬಿಟ್ರು. ಒಂಟಿ ಹೆಂಗ್ಸು ನಾನು ಈಗ ಈ ರಾಯಲ್ ಕಾನ್ವೆಂಟ್‌ಗೆ ಸೇರ್ಸೋಕೆ ಅಷ್ಟೊಂದ್ ದುಡ್ಡು ಎಲ್ಲಿಂದ ತರ್ಲಿ, ಅದ್ಕೆ ಮಗ್ನೆ ಗೌರ್ನಮೆಂಟ್ ಸ್ಕೂಲ್‌ಗೆ ಸೇರ್ಕೋ..."

ಶಿಕ್ಷಕರು ಮಕ್ಕಳ ಪ್ರತಿಭೆ ಗುರ್ತಿಸಿ ಪ್ರೋತ್ಸಾಹಿಸಿ

ಶಾಸಕ ಜಿ.ಡಿ.ಹರೀಶ್‌ಗೌಡ



ಹುಣಸೂರು, ಮೇ 27– ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಮಕ್ಕಳನ್ನು ಪಠ್ಯಕ್ಕೆ ಸೀಮಿತ ಗೊಳಿಸದೆ ಸಾಮಾನ್ಯ ಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡಿ ಮಕ್ಕಳ ಪ್ರತಿಭೆ ಗುರುತಿಸುವ ಕೆಲಸ ಶಿಕ್ಷಕರಿಂದ ಆಗಬೇಕಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಪ್ರಾಥಮಿಕ, ಪ್ರೌಢಶಾಲಾ ಮುಖ್ಯ ಶಿಕ್ಷಕರ ವಾರ್ಷಿಕ ಶೈಕ್ಷಣಿಕ ಚಟುವಟಿಕೆ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳಿಗೆ ಗುಣ ಮಟ್ಟದ ಶಿಕ್ಷಣ ನೀಡುವ ಮೂಲಕ ಅವರ ಉತ್ತಮ ಭವಿಷ್ಯಕ್ಕೆ ಅಡಿಪಾಯ ಹಾಕಬೇಕು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನಲ್ಲಿ ಶೇ.93ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಯಾಗಿದ್ದು, ಉಳಿದ ಶೇ.7ರಷ್ಟು ವಿದ್ಯಾರ್ಥಿ ಗಳಿಗೆ ಹಿನ್ನಡೆಯಾಗಲು ಕಾರಣವೇನು ಎಂಬುದನ್ನು ಅವಲೋಕಿಸಿ ನ್ಯೂನತೆ ಸರಿಪಡಿಸಿ ಕೊಳ್ಳಲು ಗಮನ ಹರಿಸಬೇಕು ಎಂದರು.

ಈ ಬಾರಿ ಹುಣಸೂರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ 3ನೇ ಸ್ಥಾನದಲ್ಲಿದ್ದು, ಮುಂದಿನ ವರ್ಷ ಜಿಲ್ಲೆಗೆ ಪ್ರಥಮ ಸ್ಥಾನ ಬರಲು ಶ್ರಮಿಸಬೇಕು. ಇದಕ್ಕಾಗಿ ನುರಿತ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಪೂರಕ ಸಿದ್ಧತೆ ಕೈಗೊಳ್ಳುವಂತೆ ತಿಳಿಸಿದರು.

ರಾಜ್ಯ ಸರ್ಕಾರ ಸರ್ವರಿಗೂ ಅನು ಕೂಲವಾಗುವ ರೀತಿ ಶಿಕ್ಷಣ ನೀತಿ ರೂಪಿ ಸಿದೆ. ಇದರಲ್ಲಿ ಸರ್ಕಾರಿ ಹಾಗೂ ಖಾಸಗಿ ಶಾಲೆಗಳು ಸೇರಿವೆ. ಆದರೆ ಖಾಸಗಿ ಶಾಲೆ ಗಳಲ್ಲಿ ಉತ್ತಮ ಫಲಿತಾಂಶ ಬರುತ್ತಿರುವ ಬಗ್ಗೆ ಅವಲೋಕನ ಮಾಡಿಕೊಳ್ಳಬೇಕು ಎಂದರು.

ಶಿಕ್ಷಕರು ಮಕ್ಕಳಿಗೆ ಮುಂದೆ ನಿಂದನಾ ಕ್ಷೇತ್ರವಾಗಬೇಕು ಎಂದ ಶಾಸಕರು ಶಿಕ್ಷಕರು ಮಕ್ಕಳ ಮನಸ್ಸನ್ನು ಅರಿತು ಅವರಿಗೆ ಅರ್ಥವಾಗುವ ರೀತಿ ಶಿಕ್ಷಣ ನೀಡುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲೂ ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು ಎಂದರು.

ಬಿಇಒ ರೇವಣ್ಣ ಮಾತನಾಡಿ, ಹುಣ ಸೂರಲ್ಲಿ 390 ಸರ್ಕಾರಿ ಶಾಲೆಗಳಿದ್ದು, ಪ್ರಸ್ತುತ 749 ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇನ್ನೂ 256 ಶಿಕ್ಷಕರ ಅವಶ್ಯಕತೆ ಇದ್ದು, ಈ ಕೊರತೆ ನೀಗಿಸಲು ಅತಿಥಿ ಶಿಕ್ಷಕರನ್ನು ನಿಯೋಜಿಸಲು ಸರ್ಕಾರದ ಅನುಮತಿ ಪಡೆಯುವಂತೆ ಶಾಸಕರಿಗೆ ಮನವಿ ಮಾಡಿದರು.

ತಾಲೂಕಿನ 104 ಶಾಲೆಗಳಲ್ಲಿ 307 ಕೊಠಡಿ ದುರಸ್ತಿ, 65 ಶಾಲೆಗಳಲ್ಲಿ 115 ಕೊಠಡಿ ನೆಲಸಮಗೊಳಿಸಿ ಹೊಸ ಕಟ್ಟಡ ನಿರ್ಮಾಣ, 27 ಶಾಲೆಗಳಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಶೌಚಾಲಯ, 30 ಶಾಲೆಗಳಲ್ಲಿ ಬಿಸಿಯೂಟ ಅಡುಗೆ ಮನೆ ನಿರ್ಮಿಸಬೇಕಾಗಿದೆ ಅಲ್ಲದೆ ಸರ್ಕಾರಿ ಶಾಲೆಗಳಿಗೆ 1496 ಆಸನದ ವ್ಯವಸ್ಥೆ ಬೇಕಾಗಿದೆ ಎಂದರು.

ವೈದ್ಯಕೀಯ ಭತ್ಯೆಗೆ ಮನವಿ: ಕಚೇರಿ ವಿಷಯ ನಿರ್ವಾಹಕರ ಬೇಜವಾಬ್ದಾರಿ ಯಿಂದಾಗಿ 4 ವರ್ಷದಿಂದ 1.94 ಕೋಟಿ ರೂ. ವೈದ್ಯಕೀಯ ಭತ್ಯೆ ಶಿಕ್ಷಕರಿಗೆ ಪಾವತಿ ಯಾಗಬೇಕಾಗಿದೆ. ಇದನ್ನು ಮಂಜೂರು ಮಾಡಿಸಿಕೊಡುವಂತೆ ಸಂಘದ ನಿರ್ದೇಶಕ ರಾದ ಶಶಿಕುಮಾರ್ ಮತ್ತು ಚೆನ್ನವೀರಪ್ಪ ಶಾಸಕ ಹರೀಶ್‌ಗೌಡರಿಗೆ ಮನವಿ ಮಾಡಿದರು.

ಶಾಸಕರ ಭರವಸೆ: ಸರ್ಕಾರಿ ಶಾಲೆ ಶಿಕ್ಷಕರ ವೈದ್ಯಕೀಯ ಭತ್ಯೆ 1.94 ಕೋಟಿ ರೂ. ಸೇರಿದಂತೆ ಕ್ಷೇತ್ರದ ಶಾಲೆಗಳ ದುರಸ್ಥಿ ಕಾಮಗಾರಿಗಳಿಗೂ ಹಣ ಬಿಡುಗಡೆಗೊಳಿಸಲು ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ಇದೇ ವೇಳೆ ಶಾಸಕ ಜಿ.ಡಿ.ಹರೀಶ್ ಗೌಡರನ್ನು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ ಸನ್ಮಾನಿಸಲಾಯಿತು. ಕಾರ್ಯ ಕ್ರಮದಲ್ಲಿ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ನರಸಿಂಹ, ರಂಗಸ್ವಾಮಿ, ಶಶಿಕುಮಾರ್, ಚೆನ್ನವೀರಪ್ಪ, ಬಾಲರಾಜ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದೇ ಗೌಡ, ಪಿ.ಎಸ್.ಮಹೇಶ್ ಮತ್ತು ಪದಾಧಿ ಕಾರಿಗಳು, ಕಸಾಪ ಅಧ್ಯಕ್ಷ ಮಹದೇವು ಮತ್ತಿತರರಿದ್ದರು. ಸಂತೋಷ್ ಕುಮಾರ್, ರಾಜೇಂದ್ರ, ಗೋವಿಂದೇ ಗೌಡ, ನರಸಿಂಹ, ರಂಗಸ್ವಾಮಿ, ಕರಿಯಪ್ಪ, ಶಶಿಕುಮಾರ್, ಬಾಲರಾಜ್ ಇನ್ನಿತರರಿದ್ದರು.

ಕೆ.ಆರ್.ನಗರ ಪಿಎಲ್‌ಡಿ ಬ್ಯಾಂಕ್‌ಗೆ ಚಂದ್ರೇಗೌಡ ಅಧ್ಯಕ್ಷ



ಕೆ.ಆರ್.ನಗರ, ಮೇ 27– ನಗರದ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಕೆ.ಟಿ.ಚಂದ್ರೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷ ಬಿ.ಎಸ್.ಚಂದ್ರಹಾಸ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಚಂದ್ರೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷ ಸಿದ್ದನಾಯಕ, ನಿರ್ದೇಶಕರಾದ ಬಿ.ಸಿದ್ದೇಗೌಡ, ಆರ್.ಸಿ.ರಮೇಶ್, ಎನ್.ಸಿ.ಪ್ರಸಾದ್, ಮಲ್ಲಿಕಾರ್ಜುನ್, ಚಂದ್ರಶೇಖರ್, ಪರಶುರಾಮಯ್ಯ, ಕಲಾವತಿ, ಪುಷ್ಪರೇವಣ್ಣ, ರಾಮೇಗೌಡ ಹಾಜರಿದ್ದರು.

ನಿರ್ದೇಶಕರಾದ ಪ್ರೇಮ ಕುಳ್ಳಬೋರೇಗೌಡ, ಎಂ.ಎಸ್.ಹರಿಚಿದಂಬರ ಗೈರು ಹಾಜ ರಾಗಿದ್ದರು. ನೂತನ ಅಧ್ಯಕ್ಷರನ್ನು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಅಭಿನಂದಿಸಿದರು. ಬಳಿಕ ಅಧ್ಯಕ್ಷ ಚಂದ್ರೇಗೌಡ ಮತ್ತು ನಿರ್ದೇಶಕರು ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭ ಪುರಸಭೆ ಮಾಜಿ ಅಧ್ಯಕ್ಷ ಕೆ.ಜಿ.ಸುಬ್ರಹ್ಮಣ್ಯ, ಸದಸ್ಯರಾದ ಶಂಕರ್, ಶಿವಕುಮಾರ್, ಮಾಜಿ ಸದಸ್ಯ ಕೆ.ಎಲ್.ಕುಮಾರ್, ಮುಖಂಡರಾದ ರಂಗೇಶ್ ಕುಮಾರ್, ಗವಿಯಪ್ಪ, ದೊಡ್ಡಕೊಪ್ಪಲು ರವಿ, ಲೋಕೇಶ್ ಭರಣಿ, ಮಂದೀಪ್, ಸಾಗರ್, ಜವರಯ್ಯ, ವಕೀಲರಾದ ಕೆ.ಸಿ.ಹರೀಶ್, ಪ್ರಸಾದ್, ಪ್ರದೀಪ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಮಹದೇವ್, ನಗರಾಧ್ಯಕ್ಷ ಎಂ.ಜೆ.ರಮೇಶ್, ವಕ್ತಾರ ಸೈಯದ್ ಜಾಬೀರ್ ಮತ್ತಿತರರಿದರು.

ಹುಣಸೂರು: 2.47 ಕೋಟಿ ಮೌಲ್ಯದ ಮದ್ಯ ವಶ

26 ವಾಹನ ವಶ, 17ಮಂದಿ ಬಂಧನ: ಮೂವರು ಪರಾರಿ



ಹುಣಸೂರು, ಮೇ 27– ವಿಧಾನ ಸಭಾ ಚುನಾವಣೆ ವೇಳೆ ಹುಣಸೂರು ಅಬಕಾರಿ ಇಲಾಖೆ ವತಿಯಿಂದ ನಡೆಸಿದ ಕಾರ್ಯಾಚರಣೆಯಲ್ಲಿ ಒಟ್ಟು 2.47 ಕೋಟಿ ಮೌಲ್ಯದ ವಿವಿಧ ಬ್ರಾಂಡ್‌ನ 84 ಸಾವಿರ ಲೀ. ಮದ್ಯ ಹಾಗೂ 26 ವಾಹನಗಳನ್ನು ವಶಕ್ಕೆ ಪಡೆದು, 20 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅಬಕಾರಿ ಉಪ ಅಧೀಕ್ಷಕ ಕೆ.ಟಿ.ವಿಜಯ ಕುಮಾರ್ ಮಾರ್ಗದರ್ಶನದಲ್ಲಿ ಚುನಾ ವಣೆ ನೀತಿ ಸಂಹಿತೆ ಅನ್ವಯ ಹುಣ ಸೂರು ವೃತ್ತದಲ್ಲಿ ನಡೆಸಿದ ಕಾರ್ಯಾ ಚರಣೆಯಲ್ಲಿ ನೀತಿ ಸಂಹಿತೆ ಉಲ್ಲಂಘಿಸಿ ಅಕ್ರಮ ಮದ್ಯ ಸಾಗಾಟ, ಸಂಗ್ರಹಣೆ ಅಡ್ಡೆಗಳ ಮೇಲೆ ಇಷ್ಟೊಂದು ದೊಡ್ಡ ಮೊತ್ತದ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ್ದ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

2.47 ಕೋಟಿ ಮೌಲ್ಯದ ಮದ್ಯ ವಶ: ಕಾರ್ಯಾಚರಣೆ ವೇಳೆ 1.51 ಕೋಟಿ ರೂ. ಮೌಲ್ಯದ ವಿವಿಧ ಬ್ರಾಂಡ್‌ನ 26 ಸಾವಿರ ಲೀ.ಮದ್ಯ, 96 ಲಕ್ಷರೂ. ಮೌಲ್ಯದ 57 ಸಾವಿರ ಲೀ. ಬಿಯರ್ ಹಾಗೂ 16.5 ಸಾವಿರ ಬೆಲೆಯ 19 ಲೀ. ವೈನ್ ಸೇರಿದಂತೆ ಒಟ್ಟಾರೆ 2.47 ಕೋಟಿ ಮೌಲ್ಯದ 84 ಸಾವಿರ ಲೀ. ಮದ್ಯ, 19 ಲೀ. ವೈನ್ ವಶಪಡಿಸಿಕೊಂಡಿದ್ದು, ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ್ದ ಒಂದು ಇನ್ನೋವಾ ಸೇರಿದಂತೆ 4 ಕಾರು, 10 ದ್ವಿಚಕ್ರ ವಾಹನ, 2 ಗೂಡ್ಸ್ ವಾಹನಗಳನ್ನು ವಶಕ್ಕೆ ಪಡೆಯಲಾಗಿದ್ದು, 20 ಮಂದಿ ಆರೋಪಿಗಳ ಪೈಕಿ 17 ಮಂದಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿತ್ತು. ಎಲ್ಲರೂ ಜಾಮೀನಿನ ಮೇಲೆ ಬಿಡುಗಡೆ ಯಾಗಿದ್ದರೆ. ಉಳಿದ ಮೂವರು ಆರೋಪಿ ಗಳು ತಲೆ ಮರೆಸಿಕೊಂಡಿದ್ದಾರೆ. ಎಲ್ಲ ಪ್ರಕರಣಗಳು ತನಿಖಾ ಹಂತದಲ್ಲಿದೆ ಎಂದು ಅಬಕಾರಿ ನಿರೀಕ್ಷಕ ನಾಗಲಿಂಗಸ್ವಾಮಿ ತಿಳಿಸಿದರು. ಕಾರ್ಯಾಚರಣೆ ವೇಳೆ ಅಬಕಾರಿ ಸಬ್‌ಇನ್ಸ್‌ಪೆಕ್ಟರ್ ಜಯಂತಿ, ಸುರೇಶ್ ಹಾಗೂ ತಂಡ ಭಾಗವಹಿಸಿದ್ದರು.

ಬೈದು ಭಿಕ್ಷೆ ಬೇಡುವ ವಿಶಿಷ್ಟ ಬೇಡು ಹಬ್ಬ



ಹುಣಸೂರು, ಮೇ 27– ಆದಿವಾಸಿಗಳು ತಮ್ಮ ಆರಾಧ್ಯ ದೈವ ಶ್ರೀ ಭದ್ರಕಾಳಿ ಹಾಗೂ ಅಯ್ಯಪ್ಪಸ್ವಾಮಿ ದೇವರ ಹಬ್ಬವನ್ನು ಹಳ್ಳಿ–ಹಳ್ಳಿಗಳಲ್ಲಿ ಭಿಕ್ಷೆ ಬೇಡುತ್ತಾ ದೇವರು, ಧಣಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ಕುಣಿದು–ಕುಪ್ಪಳಿಸುತ್ತಾ ಬೇಡು ಹಬ್ಬವನ್ನು ವಿಶಿಷ್ಟವಾಗಿ ಆಚರಿಸಿ ಸಂಭ್ರಮಿಸಿದರು.

ಆದಿವಾಸಿಗಳು ತಮ್ಮ ಆರಾಧ್ಯ ದೇವರಾದ ಭದ್ರಕಾಳಿ, ಅಯ್ಯಪ್ಪಸ್ವಾಮಿ ಹೆಸರಿನಲ್ಲಿ ನಡೆಸುವ ಈ ಹಬ್ಬಕ್ಕೆ ಹನಗೋಡು ಹೋಬಳಿ ವ್ಯಾಪ್ತಿಯ 35ಕ್ಕೂ ಹೆಚ್ಚು ಹಾಡಿ ಗಿರಿಜನರು ಕಾಡಿನಲ್ಲಿ ಸಿಗುವ ಸೊಪ್ಪು, ಹಳೆ, ಹರಿದ ಬಟ್ಟೆ ಹಾಗೂ ಗೋಣಿ ಚೀಲಗಳಿಂದ ವಿವಿಧ ವೇಷ ತೊಟ್ಟು, ಬಣ್ಣ ಹಚ್ಚಿಕೊಂಡು ಒಣಗಿದ ಸೋರೆಕಾಯಿ ಬುರುಡೆ, ಪ್ಲಾಸ್ಟಿಕ್ ಡಬ್ಬಿ ಹಾಗೂ ಟಿನ್‌ಗಳನ್ನು ಬಳಸಿ ಬ್ಯಾಂಡ್ ಬಾರಿಸುತ್ತಾ ಆಕರ್ಷಕವಾಗಿ ಕುಣಿಯುತ್ತಾ, ಸಿಕ್ಕ–ಸಿಕ್ಕವರನ್ನು ಕೆಟ್ಟ ಪದಗಳಿಂದ ನಿಂದಿಸುತ್ತಾ ಭಿಕ್ಷಾಟನೆ ಮಾಡುತ್ತಾ ಹಣ, ದವಸ ಧಾನ್ಯಗಳನ್ನು ಸಂಗ್ರಹಿಸಿದರು. ಈ ಹಬ್ಬವನ್ನು ಮೂಲನಿವಾಸಿ ಗಿರಿಜನ ಜನಾಂಗಕ್ಕೆ ಸೇರಿದ ಬೆಟ್ಟಕುರುಬ, ಜೇನುಕುರುಬ, ಬುಡಕಟ್ಟು ಜನಾಂಗಕ್ಕೆ ಸೇರಿದವರು ಹೆಚ್ಚಾಗಿ ಆಚರಿಸುವ ಈ ಬೇಡು ಹಬ್ಬದ ಸಂಭ್ರಮದಲ್ಲಿ ಕೊಡಗಿನ ಕಾಡಂಚಿನ ಜನರು ಸೇರಿ ಆಚರಿಸುವರು.

ಧಣಿಗೆ ಬೈಯ್ದು ಕೋಪ ತಣಿಸಿಕೊಳ್ಳುವ ಹಬ್ಬ: ಈ ಹಿಂದೆ ಕೊಡಗಿನ ಜಮೀನ್ದಾರರು ಕೂಲಿ ಕಾರ್ಮಿಕರನ್ನು ವರ್ಷವಿಡೀ ಬೈಯ್ಯುತ್ತಿದ್ದರು. ಹೀಗಾಗಿ ಗಿರಿಜನರು ಒಂದು ದಿನ ಧಣಿಗಳಿಗೆ ಬೈದು ತಮ್ಮ ಆಕ್ರೋಶ ತೋಡಿಕೊಂಡು ದೇವರಲ್ಲಿ ಪೂಜೆ ಸಲ್ಲಿಸಿ ಕ್ಷಮೆ ಕೇಳಿ ಕೋಪ ತಣಿಸಿಕೊಳ್ಳುವುದೇ ಈ ಕುಂಡೆ ಹಬ್ಬದ ವಿಶೇಷ. ಪ್ರತಿ ವರ್ಷದ ಮೇ ತಿಂಗಳ ಕೊನೆ ವಾರದಲ್ಲಿ ಗಿರಿಜನರು ವಿವಿಧ ವೇಷ ಧರಿಸಿ ಈ ಹಬ್ಬ ಆಚರಣೆ ಮಾಡುತ್ತಾರೆ, ದೇವರಲ್ಲಿ ಹೆಚ್ಚು ಭಯ, ಭಕ್ತಿ ಇರುವ ಆದಿವಾಸಿಗಳು ಭಕ್ತಿಯಿಂದ ಪ್ರಾರ್ಥನೆ ಮಾಡಿ ವೇಷ ಹಾಕುತ್ತಾರೆ(ಕಳಿ ಕಟ್ಟುವುದು). ನಂತರ ಕಾಲ್ನಡಿಗೆಯಲ್ಲೇ ಸುತ್ತಮುತ್ತಲ ಹಳ್ಳಿ ಸೇರಿದಂತೆ ನಗರ ಪ್ರದೇಶಗಳಲ್ಲಿ ಸುತ್ತಾಡಿ ಭಿಕ್ಷೆ ಬೇಡುತ್ತಾರೆ.

ದೇವರಿಗೆ ವಿಶೇಷ ಪೂಜೆ: ಕಾಡಿನ ದಾರಿಯಲ್ಲೇ ನಡೆದು ಈ ರೀತಿ ವಸೂಲಿ ಮಾಡಿದ ಹಣ ಮತ್ತು ದವಸ–ಧಾನ್ಯಗಳನ್ನು ವಿರಾಜಪೇಟೆ ರಸ್ತೆಯಲ್ಲಿರುವ ತಿತಿಮತಿ ಬಳಿಯ ದೇವರಪುರ ದಲ್ಲಿರುವ ಅಯ್ಯಪ್ಪ ಹಾಗೂ ಭದ್ರಕಾಳಿ ದೇವಾಲಯಕ್ಕೆ ಅರ್ಪಿಸಿ ದೇವರ ಉತ್ಸವದಲ್ಲಿ ಪಾಲ್ಗೊಂಡು ತಾವು ಮಾಡಿದ ತಪ್ಪಿಗಾಗಿ ದೇವರಲ್ಲಿ ಕ್ಷಮೆಯಾಚಿಸಿ ವಿಶೇಷ ಪೂಜೆ ಸಲ್ಲಿಸಿ, ಭಿಕ್ಷೆಯಿಂದ ಬಂದ ದವಸದಿಂದ ಅಡುಗೆ ತಯಾರಿಸಿ ಸಹಭೋಜನ ಮಾಡಿ ರಾತ್ರಿ ಇಡೀ ಉತ್ಸವ ನಡೆಸಿ, ಮಾರನೇ ದಿನ ವಾಪಸ್ಸಾಗುವರು.

ಸಚಿವ ಹೆಚ್.ಸಿ.ಮಹದೇವಪ್ಪಗೆ ಅಭಿನಂದನೆ



ತಿ.ನರಸೀಪುರ, ಮೇ 27– ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟ ಸೇರಿದ ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ತಿ.ನರಸೀಪುರ ಕ್ಷೇತ್ರದ ಮತದಾರರು ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಪುರಸಭಾ ಸದಸ್ಯ ಸಿ.ಪ್ರಕಾಶ್, ಮಹದೇವಪ್ಪನವರು ಈ ಹಿಂದೆ ಮೂರು ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಅಭಿವೃದ್ಧಿಯ ಹರಿಕಾರ ಎಂದು ಹೆಸರು ಪಡೆದಿದ್ದಾರೆ. ಈ ಬಾರಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿರುವ ಅವರು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವ ಮೂಲಕ ರಾಜ್ಯ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲಿದ್ದಾರೆ ಎಂದರು.

ಇದೇ ವೇಳೆ ಮಹದೇವಪ್ಪನವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ತಿ.ನರಸೀಪುರ ಪಟ್ಟಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಈ ವೇಳೆ ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ. ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ಸುಂದರ ನಾಯಕ, ವೆಂಕಟೇಶ್, ಗುತ್ತಿಗೆದಾರ ಕೇತಳ್ಳಿ ಮಂಜು, ಬೂದಳ್ಳಿ ಸಿದ್ದರಾಜು, ಶಿವಣ್ಣ ಇತರರಿದ್ದರು.

ಮೇ 31, ಉಚಿತ ಕಣ್ಣಿನ ತಪಾಸಣಾ ಶಿಬಿರ

ಬೆಟ್ಟದಪುರ, ಮೇ 27– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಮಾಜ ಸೇವಕರ ವೃಂದ ಹಾಗೂ ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಮೇ 31ರಂದು ಬೆಳಗ್ಗೆ 9 ಗಂಟೆಗೆ ಬೆಟ್ಟದಪುರದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಸೇವಕ ಸುನೀಲ್ ಕುಮಾರ್ ತಿಳಿಸಿದ್ದಾರೆ.



ಸಾರ್ವಜನಿಕರು ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಸದುಪಯೋಗಪಡಿಸಿ ಕೊಳ್ಳಬೇಕು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ತೆರಳುವವರಿಗೆ ವಾಹನ, ಊಟದ ವ್ಯವಸ್ಥೆ ಮಾಡಲಾಗುವುದು. ಅಲ್ಲದೇ ಈ ಹಿಂದೆ ಕಣ್ಣಿನ ತಪಾಸಣೆ ಮಾಡಿಕೊಂಡ ವರು ಸಹ ಬಂದು ತಪಾಸಣೆಗೆ ಒಳಗಾಗಬಹುದು ಎಂದು ಪ್ರಕಟಣೆ ತಿಳಿಸಿದೆ.

ತೆಲುಗಿನ ಪ್ರಸಿದ್ಧ ನಿರ್ದೇಶಕ ಕೆ.ವಾಸು ನಿಧನ

ಹೈದರಾಬಾದ್: ತೆಲುಗು ಚಿತ್ರರಂಗದ ಖ್ಯಾತ ನಿರ್ದೇಶಕ ಕೆ. ವಾಸು ಅವರು ಹೈದರಾಬಾದ್‌ನ ಕಿಮ್ಸ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಕಳೆದ ಕೆಲವು ವರ್ಷಗಳಿಂದ ಅವರು



ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಕೆಲ ದಿನಗಳಿಂದ ಅವರ ಆರೋಗ್ಯ ತುಂಬಾನೇ ಹದಗೆಟ್ಟಿತ್ತು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಮೆಗಾಸ್ಟಾರ್ ಚಿರಂಜೀವಿ ಅವರ ಮೊದಲ ಚಿತ್ರ 'ಪ್ರಣಾಮ್ ಖರೀದು' ಚಿತ್ರವನ್ನು ವಾಸು ನಿರ್ದೇಶಿಸಿದ್ದರು. ಈ ಚಿತ್ರದ ಮೂಲಕವೇ ಚಿರಂಜೀವಿ ಅವರು ಬೆಳ್ಳಿಪರದೆಗೆ ಕಾಲಿಟ್ಟರು. ವಾಸು ಅವರ ಕುಟುಂಬಕ್ಕೆ ಚಿತ್ರರಂಗದ ಜೊತೆ ಒಳ್ಳೆಯ ನಂಟಿತ್ತು. ಕೇವಲ ತೆಲುಗು ಚಿತ್ರರಂಗಕ್ಕೆ ಮಾತ್ರ ಸೀಮಿತ ಆಗಿರಲಿಲ್ಲ. ಕನ್ನಡ ಚಿತ್ರರಂಗಕ್ಕೂ ಅವರ ಕೊಡುಗೆ ಅಪಾರ. ನವರಸ ನಾಯಕ ಜಗ್ಗೇಶ್ ನಟನೆಯ ಸರ್ವರ್ ಸೋಮಣ್ಣ ಸಿನಿಮಾವನ್ನು ಕೆ. ವಾಸು ನಿರ್ದೇಶನ ಮಾಡಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಜೆಡಿಎಸ್ ಮುಖಂಡ ಗೆಜ್ಜಗಳ್ಳಿ ಲೋಕೇಶ್, ದಿ ಯೂನಿಯನ್ ರೈತ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಕಡಕೊಳ ಕುಮಾರಸ್ವಾಮಿ, ಹಾಪ್‌ಕಾಮ್ಸ್ ಮಾಜಿ ನಿರ್ದೇಶಕ ಪಿ.ಮಹೇಶ್, ಯುವ ಮುಖಂಡ ಜಮೀರ್ ಅಹ್ಮದ್, ಜಗದೀಶ್, ಮಂಜು ಇತರರಿದ್ದರು.

ಕಾರ್ಮಿಕರು ಆರೋಗ್ಯದ ಬಗ್ಗೆ ಗಮನ ಹರಿಸಿ

ಸರಗೂರು, ಮೇ 27– ಕಷ್ಟಪಟ್ಟು ದುಡಿಯುವ ಕೂಲಿ ಕಾರ್ಮಿಕರು ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್ ತಿಳಿಸಿದರು. ತಾಲೂಕಿನ ಇಟ್ನಾ ಗ್ರಾಮದಲ್ಲಿ ನರೇಗಾ ಕೂಲಿ ಕಾರ್ಮಿಕರಿಗೆ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ



ಶಿಬಿರದಲ್ಲಿ ಮಾತನಾಡಿದ ಅವರು, ಸರ್ಕಾರದ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಬಿಪಿ, ಶುಗರ್ ಇನ್ನಿತರ ತಪಾಸಣೆ ಮಾಡಿಸಿಕೊಳ್ಳಿ, ಆ ಮೂಲಕ ನಿಮ್ಮ ಹಾಗೂ ಕುಟುಂಬದ ಸದಸ್ಯರ ಆರೋಗ್ಯ ಕಾಪಾಡಿಕೊಳ್ಳಿ ಎಂದರು.

ಶಿಬಿರದಲ್ಲಿ ಕೂಲಿ ಕಾರ್ಮಿಕರು, ಗ್ರಾಮಸ್ಥರು ಸೇರಿದಂತೆ 220 ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಬಿಪಿ, ಶುಗರ್ ಹೆಚ್ಚಾಗಿದ್ದ 43 ಮಂದಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಸರಗೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಳುಹಿಸಲಾಯಿತು. ಈ ವೇಳೆ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಾಗೇಂದ್ರ, ರವಿರಾಜ್, ಸಮುದಾಯ ಆರೋಗ್ಯ ಅಧಿಕಾರಿ ಮಂಜುಳಾ, ಸ್ವಯಂ ಸೇವಕರಾದ ಚಿಕ್ಕಮಾದು, ಗ್ರಾಮಸ್ಥರು ಇನ್ನಿತರರಿದ್ದರು.

ಮಳೆಯಿಂದ ಜೀವ ಹಾನಿಯಾಗದಂತೆ ಎಚ್ಚರ ವಹಿಸಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ



ತಿ.ನರಸೀಪುರ, ಮೇ 27– ತಾಲೂಕಿನಲ್ಲಿ ಮಳೆಯಿಂದ ಜೀವ ಹಾನಿಯಾಗದಂತೆ ಎಚ್ಚರ ವಹಿಸಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು.

ಪಟ್ಟಣದ ಮಿನಿ ವಿಧಾನಸೌಧ ಸಭಾಂ ಗಣದಲ್ಲಿ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಮಳೆ ಆರಂಭ ವಾಗಿದ್ದು, ಅಲ್ಲಲ್ಲಿ ಬೆಳೆ ಹಾನಿಯಾಗಿದೆ. ಮಳೆಯಿಂದಾಗುವ ಯಾವುದೇ ಹಾನಿಗೆ 48 ಗಂಟೆಯೊಳಗೆ ಪರಿಹಾರ ವಿತರಿಸ ಲಾಗುವುದು. ಮಳೆಯಿಂದ ಹಾನಿ ಗೊಳಗಾದ ಪ್ರದೇಶಗಳಿಗೆ ಕಂದಾಯ ಅಧಿಕಾರಿಗಳು, ಗ್ರಾಮಲೆಕ್ಕಿಗ, ಪಿಡಿಓ ಹಾಗೂ ಇಂಜಿನಿಯರ್‌ಗಳು ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಿದರೆ ಪರಿಹಾರ ನೀಡಲಾಗುವುದು ಎಂದರು.

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕ, ಕಳೆನಾಶಕ ದಾಸ್ತಾನಿದ್ದು ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಿದ್ದೇವೆ. ಜೊತೆಗೆ ಕೃತಕ ಅಭಾವ ಸೃಷ್ಟಿಸುವವರ ಬಗ್ಗೆ ಅಧಿಕಾರಿಗಳು ಜಾಗ್ರತೆ ಯಿಂದ ಇರುವಂತೆ ತಿಳಿಸಿದ್ದೇವೆ. ಈ ಸಂಬಂಧ ರೈತರ ಸಭೆ ಕರೆದು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಳೆಯಿಂದ ಸುಮಾರು 60 ಹೆಕ್ಟೇರ್ ಬೆಳೆ ಹಾನಿಗೊಳಗಾಗಿರುವ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ತೋಟಗಾರಿಕೆ ಹಾಗೂ ಕಂದಾಯಾಧಿಕಾರಿಗಳು ಪರಿಶೀಲಿಸಿ ವರದಿ ನೀಡಬೇಕು. ಒಂದು ಹೆಕ್ಟೇರ್‌ಗೆ 17 ಸಾವಿರ, ವಾರ್ಷಿಕ ಬೆಳೆಗೆ 22 ಸಾವಿರ ರೂ. ಪರಿಹಾರ ನೀಡಲಾಗುವುದು ಎಂದರು.

ಗ್ರಾಮೀಣ ಭಾಗದಲ್ಲಿ ಕಾರ್ಯಪಡೆ ರಚಿಸಲಾಗಿದೆ. ತಾಲೂಕಿನಲ್ಲಿ 16 ಮನೆಗಳು ಹಾನಿಗೊಳಗಾಗಿದ್ದು, ವರದಿ ಪಡೆದು ಪರಿಹಾರ ವಿತರಣೆಗೆ ಕ್ರಮ ವಹಿಸಲಾಗುವುದು. ಅಧಿಕಾರಿಗಳು ಕೇಂದ್ರ ಸ್ಥಳದಲ್ಲಿದ್ದು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸರ್ಕಾರದ ಯೋಜನೆಗಳು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ಪ್ರವೃತ್ತ ರಾಗುವಂತೆ ಸೂಚಿಸಿದ ಅವರು ಸಭೆಗೆ ಗೈರಾದವರಿಗೆ ನೋಟೀಸ್ ನೀಡುವಂತೆ ತಹಸೀಲ್ದಾರ್‌ಗೆ ತಿಳಿಸಿದರು.

ಚಿರತೆ ಹಾವಳಿಗೆ ಸಂಬಂಧಿಸಿದಂತೆ ಗ್ರಾಪಂ ಹಂತದಲ್ಲಿ ಅಗತ್ಯ ಎಚ್ಚರಿಕಾ ಕ್ರಮ ತೆಗೆದುಕೊಳ್ಳುವಂತೆ ಅರಣ್ಯಾಧಿಕಾರಿಗಳು, ತಾಪಂ ಇಓಗೆ ಸೂಚಿಸಿದರು. ಮಳೆ ವೇಳೆ ರಸ್ತೆಗೆ ಮರ ಬಿದ್ದು ಸಂಚಾರಕ್ಕೆ ತೊಂದರೆಯಾದರೆ ಮರಗಳ ತೆರವಿಗೆ ಕ್ರಮ ವಹಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು. ಸಭೆಯಲ್ಲಿ ತಹಸೀಲ್ದಾರ್ ಗೀತಾ, ಇನ್‌ಸ್ಪೆಕ್ಟರ್ ಮಹೇಶ್, ತೋಟಗಾರಿಕೆ ಎಡಿ ಶಶಿಕಲಾ, ಕೃಷಿ ಇಲಾಖೆ ರಾಘವೇಂದ್ರ, ಪುರಸಭಾ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ನರೇಗಾ ಎಡಿ ಶಶಿಕುಮಾರ್, ಬಿಇಓ ಶ್ರೀನಿವಾಸ್, ಅಗ್ನಿಶಾಮಕ ದಳದ ಅಧಿಕಾರಿಗಳು ಸೇರಿದಂತೆ ಇತರರಿದ್ದರು.

ಶತಾಯುಷಿ ಚೆನ್ನಮ್ಮ ನಿಧನ



ಸರಗೂರು, ಮೇ 27– ತಾಲೂಕಿನ ಶಿವಪುರ ಗ್ರಾಮದ ನಿವಾಸಿ ಚೆನ್ನಮ್ಮ (105) ಶುಕ್ರವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗವಿಸಿದ್ದೇಗೌಡ



ತಿ.ನರಸೀಪುರ, ಮೇ 27– ತಾಲೂಕಿನ ಎಸ್.ಕೆಬ್ಬೆಹುಂಡಿ ನಿವಾಸಿ ಗವಿಸಿದ್ದೇಗೌಡ(70) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಭಾನುವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಈಗಿನಿಂದಲೇ ಪಕ್ಷ ಸಂಘಟನೆ

● ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಕವೀಶ್‌ಗೌಡ ನಿರ್ಧಾರ ● ಬಿಜೆಪಿ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಕೆ



ಮೈಸೂರಿನ ನಿವೇದಿತಾನಗರದ ಸಭಾಂಗಣವೊಂದರಲ್ಲಿ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಿಗೆ ಕೃತಜ್ಞತಾ ಸಭೆಯಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀವತ್ಸ ಅವರನ್ನು ಅಭಿನಂದಿಸಲಾಯಿತು. ವಿ.ಕವೀಶ್‌ಗೌಡ, ಗೆಜ್ಜಗಳ್ಳಿ ಮಹೇಶ್, ಬಿ.ಎಂ.ರಘು ಇನ್ನಿತರ ಮುಖಂಡರು ಉಪಸ್ಥಿತರಿದ್ದರು.


ಮೈಸೂರು, ಮೇ 27(ಎಸ್‌ಬಿಡಿ)– ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಈಗಿನಿಂದಲೇ ತಯಾರಾಗ ಬೇಕಿದ್ದು, ಈ ನಿಟ್ಟಿನಲ್ಲಿ ನಾನು ಪಕ್ಷ ಸಂಘಟನೆಗೆ ಬದ್ಧನಾಗಿದ್ದೇನೆ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ವಿ.ಕವೀಶ್‌ಗೌಡ ಹೇಳಿದರು.

ಮೈಸೂರಿನ ನಿವೇದಿತಾನಗರದ ಸೆಲೆಬ್ರೇಷನ್ಸ್ ಕನ್ವೆನ್ಷನ್ ಸೆಂಟರ್ ಹಾಲ್‌ನಲ್ಲಿ ಶನಿವಾರ ನಡೆದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಿಗೆ ಕೃತಜ್ಞತಾ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರು ಚುನಾವಣೆಯಲ್ಲಿ ಬದ್ಧತೆಯಿಂದ ಶ್ರಮಿಸಿದ್ದಾರೆ. ನನಗೆ ಆತ್ಮವಿಶ್ವಾಸ ತುಂಬುವುದರ ಜೊತೆಗೆ ನನ್ನ ಪರವಾಗಿ ಮನೆ ಮನೆಗೆ ತೆರಳಿ ಮತ ಯಾಚಿಸಿದ್ದಾರೆ. ಮುಖಂಡರು, ಕಾರ್ಯಕರ್ತರು ಸೇರಿದಂತೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೆ ಹಾಗೂ ಮತದಾರ ಬಂಧುಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಜಿಲ್ಲಾ ಪಂಚಾಯಿತಿ ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಲೋಕಸಭಾ ಚುನಾವಣೆ ಸೇರಿದಂತೆ ಮುಂಬರುವ ಎಲ್ಲಾ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸಿ ಪಕ್ಷ ಸಂಘಟಿಸಲು ನಾನು ಬದ್ಧನಾಗಿದ್ದೇನೆ ಎಂದು ತಿಳಿಸಿದರು. ಬಿಜೆಪಿ ರಾಜ್ಯ ಕಾರ್ಯದರ್ಶಿಯೂ ಆದ ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ ಮಾತನಾಡಿ, ಇಂದಿನ ಸೋಲು ಮುಂದಿನ ಗೆಲುವಿಗೆ ಮೆಟ್ಟಿಲಾಗಬೇಕು. ಕಾರ್ಯಕರ್ತರು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಪರಿಸ್ಥಿತಿ ಬದಲಾಗಿ ಒಳ್ಳೆಯ ದಿನಗಳು ಬಂದೇ ಬರುತ್ತವೆ. ಯಾವುದೇ ಕಾರಣಕ್ಕೂ ಮತದಾರದಿಂದ ದೂರ ಉಳಿಯದೆ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಬೇಕು ಎಂದು ಮನವಿ ಮಾಡಿದರು.


ಈ ವೇಳೆ ಅನೇಕ ಕಾರ್ಯಕರ್ತರು ಮಾತನಾಡಿ, ಚಾಮುಂಡೇಶ್ವರಿ ಕ್ಷೇತ್ರದ ಜನ ಈ ಬಾರಿ ಬಿಜೆಪಿಗೆ ಅತ್ಯಧಿಕ ಮತಗಳನ್ನು ನೀಡಿದ್ದಾರೆ. ಮುಂಚಿತವಾಗಿ ಅಭ್ಯರ್ಥಿಯನ್ನು ಘೋಷಣೆ ಮಾಡಿದ್ದರೆ ಮತದಾರರನ್ನು ಅನೇಕ ಬಾರಿ ಸಂಪರ್ಕಿಸಿ, ಚುನಾವಣೆಯಲ್ಲಿ ಗೆಲ್ಲಬಹುದಿತ್ತು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀವತ್ಸ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು, ಜಿಲ್ಲಾ ಕಾರ್ಯ ದರ್ಶಿಗಳಾದ ವಾಣೀಶ್ ಕುಮಾರ್, ಸೋಮಸುಂದರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಜಗದೀಶ್, ಕೆ.ಎಂ.ಶಂಕರ್, ಶಂಕರ್, ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಶ್ವಾನದ ಸ್ವಾಮಿನಿಷ್ಠೆಗೆ ಮಾರು ಹೋದ ಜನ!



ಉಡುಪಿ, ಮೇ 27– ನಿಷ್ಠೆಗೆ ಶ್ವಾನವೇ ಮಾದರಿ. ಒಂದು ತುತ್ತು ಅನ್ನ ಹಾಕಿದವರ ಕೊನೆವರೆಗೂ ನೆನೆಸುತ್ತದೆ. ನೋಡಿದಾಕ್ಷಣ ತನ್ನದೇ ರೀತಿಯಲ್ಲಿ ಕೃತಜ್ಞತೆ ವ್ಯಕ್ತಪಡಿಸುತ್ತದೆ. ಹೋದಲೆಲ್ಲಾ ಹಿಂಬಾಲಿಸುತ್ತಾ ಸ್ವಾಮಿನಿಷ್ಠೆ ಮೆರೆಯುತ್ತದೆ. ಉಡುಪಿಯಲ್ಲಿ ನಡೆದ ಇಂತಹದ್ದೇ ಒಂದು ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಉಡುಪಿ ಹೊರವಲಯದ ಅಮ್ಮುಂಜೆ ರಸ್ತೆಯ ಸರಸ್ವತಿ ನಗರದ ಮನೆಯೊಂದರಲ್ಲಿ ಸಾಕಿರುವ ಶ್ವಾನ, ನೆಟ್ಟಿಗರ ಮೆಚ್ಚುಗೆಗೆ ಪಾತ್ರವಾಗಿದೆ. ಮಾಲೀಕನನ್ನು ಬಿಟ್ಟು ತನ್ನನ್ನು ಹೆಚ್ಚು ಪ್ರೀತಿಯಿಂದ ಸಲಹಿದ ಮನೆ ಕೆಲಸದಾಕೆಗೆ ನಿಷ್ಠೆ ತೋರಿದೆ. ಮನೆ ಕೆಲಸದಾಕೆ ದೈನಂದಿನ ಕೆಲಸ ಮುಗಿಸಿ, ತನ್ನ ಮನೆಗೆ ತೆರಳಲು ಬಸ್ಸನ್ನೇರಿದಾಗ ಹಿಂಬಾಲಿಸಿಕೊಂಡು ಬಂದ ಶ್ವಾನವೂ ಬಸ್ ಹತ್ತಿದೆ. ಅದನ್ನು ಕೆಳಗಿಳಿಸಲು ನಿರ್ವಾಹಕ ಎಷ್ಟೇ ಪ್ರಯತ್ನಪಟ್ಟರೂ ಪ್ರಯೋಜನವಾಗಿಲ್ಲ. ಆ ಮಹಿಳೆ ಎಷ್ಟು ಬಾರಿ ಸೀಟ್ ಬದಲಿಸಿದರೂ ಶ್ವಾನ ಅವರ ಬಳಿ ಹೋಗಿ ನಿಲ್ಲುತ್ತಿತ್ತು. ಕೊನೆಗೆ, ಬಸ್ ನಿರ್ವಾಹಕ ಮಹಿಳೆಯನ್ನೇ ಬಸ್‌ನಿಂದ ಇಳಿಯುವಂತೆ ಮನವಿ ಮಾಡಿದ್ದಾರೆ. ಬಳಿಕ ಹಿಂದಿನ ಬಾಗಿಲಲ್ಲಿ ಮಹಿಳೆ ಇಳಿಯುವುದನ್ನು ಗಮನಿಸಿ ಶ್ವಾನವೂ ಬಸ್‌ನಿಂದ ಕೆಳಗಿಳಿದಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಶ್ವಾನದ ಸ್ವಾಮಿನಿಷ್ಠೆಯನ್ನು ಕಂಡು ಭಾವುಕರಾದರು.



PUBLIC NOTICE

Notice is hereby issued to the generalpublic that (1) Sri. M. B. ANAND MURTHY S/o. Late. Byrappa (2) Smt. RAJESHWARI C. W/o. Sri. M. B. Anand Murthy (3) Sri. PRADEEP KUMAR M.A. S/o. Sri. M. B. Anand Murthy and (4) Sri. SUDEEP KUMAR M.A. S/o. Sri. M. B. Anand Murthy, all are residing at No. 200, 5ty Cross, (Kyathamaranahalli Layout, Nazarbad Mohalla, Mysuru have agreed to sell the Schedule Property to my client/s. Any person/s asserting any right, title, Interest or claim, pending litigation or demand of any nature in or upon the schedule property or any part thereof the same may be brought to the notice of the undersigned along with documentary evidence at L-50/2A, 1st Floor, Ashoka Road, Mysuru -570 001 within (20) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

All that piece and parcel of the dry land bearing survey No. 57, measuring 31 guntas, situated at Devanuru village, Kasaba Hobli, Mysuru Taluk and bounded on.

East by : Road & Masjid
West by : Bandi Daari & private property
North by : Property belonging to Parashivamurthy
South by : Private Property

Sd/- M. Sanjay Jain, BBM, LLB, CCL, CMJFS
Advocate
No.L50/2A, First floor, Ashoka Road, Mysuru - 570 001
Call : 93414 64636
Date : 29.4.2023, Place :Mysore



ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 05–2023–ಎಡಿಇಎನ್–3ಎಸ್‌ಟಿಎನ್–ಟಿಇಎಲ್‌ಇ ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗದ ಚಿಕ್ಕಮಗಳೂರು, ಅರಸೀಕೆರೆ ಮತ್ತು ತಿಪಟೂರು ನಿಲ್ದಾಣಗಳಲ್ಲಿ ಅಮೃತ್ ಭಾರತ್ ನಿಲ್ದಾಣಕ್ಕಾಗಿ ಟೆಲಿಕಾಂ ವ್ಯವಸ್ಥೆಗಳು.	ರೂ. 3,66,42,853.50

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22–06–2023 ರಂದು 15:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಯೋಜನಾ ವ್ಯವಸ್ಥಾಪಕರು / ಎಸ್&ಟಿ ಗತಿ ಶಕ್ತಿ / ಮೈಸೂರು

ಪಿಯುಬಿ/118/ಎಎಎಸ್/ಜಿಆರ್‌ಬಿ/ಎಸ್‌ಡಬ್ಲ್ಯುಆರ್/2023–24

S.W.Railways SWRRLY SWRRLY

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ವಿವೇಕಾನಂದ ಶಿಕ್ಷಣ ಸಂಸ್ಥೆ –ಬನ್ನೂರು

ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ

ಶಿಕ್ಷಕರು ಬೇಕಾಗಿದ್ದಾರೆ

1	ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕಕರು (ಆಂಗ್ಲ ಮಾಧ್ಯಮ)	ಡಿ.ಇಡಿ, ಬಿ.ಎ, ಬಿ.ಇಡಿ, ಎಂ.ಎ, ಕನ್ನಡ, ಇಂಗ್ಲಿಷ್, ಹಿಂದಿ, ಸಮಾಜವಿಜ್ಞಾನ ಬಿ.ಎಸ್ಸಿ, ಎಂ.ಎಸ್ಸಿ, ಬಿ.ಇಡಿ ಗಣಿತ (PCM), ವಿಜ್ಞಾನ (CBZ)
2	ವಾರ್ಡನ್‌ಗಳು	ಬಿ.ಎ, ಬಿಎಸ್ಸಿ, ಎಂ.ಎ, ಬಿ.ಇಡಿ
3	ಕಾಲೇಜು ಉಪನ್ಯಾಸಕರು	ಎಂ.ಎ, ಬಿ.ಇಡಿ, ಕನ್ನಡ ಮತ್ತು ಇಂಗ್ಲಿಷ್,
4	ವಾಹನ ಚಾಲಕರು	ಲೈಸೆನ್ಸ್ ಪಡೆದು ಅನುಭವವಿರುವವರು

5ನೇ ತರಗತಿಯಿಂದ ಪಿಯುಸಿ ವರಗೆ ಹಾಸ್ಟೆಲ್ ಸೌಲಭ್ಯವಿರುತ್ತದೆ

9632038206, 7829445993, 9341388404



ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, ನಜರಬಾದ್ ಮೊಹಲ್ಲಾ, ಸಿದ್ದಾರ್ಥ ಬಡಾವಣೆ, ಶಾಂತಿ ಮಾರ್ಗ, ಮನೆ ನಂ. 65/ಬಿ ರಲ್ಲಿ ವಾಸವಾಗಿರವ ನಮ್ಮ ಕಕ್ಷಿದಾರರಾದ ಶ್ರೀ ಬಿ. ಬಾಲಚಂದ್ರ ಡೋಂಗ್ರೆ ಮತ್ತು ಶ್ರೀಮತಿ ವೀಣಾ ಬಿ. ಡೋಂಗ್ರೆ ಇವರ ಇರಾದೆಯ ಮೇರೆಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಬೆಂಗಳೂರು ಸಿಟಿ, ಜಯಪ್ರಕಾಶ್ ಬಡಾವಣೆ, 3ನೇ ಹಂತ, 3ನೇ ಕ್ರಾಸ್, ಮನೆ ನಂ. ಸಿಎ1/ಬಿ ರಲ್ಲಿ ವಾಸವಾಗಿರುವ ಲೇಟ್ ಬಿ.ಕೃಷ್ಣ ಮತ್ತು ಲೇಟ್ ಸರೋಜಮ್ಮ ರವರ ಮಕ್ಕಳಾದ

1. ಮೊದಲನೇ ಮಗ ಲೇಟ್ ಕೆ.ಶಿವಕುಮಾರ ರವರ ಧರ್ಮಪತ್ನಿ ಸುಮಾರು 57 ವರ್ಷ ವಯಸ್ಸುಳ್ಳ ಶ್ರೀಮತಿ ಶಾರದ ಹಾಗೂ ಇವರ ಮಕ್ಕಳಾದ 1ನೇ ಮಗ ಸುಮಾರು 37 ವರ್ಷ ವಯಸ್ಸುಳ್ಳ ಶ್ರೀ ಎಸ್. ಚೇತನ್, 2ನೇ ಮಗಳಾದ ಸುಮಾರು 33 ವರ್ಷ ವಯಸ್ಸುಳ್ಳ ಶ್ರೀಮತಿ ಚೈತ್ರ ಎಸ್.
2. 2ನೇ ಮಗ ಸುಮಾರು 63 ವರ್ಷ ವಯಸ್ಸುಳ್ಳ ಶ್ರೀ ನಂಜುಂಡಮೂರ್ತಿ ಕೆ.
3. 3ನೇ ಮಗ ಸುಮಾರು 61 ವರ್ಷ ವಯಸ್ಸುಳ್ಳ ಶ್ರೀ ರವಿಕುಮಾರ್ ಕೆ.
4. 4ನೇ ಮಗ ಸುಮಾರು 56 ವರ್ಷ ವಯಸ್ಸುಳ್ಳ ಶ್ರೀ ರಮೇಶ್ ಕೆ.

ರವರುಗಳಿಂದ ಕ್ರಯಕ್ಕೆ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ವಗೈರೆಗಳಿದ್ದಲ್ಲಿ ಈ ದಿನದಿಂದ 15 ದಿನಗಳ ಒಳಗೆ ನಮ್ಮ ಕಕ್ಷಿದಾರರಿಗಾಗಲೀ, ನಮ್ಮ ಕಚೇರಿಗಾಗಲೀ ಸೂಕ್ತ ದಾಖಲಾತಿಗಳೊಂದಿಗೆ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಮ್ಮ ಕಕ್ಷಿದಾರರು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆ. ನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್: ಮೈಸೂರು ಸಿಟಿ, ನಜರಬಾದ್ ಮೊಹಲ್ಲಾ. ಟಿ.ನರಸೀಪುರ ರಸ್ತೆ ಬಡಾವಣೆ (ಹಾಲಿ ಸಿದ್ಧಾರ್ಥ ನಗರ ಬಡಾವಣೆ) 2ನೇ ಹಂತ, ಮನೆ ಸಂಖ್ಯೆ 66/ಬಿ. ಪೂರ್ವಕ್ಕೆ : ನಿವೇಶನ ಸಂಖ್ಯೆ 67/ಬಿ, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 65/ಬಿ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 25/ಬಿ. ಈ ಮಧ್ಯ ಇರುವ ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 50 ಅಡಿ ಒಟ್ಟು 1500 ಚದರಡಿಗಳುಳ್ಳ ಜಾಗ ಮತ್ತು ಇದರಲ್ಲಿ ಕಟ್ಟಿರುವ 4.75 ಚದರ ಕೆಂಪುಗಾರೆ ನೆಲದಿಂದ ಕೂಡಿದ ಆರ್.ಸಿ.ಸಿ, ವಾಸದ ಮನೆ ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸೌಲಭ್ಯವುಳ್ಳ ಪೂರ್ತಾ ಸ್ವತ್ತು.

ಸಹಿ/– ಶಶಿಕಾಂತ್ ಎಂ.ಎಸ್ಸಿ., ಎಲ್.ಎಲ್.ಬಿ.,ವಕೀಲರು
#95, 9ನೇ ಕ್ರಾಸ್, ಸಿದ್ದಲಿಂಗ ನಗರ, ನಿರ್ಮಿತಿ ಕೇಂದ್ರದ ಹತ್ತಿರ, ಉತ್ತರ ಬೋಗಾದಿ, ಮೈಸೂರು.

ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,

ಹೆಳವರಹುಂಡಿ

ಸಂಖ್ಯೆ:ಆಲಗೂಡು:ಪ್ರಾ.ಕೃ.ಪ.ಸ.ಸಂ.ನಿ.ಹೆಳವರಹುಂಡಿ/ಮಹ/2/2023–24 ದಿನಾಂಕ: 23–05–2023

ಹರಾಜು ಪ್ರಕಟಣೆ

ಮೇಲ್ಕಂಡ ಸಹಕಾರ ಸಂಘದ ಆವರಣದಲ್ಲಿ ಹೊಸದಾಗಿ 12x12 ಅಳತೆ ವಿಸ್ತೀರ್ಣದ 04 (ನಾಲ್ಕು) ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ನೀಡಲು ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಲಾಗಿದ್ದು ಸದರಿ ವಾಣಿಜ್ಯ ಮಳಿಗೆಯನ್ನು ದಿನಾಂಕ: 06–06–2023 ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಸಂಘದ ಆವರಣದಲ್ಲಿ ಆಡಳಿತ ಮಂಡಳಿಯ ಸಮ್ಮುಖದಲ್ಲಿ ಹರಾಜು ನಡವಳಿ ಪ್ರಕ್ರಿಯೆ ಮಾಡಲಾಗುವುದು. ಇಚ್ಚೆಯುಳ್ಳವರು ದಿನಾಂಕ: 05–06–2023ರ ಸಾಯಂಕಾಲ 5 ಗಂಟೆಯೊಳಗೆ ಸಂಘಕ್ಕೆ ಖುದ್ದಾಗಿ ಬಂದು ಠೇವಣಿ ಹಣ ರೂ.5000–00 ಗಳನ್ನು ತಮ್ಮ ಆಧಾರ್ ಕಾರ್ಡ್ ಹಾಗೂ ರೇಷನ್ ಕಾರ್ಡ್ ಪ್ರತಿಯೊಂದಿಗೆ ಪಾವತಿಸಿ ಬಿಡ್‌ನಲ್ಲಿ ಭಾಗವಹಿಸಲು ಕೋರಿದೆ. ಹಾಗೂ ಸಂಘಕ್ಕೆ ಸುಸ್ತಿದಾರರಾಗಿರುವ ಕುಟುಂಬವರ್ಗದವರು ಬಿಡ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಷರತ್ತುಗಳು ಅನ್ವಯಿಸುತ್ತವೆ ಹಾಗೂ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಹೆಳವರಹುಂಡಿ

ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಸಂಸ್ಥೆ

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಮತ್ತು ಎನ್.ಸಿ.ವಿ.ಟಿ, ದೆಹಲಿಯಿಂದ ಸಂಯೋಜನೆ ಪಡೆದಿದೆ)
ವಿಶ್ವೇಶ್ವರಯ್ಯ ಎಜುಕೇಷನಲ್ ಟ್ರಸ್ಟ್(ರಿ) ಇವರ ಆಡಳಿತಕ್ಕೊಳಪಟ್ಟಿದೆ
ನಂ:19/2A9, ಬೋಗಾದಿ ಮುಖ್ಯ ರಸ್ತೆ, ಎರಡನೇ ಹಂತ ಬೋಗಾದಿ, ಮೈಸೂರು–26
(ಪ್ರಗತಿ ಎಲೈಟ್ ಪಬ್ಲಿಕ್ ಸ್ಕೂಲ್ ಹಿಂಭಾಗ) ಫೋನ್: 0821-2542794

2023ನೇ ಸಾಲಿನ ಪ್ರವೇಶ ಪ್ರಕಟಣೆ

ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್(NCVT)ನಿಂದ ಮಾನ್ಯತೆ ಪಡೆದಿರುವ ಈ ಕೆಳಕಂಡ ವೃತ್ತಿಗಳ ಅನುದಾನಿತ ಘಟಕಗಳಿಗೆ 2023ನೇ ಸಾಲಿನಲ್ಲಿ ಪ್ರವೇಶ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್(Online) ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಲಭ್ಯವಿರುವ ವೃತ್ತಿಗಳು:

1. ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ 2. ಫಿಟ್ಟರ್

ಅರ್ಹತೆ : ಎಸ್.ಎಸ್.ಎಲ್.ಸಿ ತೇರ್ಗಡೆ (S.S.L.C Pass)

ವೆಬ್‌ಸೈಟ್: www.cite.karnataka.gov.in

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕ: 24–05–2023 ರಿಂದ 07–06–2023ರ ವರೆಗೆ ಅವಕಾಶವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಬೆಳಗ್ಗೆ 10:00 ರಿಂದ ಸಂಜೆ 5:00ರ ವರೆಗೆ ಭೇಟಿ ಮಾಡಲು ತಿಳಿಸಲಾಗಿದೆ.
ಆಡಳಿತ ಮಂಡಳಿ ಸೀಟ್‌ಗಳಿಗೆ ನೇರ ಪ್ರವೇಶ ಲಭ್ಯವಿರುತ್ತದೆ.

ಅಧ್ಯಕ್ಷರು	ಗೌ.ಕಾರ್ಯದರ್ಶಿಗಳು	ಆಡಳಿತಾಧಿಕಾರಿಗಳು	ಪ್ರಾಂಶುಪಾಲರು
ಶ್ರೀ. ಕೆ.ಎ.ನಾಗಪ್ರಸಾದ್	ಶ್ರೀ ಆರ್.ಎಸ್. ಕುಮಾರ್	ಶ್ರೀ ಹೆಚ್.ಎ.ಪ್ರಭಾಕರ	ಶ್ರೀ ವಿ.ಎಲ್.ವೆಂಕಟೇಶಮೂರ್ತಿ

